# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ
ಶನಿವಾರ, ಜೂನ್ 22, 2024

ಸಂಪುಟ : 51 ಸಂಚಿಕೆ : 39 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com






# ಮನಸ್ಸೆಂಬ ಮರ್ಕಟಕ್ಕೆ ಯೋಗದಿಂದ ಕಡಿವಾಣ

## ಯೋಗಾಭ್ಯಾಸ ಆಚರಣೆಗಷ್ಟೇ ಸೀಮಿತವಾಗದೆ ನಿತ್ಯದ ಅಭ್ಯಾಸವಾಗಬೇಕು: ತರಳಬಾಳು ಶ್ರೀ

ದಾವಣಗೆರೆ, ಜೂ.21-ಮರ್ಕಟದಂತಹ ಮನಸ್ಸಿಗೆ ಕಡಿವಾಣ ಹಾಕಲು ಯೋಗ, ಧ್ಯಾನ ಅತ್ಯಗತ್ಯ ಎಂದು ಸಿರಿಗೆರೆ ತರಳಬಾಳು ಜಗದ್ಗುರು ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಪ್ರತಿಪಾದಿಸಿದರು.

ನಗರದ ಹೈಸ್ಕೂಲ್ ಮೈದಾನದಲ್ಲಿ ಶುಕ್ರವಾರ ಮುಂಜಾನೆ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಯೋಗದ ಮಹತ್ವ ತಿಳಿಸಿಕೊಟ್ಟರು.

ಇತ್ತೀಚಿನ ದಿನಗಳಲ್ಲಿ ಯುವ ಸಮೂಹ ದಾರಿ ತಪ್ಪಲು, ಹಿಂಸಾತ್ಮಕ ಕೃತ್ಯಗಳು ಹೆಚ್ಚಾಗಲು ಮನಸ್ಸೇ ಕಾರಣ. ಮನಸ್ಸು ಹತೋಟಿಯಲ್ಲಿರದಿದ್ದರೆ ಇಂತಹ ಘಟನೆಗಳು ನಡೆಯುತ್ತವೆ. ಯೋಗ, ಧ್ಯಾನದಿಂದ ಮಾತ್ರ ಮನಸ್ಸನ್ನು ಹತೋಟಿ ಯಲ್ಲಿಟ್ಟುಕೊಳ್ಳಬಹುದು ಎಂದರು.

ಶರೀರದಲ್ಲಿರುವ ಇಂದ್ರಿಯಗಳು ಮನಸ್ಸಿನ ಹತೋಟಿಯಲ್ಲಿದ್ದಾಗ ಮಾತ್ರ ಸಂತೋಷ ಅನುಭವಿಸಲು ಸಾಧ್ಯ. ಮನಸ್ಸು ಹಾವು ಶರೀರ, ಹಾವಿನ ಬುಟ್ಟಿ ಇದ್ದಂತೆ. ಬುಟ್ಟಿಯಲ್ಲಿರುವ ಹಾವು ಯಾವಾಗ ಕಚ್ಚುತ್ತದೋ ಗೊತ್ತಿಲ್ಲ. ಹಾವಾಡಿಗ ಹೇಗೆ ಹಾವಿನ ತಲೆಗೆ ಏಟು ಕೊಟ್ಟು ಸುಮ್ಮನಿರಿಸುತ್ತಾನೋ ಹಾಗೆ ನಾವು ಮನಸ್ಸನ್ನು ನಿಯಂತ್ರಿಸಬೇಕು ಎಂದರು.

ನಾಯಿ ತನ್ನ ಬಾಲ ಅಲ್ಲಾಡಿಸುವುದು ಸಾಮಾನ್ಯ ಸಂಗತಿ. ಆದರೆ ಬಾಲವೇ ನಾಯಿಯನ್ನು ಅಲ್ಲಾಡಿಸಬಾರದು. ಹಾಗೆಯೇ ಮನಸ್ಸು ನಮ್ಮ ನಿಯಂತ್ರಣದಲ್ಲಿರಬೇಕೇ ಹೊರತು, ಮನಸ್ಸು ನಮ್ಮನ್ನು ಆಟ ಆಡಿಸಲು ಬಿಡಬಾರದು ಎಂದರು. ನೀರಿನಿಂದಲೇ ಕೆಸರು. ಆದರೆ ಅದೇ ಕೆಸರನ್ನು ಸ್ವಚ್ಛಗೊಳಿಸಲು ನೀರು ಬೇಕು. ಹಾಗೆಯೇ ನಮ್ಮ ಬಂಧನಕ್ಕೂ ಮುಕ್ತಿಗೂ ಮನಸ್ಸೇ ಕಾರಣ. ನಿತ್ಯವೂ ಪೂಜೆ, ಧ್ಯಾನ ಮಾಡುವುದರಿಂದ ಮನಸ್ಸು ಹತೋಟಿಯಲ್ಲಿರುತ್ತದೆ ಎಂಬುದನ್ನು ವಚನಗಳಲ್ಲೂ ಹೇಳಲಾಗಿದೆ ಎಂದು 'ಮನವೇ ಸರ್ಪ, ತನು ಹೇಳಿಗೆ' ವಚನದ ಅರ್ಥ ವಿವರಿಸಿದರು.

ಯೋಗ ಎಂದರೆ ಕೇವಲ (2ನೇ ಪುಟಕ್ಕೆ)

### ಆರೋಗ್ಯವಂತ ಜೀವನಕ್ಕಾಗಿ ಯೋಗ ಮುಖ್ಯ: ಡಾ.ಪ್ರಭಾ

**ಆಧುನಿಕ ಜೀವನ ಶೈಲಿಯಿಂದಾಗಿ, ರಕ್ತದೊತ್ತಡ, ಸಕ್ಕರೆ ಕಾಯಿಲೆ, ಕ್ಯಾನ್ಸರ್ ನಂತಹ ಕಾಯಿಲೆಗಳು ಹೆಚ್ಚಾಗುತ್ತಿವೆ. ಇವುಗಳಿಂದ ದೂರವಿರಲು ನಿರಂತರ ಯೋಗಾಭ್ಯಾಸ ಬಹಳ ಮುಖ್ಯ ಎಂದು ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.**

**ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಏಕಾಗ್ರತೆ ಕೊರತೆ, ಒತ್ತಡ, ವ್ಯಸನಗಳಿಗೆ ತುತ್ತಾಗುವುದು ಮುಖ್ಯವಾಗಿ ಮೊಬೈಲ್ ಅಡಿಕ್ಷನ್ ತಡೆಗೆ ಯೋಗ ಪರಿಣಾಮಕಾರಿ. ಮಕ್ಕಳಿದ್ದಾಗಲೇ ಯೋಗದ ಮಹತ್ವ ತಿಳಿಸಿಕೊಡುವ ಅಗತ್ಯವಿದೆ ಎಂದವರು ಹೇಳಿದರು.**

### ಸಂಬಂಧ ಕೆಡಿಸುವ ಮೊಬೈಲ್ ಎಂಬ ಕರ್ಣ ಪಿಶಾಚಿ



**ಸಂಸ್ಕೃತದಲ್ಲಿ ಮೊಬೈಲ್‌ಗೆ ಪರ್ಯಾಯ ಪದವಿಲ್ಲ. ಆದರೆ ಅದನ್ನು ಕರ್ಣ ಪಿಶಾಚಿ ಎನ್ನುಬಹುದು. ಮೊಬೈಲ್‌ನಿಂದ ಇಂದು ವೈವಾಹಿಕ ಸಂಬಂಧಗಳು ಹಾಳಾಗುತ್ತಿವೆ. ಯುವ ಸಮೂಹ ದಾರಿ ತಪ್ಪುತ್ತಿದೆ. ಆದರೆ ಇದಕ್ಕೆ ಮೊಬೈಲ್ ಕಾರಣವಲ್ಲ. ನಮ್ಮ ಮನಸ್ಸೇ ಕಾರಣ ಎಂದು ತರಳಬಾಳು ಶ್ರೀಗಳು ಹೇಳಿದರು.**

**ಸಿರಿಗೆರೆ ಸದ್ಧರ್ಮ ನ್ಯಾಯ ಪೀಠಕ್ಕೆ ಅನೇಕ ದೂರುಗಳು ಬರುತ್ತವೆ. ಅವುಗಳಲ್ಲಿ ಪತಿ-ಪತ್ನಿ ಪರಸ್ಪರ ಅನುಮಾನದಿಂದ ರಾತ್ರಿ ಮೊಬೈಲ್ ಚೆಕ್ ಮಾಡುವ ದೂರುಗಳೂ ಇರುತ್ತವೆ. ಕೆಲವೊಮ್ಮೆ 'ನೀವೇ ಮೊಬೈಲ್ ನೋಡಿ ಬುದ್ದಿ' ಎಂದು ನಮ್ಮ ಬಳಿ ಮೊಬೈಲ್** (2ನೇ ಪುಟಕ್ಕೆ)

# ಮತ್ತೆ ಡಿಸಿಎಂ ಬೇಡಿಕೆ

ಬೆಂಗಳೂರು, ಜೂ. 21 - ಲೋಕಸಭಾ ಚುನಾವಣಾ ಪ್ರಕ್ರಿಯೆ ಮುಗಿಯುತ್ತಿದ್ದಂತೆ ಮೂರು ಉಪಮುಖ್ಯಮಂತ್ರಿಗಳ ಬೇಡಿಕೆ ಮತ್ತೆ ಮುನ್ನೆಲೆಗೆ ಬಂದಿದೆ.

ಕರ್ನಾಟಕದಲ್ಲಿ ಪಕ್ಷ ಅಧಿಕಾರದಲ್ಲಿದ್ದರೂ ಚುನಾವಣೆಯಲ್ಲಿ ಆದ ಹಿನ್ನಡೆಯನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೆಗಲಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಬಲಿಗರು ಹಾಕಿದ್ದಾರೆ.

ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಹೆಚ್ಚುವರಿ ಉಪಮುಖ್ಯಮಂತ್ರಿಗಳ ಅಗತ್ಯವಿದೆ ಎಂದಿದ್ದಾರೆ.

**ಹೆಚ್ಚುವರಿ ಉಪಮುಖ್ಯಮಂತ್ರಿಗಳ ಅಗತ್ಯವಿದೆ ಎಂದ ಸತೀಶ್ ಜಾರಕಿಹೊಳಿ**

ಈ ಬಗ್ಗೆ ಪಕ್ಷದ ವರಿಷ್ಠರು, ಮುಖ್ಯಮಂತ್ರಿ ಹಾಗೂ ಸಾರ್ವಜನಿಕವಾಗಿ ಚರ್ಚೆಯ ಅಗತ್ಯವಿದೆ, ಚುನಾವಣಾ ಸೋಲಿನಿಂದ ಸರ್ಕಾರದಲ್ಲಿ ಯಾವುದೇ ಬದಲಾವಣೆ ಇಲ್ಲ, ನಾಯಕತ್ವದ ಬಗ್ಗೆಯೂ ಅಪಸ್ವರ ಇಲ್ಲ ಎಂದರು.

ಆದರೆ, ಕೆಪಿಸಿಸಿಯಲ್ಲಿ ಬದಲಾವಣೆಯ ಅಗತ್ಯವಿದೆ ಎಂದು ಸತೀಶ್ ಒತ್ತಿ ಹೇಳುವುದರ ಮೂಲಕ ಶಿವಕುಮಾರ್ ಅಧಿಕಾರವನ್ನು ಮೊಟಕುಗೊಳಿಸುವಂತೆ ವರಿಷ್ಠರಿಗೆ ಪರೋಕ್ಷ ಸಂದೇಶ ನೀಡಿದ್ದಾರೆ.

ಚುನಾವಣೆಯಲ್ಲಿ ಸೋತಿದ್ದನ್ನು ಹೆಚ್ಚು ಗಂಭೀರವಾಗಿ ತೆಗೆದುಕೊಳ್ಳಬೇಕಿದೆ. ಏಕೆ ಸೋತಿದ್ದೇವೆ ಎಂಬುದು ಜನರಿಗೆ ಹಾಗೂ ಕಾರ್ಯಕರ್ತರಿಗೂ ಗೊತ್ತಾಗಬೇಕು ಎಂದು ಹೇಳಿದರು.

ಚುನಾವಣೆಗೂ ಮುನ್ನವೇ ಪರಿಶಿಷ್ಟ ಜಾತಿ, ವರ್ಗ, ವೀರಶೈವರಿಗೆ ಒಂದೊಂದು ಉಪಮುಖ್ಯಮಂತ್ರಿ ಸ್ಥಾನಕ್ಕೆ ಬಡ್ತಿ ಅಥವಾ ನೇಮಕಾತಿ ಮಾಡಿದ್ದರೆ ನಮಗೆ ಹೆಚ್ಚು ಸ್ಥಾನ ಬರುತ್ತಿತ್ತು.

ಪಕ್ಷದ ಉದ್ದೇಶದಿಂದಲೇ ನಾವುಗಳು ಉಪಮುಖ್ಯಮಂತ್ರಿ ಸ್ಥಾನಗಳ ಬೇಡಿಕೆಯನ್ನು ಇಟ್ಟಿದ್ದೆವು, ಈಗಲಾದರೂ (2ನೇ ಪುಟಕ್ಕೆ)

# ಬಿಸಿಲಿನಿಂದ 143 ಜನರ ಸಾವು

ನವದೆಹಲಿ, ಜೂ. 21 – ಬಿಸಿ ಗಾಳಿಯ ಪ್ರಕೋಪದಿಂದ ಸಾವನ್ನಪ್ಪಿದವರ ಸಂಖ್ಯೆ 143ಕ್ಕೆ ಏರಿಕೆಯಾಗಿದೆ ಹಾಗೂ 41,789 ಜನರು ಬಿಸಿಲ ಆಘಾತದಿಂದ ಅಸ್ವಸ್ಥರಾಗಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಮೂಲಗಳು ತಿಳಿಸಿವೆ.

ಹಲವಾರು ಆಸ್ಪತ್ರೆಗಳು ಇನ್ನೂ ಬಿಸಿಲ ಆಘಾತದ ಮಾಹಿತಿಯನ್ನು ಸಲ್ಲಿಸಿಲ್ಲ. ಹೀಗಾಗಿ ಸಾವುಗಳ ಸಂಖ್ಯೆ ಇನ್ನಷ್ಟು ಹೆಚ್ಚಾಗಿರುವ ಸಾಧ್ಯತೆ ಇದೆ. ಜೂನ್ 20ರಂದು ಒಂದೇ ದಿನ 14 ಜನರು ಬಿಸಿಲ ಆಘಾತಕ್ಕೆ ಸಿಲುಕಿ ಸಾವನ್ನಪ್ಪಿರುವುದು ದೃಢಪಟ್ಟಿದೆ.

# ಸೂರಜ್ ರೇವಣ್ಣ ವಿರುದ್ಧವೂ ಅಸಹಜ ಲೈಂಗಿಕ ದೌರ್ಜನ್ಯ ಆರೋಪ



ಹಾಸನ, ಜೂ. 21 – ಜೆಡಿಎಸ್ ನಾಯಕ ಹೆಚ್.ಡಿ. ರೇವಣ್ಣ ಅವರ ಪುತ್ರ ಹಾಗೂ ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ವಿರುದ್ಧವೂ ಅಸಹಜ ಲೈಂಗಿಕ ದೌರ್ಜನ್ಯದ ಆರೋಪ ಕೇಳಿ ಬಂದಿದೆ.

ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯದ ಆರೋಪಗಳ ತನಿಖೆ ನಡೆಯುತ್ತಿರುವಾಗಲೇ, ಅವರ ಸಹೋದರನ ವಿರುದ್ಧವೂ ಆರೋಪ ವ್ಯಕ್ತವಾಗಿದೆ.

ನನ್ನ ಮೇಲೆ ಸೂರಜ್ ರೇವಣ್ಣ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಅರಕಲಗೂಡು ಜೆಡಿಎಸ್ ಕಾರ್ಯಕರ್ತ ಎನ್ನಲಾದ ವ್ಯಕ್ತಿ, ಬೆಂಗಳೂರಿನಲ್ಲಿ ಪೊಲೀಸ್ ಮಹಾನಿರ್ದೇಶಕರು, ಗೃಹ ಸಚಿವರಿಗೆ ದೂರು ಸಲ್ಲಿಸಿದ್ದಾರೆ.

ಇದಕ್ಕೆ ಪ್ರತಿಯಾಗಿ, ಆರೋಪ ಮಾಡಿರುವ ವ್ಯಕ್ತಿಯ ವಿರುದ್ಧ ಹೊಳೆನರಸೀಪುರ ನಗರ ಠಾಣೆಯಲ್ಲಿ ಶುಕ್ರವಾರ ಬೆದರಿಕೆಯ ಪ್ರಕರಣ ದಾಖಲಾಗಿದೆ.

5 ಕೋಟಿ ರೂ.ಗಳಿಗೆ ಬೇಡಿಕೆ ಇಟ್ಟಿದ್ದು, ಹಣ ನೀಡದಿದ್ದರೆ, ಲೈಂಗಿಕ ದೌರ್ಜನ್ಯದ ಆರೋಪ ಮಾಡುವುದಾಗಿ ಬೆದರಿಕೆ ಹಾಕಲಾಗಿದೆ ಎಂದು ಸೂರಜ್ ಬ್ರಿಗೇಡ್‌ನ ಖಜಾಂಚಿ ಹೆಚ್. ಎಲ್. ಶಿವಕುಮಾರ್ ದೂರಿನಲ್ಲಿ ಆರೋಪಿಸಿದ್ದಾರೆ.

# ಬೆಳಗಾಂ ಬೋರ್ಡ್ ಹುದ್ದೆ ನೇಮಕಕ್ಕೆ ಲಂಚ

**ಸಿಬಿಐನಿಂದ ಎಫ್.ಐ.ಆರ್.**

ನವದೆಹಲಿ, ಜೂ. 21 – ಬೆಳಗಾಂ ಕಂಟೋನ್‌ಮೆಂಟ್ ಬೋರ್ಡ್‌ನ ಮಜ್ದೂರ್, ಕೂಲಿ, ಚೌಕಿದಾರ್ ಮತ್ತಿತರೆ ಹುದ್ದೆಗಳ ನೇಮಕಕ್ಕೆ 15ರಿಂದ 25 ಲಕ್ಷ ರೂ.ಗಳ ಲಂಚ ಪಡೆಯಲಾಗಿತ್ತು ಎಂದು ಸಿಬಿಐ ದಾಖಲಿಸಿರುವ ಪ್ರಾಥಮಿಕ ಮಾಹಿತಿಯಲ್ಲಿ ತಿಳಿಸಲಾಗಿದೆ.

ಬೆಳಗಾಂ ಕಂಟೋನ್‌ಮೆಂಟ್ ಬೋರ್ಡ್‌ನ ಐವರು ಅಧಿಕಾರಿಗಳು ಹಾಗೂ ಲಂಚ ನೀಡಿದ 14 ಅಭ್ಯರ್ಥಿಗಳ ವಿರುದ್ಧ ಎಫ್.ಐ.ಆರ್. ದಾಖಲಿಸಲಾಗಿದೆ.

ನೇಮಕದಲ್ಲಿ ಭ್ರಷ್ಟಾಚಾರ ನಡೆದ ಬಗ್ಗೆ ಮಂಡಳಿಯ ಸದಸ್ಯರೊಬ್ಬರು ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ಸಿ.ಬಿ.ಐ. ಕಳೆದ ವರ್ಷ ಪ್ರಾಥಮಿಕ ತನಿಖೆ ನಡೆಸಿತ್ತು. 2022-23ರ ಸಾಲಿನಲ್ಲಿ ನೇಮಕ ಪ್ರಕ್ರಿಯೆ ಕೈಗೊಳ್ಳಲಾಗಿತ್ತು. 33 ಅಭ್ಯರ್ಥಿಗಳನ್ನು ನೇಮಿಸಿಕೊಳ್ಳಲಾಗಿತ್ತು.

# ಹಜ್ ಯಾತ್ರೆಯಲ್ಲಿ 98 ಭಾರತೀಯರ ಸಾವು

ನವದೆಹಲಿ, ಜೂ. 21 – ಮೆಕ್ಕಾಗೆ ಕೈಗೊಳ್ಳುವ ಹಜ್ ಯಾತ್ರೆಯಲ್ಲಿ ಪಾಲ್ಗೊಂಡಿದ್ದ 98 ಭಾರತೀಯರು ಸಾವನ್ನಪ್ಪಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

ಕಳೆದ ವರ್ಷ ಇಡೀ ಹಜ್ ಯಾತ್ರೆಯಲ್ಲಿ ಭಾರತದ 187 ಜನ ಸಾವನ್ನಪ್ಪಿದ್ದರು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

ಈ ವರ್ಷ 1.75 ಲಕ್ಷ ಭಾರತೀಯರು ಹಜ್ ಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಮೇ 9ರಿಂದ ಆರಂಭವಾದ ಯಾತ್ರೆ, ಜುಲೈ 22ರವರೆಗೆ ನಡೆಯಲಿದೆ. ಇಲ್ಲಿಯವರೆಗೆ 98 ಸಾವುಗಳು ವರದಿಯಾಗಿವೆ ಎಂದವರು ಹೇಳಿದ್ದಾರೆ.


ನೈಸರ್ಗಿಕ ಕಾರಣಗಳು, ತೀವ್ರ ಅನಾರೋಗ್ಯ ಹಾಗೂ ವೃದ್ಧಾಪ್ಯದ ಕಾರಣದಿಂದ ಸಾವನ್ನಪ್ಪಿದ್ದಾರೆ. ನಾಲ್ವರು ಅಪಘಾತದಲ್ಲಿ ಮೃತಪಟ್ಟಿದ್ದಾರೆ ಎಂದು ಜೈಸ್ವಾಲ್ ತಿಳಿಸಿದ್ದಾರೆ.

# ಕೇಜ್ರಿ ಜಾಮೀನು ಆದೇಶಕ್ಕೆ ಹೈಕೋರ್ಟ್ ತಡೆ

ನವದೆಹಲಿ, ಜೂ. 21 – ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ವಿಚಾರಣಾ ನ್ಯಾಯಾಲಯ ನೀಡಿದ್ದ ಜಾಮೀನು ಆದೇಶವನ್ನು ದೆಹಲಿ ಹೈಕೋರ್ಟ್ ತಡೆದಿದೆ.

ಹೈಕೋರ್ಟ್ ಮುಂದಿನ (2ನೇ ಪುಟಕ್ಕೆ)

# ಠಾಣೆ ಕಂಬಿ ಹಿಂದೆ ಸೇರಿದ ದರ್ಶನ್



ಬೆಂಗಳೂರು, ಜೂ. 21 - ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಆರೋಪಿ ನಟ ದರ್ಶನ್ ಅವರನ್ನು ಪೊಲೀಸ್ ಠಾಣೆಯ ಕಂಬಿ ಹಿಂದೆ ಹಾಕಲಾಗಿದೆ.

ಇದುವರೆಗೂ ಠಾಣೆಯ ಮೇಲ್ಮಹಡಿಯಲ್ಲಿ ಪೊಲೀಸರ ವಿಶ್ರಾಂತಿಗಾಗಿ ಇದ್ದ ಕೊಠಡಿಯಲ್ಲಿ ದರ್ಶನ್ ಅವರನ್ನು ಇರಿಸಲಾಗಿತ್ತು.

ಅಲ್ಲಿ ಅವರಿಗೆ ಎಲ್ಲಾ ಸವಲತ್ತುಗಳನ್ನು ಪೊಲೀಸರು ನೀಡಿದ್ದರು. ಆದರೆ, ನಿನ್ನೆ ಸಂಜೆಯಿಂದ ಠಾಣೆಯ ಲಾಕಪ್‌ನಲ್ಲಿ ಮಾಮೂಲಿ ಬಂಧಿತರಂತೆ ಇಡಲಾಗಿದೆ.

ದರ್ಶನ್ ನಿನ್ನೆ ಇಡೀ ರಾತ್ರಿ ಲಾಕಪ್‌ನಲ್ಲಿ ಸೊಳ್ಳೆಗಳ ಕಾಟದಿಂದ ನಿದ್ರೆಯಿಲ್ಲದೆ, ಇತರೆ ಆರೋಪಿಗಳ ಜೊತೆ ಕಾಲ ಕಳೆಯಬೇಕಾಯಿತು. ನ್ಯಾಯಾಲಯ ನಿನ್ನೆ ಎಲ್ಲಾ ಆರೋಪಿಗಳಿಗೂ ಎರಡು ದಿನದ ಪೊಲೀಸ್ ಕಸ್ಟಡಿ ವಿಸ್ತರಣೆ ಸಂದರ್ಭದಲ್ಲಿ ನಡೆದ ವಾದ-ಪ್ರತಿವಾದದ ವೇಳೆ ದರ್ಶನ್‌ಗೆ ಪ್ರತ್ಯೇಕ ಕೊಠಡಿ ನೀಡಿರುವುದು ನ್ಯಾಯಾಧೀಶರ ಗಮನಕ್ಕೆ ಬಂದಿತು.

ಈ ಬಗ್ಗೆ ಸರ್ಕಾರಿ ವಕೀಲರನ್ನು ಪ್ರಶ್ನೆ ಮಾಡಿದ ವಕೀಲರು, ಅವರೊಬ್ಬರಿಗೇನು ಪ್ರತ್ಯೇಕ ಕಾನೂನು, ಅವರನ್ನೂ ಸೆಲ್‌ನಲ್ಲೇ ಇಡಬೇಕು ಎಂದು ಆದೇಶಿಸಿದರು.

ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಪೊಲೀಸರು ಇತರೆ ಆರೋಪಿಗಳ ಜೊತೆ ಇವರನ್ನೂ ಕಂಬಿ ಹಿಂದೆ ಕೂರಿಸಿದರು.

# ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷರನ್ನಾಗಿ ನ್ಯಾಯವಾದಿ ಎನ್. ಜಯದೇವ ನಾಯ್ಕ ?

ದಾವಣಗೆರೆ, ಜೂ.21- ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷರನ್ನಾಗಿ ನಗರದ ಹಿರಿಯ ನ್ಯಾಯವಾದಿ ಎನ್. ಜಯದೇವ ನಾಯ್ಕ ಅವರನ್ನು ರಾಜ್ಯ ಸರ್ಕಾರ ನೇಮಕ ಮಾಡಿದೆ ಎಂದು ವಿಶ್ವಸ ನೀಯ ಮೂಲಗಳು ತಿಳಿಸಿದ್ದು, ಒಂದೆರಡು ದಿನಗಳಲ್ಲಿ ಆದೇಶ ಹೊರಬೀಳಲಿದೆ ಎಂದು ಹೇಳಿದೆ.

ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮದ ಅಧ್ಯಕ್ಷರನ್ನಾಗಿ ರಾಜ್ಯ ಪೌರ ಸೇವಾ ನೌಕರರ ಸಂಘದ ಮಾಜಿ ಅಧ್ಯಕ್ಷರೂ,ಕೆಪಿಸಿಸಿ ಅಸಂಘಟಿತ ಕಾರ್ಮಿಕರ ವಿಭಾಗದ ರಾಜ್ಯಾಧ್ಯಕ್ಷರೂ ಆಗಿರುವ ಜಿ.ಎಸ್. ಮಂಜುನಾಥ್ ಅವರನ್ನು ನೇಮಕ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಈ ಸಂಬಂಧ ಮುಖ್ಯಮಂತ್ರಿಗಳು ಆದೇಶಕ್ಕೆ ಸಹಿ ಹಾಕಿದ್ದು, ಕಡತವನ್ನು ಸಂಬಂಧಿಸಿದ ಇಲಾಖೆಗೆ ಕಳುಹಿಸಲಾಗಿದೆ ಎಂದು ಮೂಲಗಳು ವಿವರಿಸಿವೆ.

# ನೀಟ್ ಕೌನ್ಸೆಲಿಂಗ್ ತಡೆಗೆ ಸುಪ್ರೀಂ ನಕಾರ

ನವದೆಹಲಿ, ಜೂ. 21 – ವೈದ್ಯಕೀಯ ಪ್ರವೇಶಕ್ಕೆ ನಡೆಸಲಾದ ನೀಟ್ ಪರೀಕ್ಷೆಯ ಕೌನ್ಸೆಲಿಂಗ್ ತಡೆಯಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಜು. 6ರಿಂದ ಕೌನ್ಸೆಲಿಂಗ್ ಆರಂಭವಾಗಲಿದೆ.

ಮೇ 5ರಂದು ನಡೆಸಲಾದ ನೀಟ್ ಪರೀಕ್ಷೆಯಲ್ಲಿ ಅಕ್ರಮಗಳು ನಡೆದಿವೆ. ಈ ಹಿನ್ನೆಲೆಯಲ್ಲಿ ಪರೀಕ್ಷೆ ರದ್ದುಗೊಳಿಸಬೇಕು ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿದೆ. ಅರ್ಜಿಯ ವಿಚಾರಣೆಯನ್ನು ಜುಲೈ 8ಕ್ಕೆ ನಿಗದಿ ಪಡಿಸಲಾಗಿದೆ. ಜುಲೈ 6ರಂದು ನಡೆಸಲಾಗುವ ಕೌನ್ಸೆಲಿಂಗ್ ಅನ್ನು ಜುಲೈ 8ಕ್ಕೆ ಮುಂದೂಡಬೇಕು ಎಂದು ಅರ್ಜಿದಾರರ ಪರವಾಗಿ ಹಾಜರಿದ್ದ ವಕೀಲರು ಮನವಿ ಮಾಡಿಕೊಂಡರು. ಆದರೆ, ಸುಪ್ರೀಂ ಕೋರ್ಟ್ ಕೌನ್ಸೆಲಿಂಗ್ ತಡೆಯಲು ನಿರಾಕರಿಸಿದೆ.

# ಸಿ.ಎಸ್.ಐ.ಆರ್. - ನೆಟ್ ಪರೀಕ್ಷೆ ಮುಂದೂಡಿಕೆ

ನವದೆಹಲಿ, ಜೂ. 21 – ಜೂನ್ ತಿಂಗಳಲ್ಲಿ ನಡೆಯಬೇಕಿದ್ದ ಸಿ.ಎಸ್.ಐ.ಆರ್. - ಯುಜಿಸಿ - ನೆಟ್ ಪರೀಕ್ಷೆಯನ್ನು ಮುಂದೂಡಲಾಗಿದೆ. ಅನಿವಾರ್ಯ ಕಾರಣಗಳಿಂದಾಗಿ ಪರೀಕ್ಷೆ ಮುಂದೂಡಲಾಗಿದೆ ಎಂದು ತಿಳಿಸಲಾಗಿದೆ.

ಕಿರಿಯ ಸಂಶೋಧನಾ ಫೆಲೋಶಿಪ್ ಹಾಗೂ ಸಹಾಯಕ ಪ್ರಾಧ್ಯಾಪಕರ ಹುದ್ದೆ ಹಾಗೂ ವಿಜ್ಞಾನ ವಲಯದಲ್ಲಿ ಪಿ.ಹೆಚ್.ಡಿ. ಪ್ರವೇಶಕ್ಕಾಗಿ ಈ ಪರೀಕ್ಷೆ ನಡೆಸಲಾಗುತ್ತದೆ.

# ಶಿಥಿಲಾವಸ್ಥೆಯಲ್ಲಿರುವ ಸರ್ಕಾರಿ ಶಾಲೆಗಳನ್ನು ಪರಿಶೀಲಿಸಲು ಸೂಚನೆ



**ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆ ನಡೆಸಿದ ಜಿಲ್ಲಾಧಿಕಾರಿ ವೆಂಕಟೇಶ್**

ದಾವಣಗೆರೆ, ಜೂ.21- ಗ್ರಾಮಕ್ಕೆ ಬಸ್ಸಿನ ವ್ಯವಸ್ಥೆ ಕಲ್ಪಿಸುವ ಜೊತೆಗೆ ಗ್ರಾಮದಲ್ಲಿ ಶಿಥಿಲಾವಸ್ಥೆ ತಲುಪಿರುವ ಸರ್ಕಾರಿ ಶಾಲೆಗಳನ್ನು ಅಧಿಕಾರಿಗಳು ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್.ಎಂ.ವಿ ಸೂಚಿಸಿದರು.

ಶುಕ್ರವಾರ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಈ ಹಿಂದೆ ಸಭೆಯಲ್ಲಿ ಚರ್ಚಿಸಲಾಗಿದ್ದ ಜಗಳೂರು ತಾಲ್ಲೂಕು ಮೂಡಲ ಮಾಚಿಕೆರೆ ಗ್ರಾಮದಲ್ಲಿ ಮನೆಗಳಿಗೆ ನೀರಿನ ವ್ಯವಸ್ಥೆ ಕಲ್ಪಿಸಲು ಪೈಪ್ ಲೈನ್ ವ್ಯವಸ್ಥೆ ಮಾಡಿದ್ದು, ಗಾಮದಲ್ಲಿನ ಮನೆಗಳಿಗೆ ಅಳವಡಿಸಿರುವ ನಲ್ಲಿಗಳಲ್ಲಿ ನೀರಿನ ಜೊತೆ ಚರಂಡಿ ನೀರು ಸಹಾ ಬರುತ್ತಿರುವ ವಿಚಾರವಾಗಿ ಕೆಲವು ಜಾಗಗಳಲ್ಲಿ ಪೈಪ್ ಲೈನ್ ಒಡೆದು ಹೋಗಿರುವುದನ್ನು ಈಗಾಗಲೇ ಗ್ರಾಮ ಪಂಚಾಯಿತಿಯಿಂದ ದುರಸ್ತಿಗೊಳಿಸಿ ಕುಡಿಯುವ ನೀರನ್ನು ಸರಬರಾಜು ಮಾಡಲಾಗಿರುತ್ತದೆ ಎಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಅಭಿಯಂತರರು ತಿಳಿಸಿದರು.

ನಲ್ಲಿಗಳಲ್ಲಿ ನೀರಿನ ಜೊತೆ ಚರಂಡಿ ನೀರು ಇನ್ನೂ ಕೂಡ ನಿವಾರಣೆಯಾಗಿರುವುದಿಲ್ಲ ಎಂಬ ವಿಚಾರವನ್ನು (2ನೇ ಪುಟಕ್ಕೆ)

# ನೂತನ ಕಾಯ್ದೆಗಳಿಂದ ಶಿಕ್ಷೆ ಪ್ರಮಾಣ ಹೆಚ್ಚಾಗಬೇಕು

## ಹಿಮಾಚಲ ಪ್ರದೇಶದ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಲ್. ನಾರಾಯಣಸ್ವಾಮಿ ಆಶಯ



ದಾವಣಗೆರೆ, ಜೂ. 21 - ಆರೋಪ ಪಟ್ಟಿ ದಾಖಲಿಸಿದ ಪ್ರಕರಣಗಳಲ್ಲಿ ಶಿಕ್ಷೆಯಾಗುವ ಪ್ರಮಾಣ ಭಾರತದಲ್ಲಿ ಶೇ.50ಕ್ಕಿಂತ ಕಡಿಮೆ ಇದೆ. ನೂತನ ಕಾಯ್ದೆಗಳ ಜಾರಿ ನಂತರವಾದರೂ ಶಿಕ್ಷೆಯ ಪ್ರಮಾಣ ಹೆಚ್ಚಾಗಬೇಕು ಎಂದು ಹಿಮಾಚಲ ಪ್ರದೇಶದ ಹೈಕೋರ್ಟ್ ವಿಶ್ರಾಂತ ಮುಖ್ಯ ನ್ಯಾಯಮೂರ್ತಿ ಎಲ್. ನಾರಾಯಣಸ್ವಾಮಿ ಆಶಿಸಿದ್ದಾರೆ.

ಜಿಲ್ಲಾ ವಕೀಲರ ಸಂಘದ ವತಿಯಿಂದ ವಕೀಲರ ಸಾಂಸ್ಕೃತಿಕ ಭವನದಲ್ಲಿ ಆಯೋಜಿಸಲಾಗಿದ್ದ ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಹಾಗೂ ಭಾರತೀಯ ಸಾಕ್ಷಿ ಕಾಯ್ದೆಗಳ ಕುರಿತ ಉಪನ್ಯಾಸ ಮಾಲಿಕೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೆಲ ವಿಶೇಷ ಕಾಯ್ದೆಗಳಲ್ಲಂತೂ ಶಿಕ್ಷೆಯಾಗುವ ಪ್ರಮಾಣ ಶೇ.13ಕ್ಕಿಂತ ಕಡಿಮೆ ಇದೆ. ಶಿಕ್ಷೆಯ ಪ್ರಮಾಣ ಕಡಿಮೆಯಾಗಿರುವುದಕ್ಕೆ ಏನು ಕಾರಣ ಎಂಬಬಗ್ಗೆ ವ್ಯಾಪಕ ವಿಶ್ಲೇಷಣೆ ನಡೆಯಬೇಕಿದೆ. ನ್ಯಾಯಿಕ ವ್ಯವಸ್ಥೆಯ ಯಾವುದೇ ಅಂಗದಲ್ಲಿ ಲೋಪಗಳಿದ್ದರೆ ಬಗೆಹರಿಸಬೇಕಿದೆ ಎಂದು ನ್ಯಾಯಮೂರ್ತಿ ನಾರಾಯಣಸ್ವಾಮಿ ಹೇಳಿದರು.

ಜುಲೈ 1ರಿಂದ ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಹಾಗೂ ಭಾರತೀಯ ಸಾಕ್ಷಿ ಕಾಯ್ದೆಗಳು ಜಾರಿಯಾಗಲಿವೆ. ನಂತರವಾದರೂ ಶಿಕ್ಷೆಯಾಗುವ ಪ್ರಮಾಣ ಹೆಚ್ಚಾಗಬೇಕು. ಶಿಕ್ಷೆಯ ಪ್ರಮಾಣ ಹೆಚ್ಚಾಗದೇ ಕಾಯ್ದೆಗಳ ಮರು ಪರಿಶೀಲನೆಯ ಅಗತ್ಯ ಎದುರಾಗಬಾರದು ಎಂದವರು ಹೇಳಿದರು.

ನಾನು ಭೇಟಿ ನೀಡಿದ ಕೆಲ ದೇಶಗಳಲ್ಲಿ ಆರೋಪ ಪಟ್ಟಿ ದಾಖಲಿಸಿದ ನಂತರ ಶಿಕ್ಷೆಯಾಗುವ ಪ್ರಮಾಣ ಶೇ.90ರಷ್ಟಿದೆ. ಒಂದು ವೇಳೆ ಆರೋಪಿ ಖುಲಾಸೆಯಾದರೆ ಆ ಬಗ್ಗೆ ನ್ಯಾಯಿಕ ವ್ಯವಸ್ಥೆಯಲ್ಲಿ ಗಂಭೀರ ಪರಿಶೀಲನೆಗಳು ನಡೆಯುತ್ತವೆ. ಇಲ್ಲಿಯೂ ಅಂಥದೇ ವ್ಯವಸ್ಥೆಯ ಅಗತ್ಯವಿದೆ ಎಂದು ನ್ಯಾಯಮೂರ್ತಿ ನಾರಾಯಣಸ್ವಾಮಿ ಅಭಿಪ್ರಾಯ ಪಟ್ಟರು.

ದಾವಣಗೆರೆ ಜಿಲ್ಲಾ ವಕೀಲರ ಸಂಘದವರು ವಕೀಲರ ಮರಣೋತ್ತರ ನಿಧಿ ಸ್ಥಾಪಿಸಿರುವುದು ದೇಶದಲ್ಲೇ ವಿಶಿಷ್ಟವಾಗಿದೆ. ಈ ವ್ಯವಸ್ಥೆ ರಾಜ್ಯಾದ್ಯಂತ ವಿಸ್ತರಿಸಬೇಕು. ನೆರವಿನ ಮೊತ್ತ ಹೆಚ್ಚಾಗಬೇಕು ಎಂದವರು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ನೂತನ ಕಾಯ್ದೆಗಳ (2ನೇ ಪುಟಕ್ಕೆ)

# ಮನಸ್ಸೆಂಬ ಮರ್ಕಟಕ್ಕೆ ಯೋಗದಿಂದ ಕಡಿವಾಣ



**(1ನೇ ಪುಟದಿಂದ)** ಆಸನಗಳನ್ನು ಮಾಡುವುದಲ್ಲ. ಯಮ-ನಿಯಮಗಳನ್ನು ಆಚರಿಸುವುದೂ ಕೂಡ ಆಗಿದೆ. ಅಹಿಂಸೆ, ಸತ್ಯ, ಆಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ ಎಂಬ ಐದು ಯಮಗಳನ್ನು ಪಾಲಿಸಿದ್ದಲ್ಲಿ ಪ್ರಪಂಚದಲ್ಲಿ ಯಾವುದೇ ಸಂಘರ್ಷಗಳೂ ಉಂಟಾಗುತ್ತಿರಲಿಲ್ಲ. ಇವುಗಳ ಪೈಕಿ ಮಹಾತ್ಮ ಗಾಂಧೀಜಿ ಅಹಿಂಸಾ ಮಾರ್ಗ ಅನುಸರಿಸಿದ್ದರು ಎಂಬುದಾಗಿ ಶ್ರೀಗಳು ವಿವರಿಸಿದರು.

ಸ್ಥಿರ ಸುಖಂ ಆಸನಂ ಎಂಬಂತೆ ಆಸನದಲ್ಲಿ ದೃಢತೆ, ಆನಂದ ಇರಬೇಕು. ಕಷ್ಟದಿಂದ ಮಾಡುವುದು ಆಸನಗಳಲ್ಲ. ಯಾವುದೇ ಆಸನವನ್ನು ಖುಷಿಯಿಂದ ಮಾಡಿದರೆ ನೀವು ಯೋಗ ಪರಿಣಿತಿ ಪಡೆದಿದ್ದೀರಿ ಎಂದರ್ಥ ಎಂದು ವಿಶ್ಲೇಷಿಸಿದರು.

ನಮ್ಮ ದೇಶದಲ್ಲಿ ಸಾವಿರಾರು ವರ್ಷಗಳಿಂದಲೂ ಯೋಗ ಪ್ರಚಲಿತವಾಗಿದೆ. 2015ರಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಅಧಿಕೃತವಾಗಿ ಯೋಗ ದಿನಾಚರಣೆ ಅಂಗೀಕಾರವಾಗಿದೆ. ಇದಕ್ಕೆ 195 ರಾಷ್ಟ್ರಗಳು ಬೆಂಬಲಿಸಿವೆ. ಪತಂಜಲಿ ಮಹರ್ಷಿಯ ಯೋಗ ಸೂತ್ರದಲ್ಲಿ 195 ಸೂತ್ರಗಳಿವೆ. ಇದನ್ನು ಯೋಗಾಯೋಗ ಎಂದೇ ಹೇಳಬಹುದು ಎಂದು ಸ್ವಾಮೀಜಿ ಹೇಳಿದರು.

### ಸಂಬಂಧ ಕೆಡಿಸುವ ಮೊಬೈಲ್ ಎಂಬ ಕರ್ಣ ಪಿಶಾಚಿ

(1ನೇ ಪುಟದಿಂದ) ತರುತ್ತಾರೆ.

**ಮೊಬೈಲ್ ನೋಡುವ ಸಹವಾಸವೇ ಬೇಡ ಎಂದು ನಾವು ಮಧ್ಯವರ್ತಿಗಳಿಗೆ ಮೊಬೈಲ್ ಕೊಟ್ಟು ಪರಿಶೀಲನೆಗೆ ಹೇಳುತ್ತೇವೆ. ಕೆಲವೊಮ್ಮೆ ಮೊಬೈಲ್‌ಗಳನ್ನು ಸೀಜ್ ಮಾಡಿಸಲಾಗುತ್ತದೆ ಎಂದು ಸ್ವಾಮೀಜಿ ಹೇಳಿದರು.**

**ಹೇಗೆ ಚಾಕುವನ್ನು ನಾವು ಒಳಿತಿಗೂ, ಕೆಡುಕಿಗೂ ಬಳಸಬಹುದೋ ಹಾಗೆಯೇ ಮೊಬೈಲ್ ಮೇಲೆ ನಮ್ಮ ನಿಯಂತ್ರಣವಿರಬೇಕು. ಅದಕ್ಕಾಗಿ ನಾವು ಯೋಗ-ಧ್ಯಾನದಿಂದ ಮನಸ್ಸನ್ನು ನಿಯಂತ್ರಿಸಿಕೊಳ್ಳಬೇಕು ಎಂದು ಕಿವಿ ಮಾತು ಹೇಳಿದರು.**

ಜಿಲ್ಲಾಧಿಕಾರಿ ಡಾ.ಎಂ.ವಿ ವೆಂಕಟೇಶ್ ಮಾತನಾಡಿ, ಯೋಗ ಎಂಬುದು ನಮ್ಮ ಹಿರಿಯರು, ಗುರುಗಳು, ಸಾಧಕರು ಹೊಸ ಪೀಳಿಗೆಗೆ ನೀಡಿದ ಅಮ್ಮೂಲ್ಯ ಕೊಡುಗೆ. ಮಾನಸಿಕ, ಭೌತಿಕ ಹಾಗೂ ಸಾಮಾಜಿಕ ಸ್ವಾಸ್ಥ್ಯ ಕಾಪಾಡುವಲ್ಲಿ ಯೋಗ ಸಹಕಾರಿಯಾಗಿದೆ ಎಂದರು.

ಯೋಗ ದಿನಾಚರಣೆ ಅಂಗವಾಗಿ ರಕ್ತದಾನ ಶಿಬಿರ ಹಾಗೂ ನೇತ್ರ ತಪಾಸಣಾ ಶಿಬಿರಗಳನ್ನು ನಡೆಸಲಾಯಿತು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಜಿಲ್ಲಾ ಆಯುಷ್ ಇಲಾಖೆ, ಮಹಾನಗರ ಪಾಲಿಕೆ, ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ, ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ, ಜಿಲ್ಲಾ ಯೋಗ ಒಕ್ಕೂಟದ ಆಶ್ರಯದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ವೈದ್ಯ ಶ್ರೀ ಚನ್ನಬಸವಣ್ಣ ಸ್ವಾಮೀಜಿ ಯೋಗದ ಮಹತ್ವ ತಿಳಿಸುತ್ತಾ, ಪ್ರಾತ್ಯಕ್ಷಿಕೆ ನಡೆಸಿಕೊಟ್ಟರು. ಎಸ್ಪಿ ಉಮಾ ಪ್ರಶಾಂತ್, ಸಿಇಒ ಸುರೇಶ್ ಬಿ.ಇಟ್ನಾಳ್, ಬಿ.ಸಿ.ಉಮಾಪತಿ, ತಹಶೀಲ್ದಾರ್ ಅಶ್ವತ್ಥ್, ಆಯುಕ್ತೆ ರೇಣುಕಾ, ಡಿಹೆಚ್ ಒ ಡಾ.ಷಣ್ಮುಖಪ್ಪ, ಡಿಡಿಪಿಐ ಕೊಟ್ರೇಶ್, ವಾಸುದೇವ ರಾಯ್ಕರ್, ಪರಶುರಾಮ, ಬಾತಿ ಶಂಕರ್, ತೀರ್ಥರಾಜ್ ಹೋಲೂರು ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಮಲ್ಲಾಪುರ ಗ್ರಾಮಕ್ಕೆ ಜಿಲ್ಲಾಧಿಕಾರಿ ಭೇಟಿ



ದಾವಣಗೆರೆ, ಜೂ. 21 - ತಾಲ್ಲೂಕಿನ ಆಲೂರು ಗ್ರಾ.ಪಂ. ವ್ಯಾಪ್ತಿಯ ಮಲ್ಲಾಪುರ ಗ್ರಾಮಕ್ಕೆ ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಅವರು ನಿನ್ನೆ ಭೇಟಿ ನೀಡಿದ್ದರು.

ಗ್ರಾಮದಲ್ಲಿ ಇರುವ ಸರ್ವೆ ನಂಬರ್ 7/1 ರಲ್ಲಿ ಇರುವ 6 ಎಕರೆ ವಿಸ್ತೀರ್ಣದ ಜಾಗದಲ್ಲಿ ಕೆರೆಯನ್ನು ಅಗಲೀಕರಣ ಮಾಡಿ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಕಲ್ಲು ಪಿಚ್ಚಿಂಗ್ ಮಾಡಿ ಕೆರೆಯನ್ನು ಅಭಿವೃದ್ಧಿ ಮಾಡುವುದಾಗಿ ಗ್ರಾಮ ಪಂಚಾಯಿತಿ ಸದಸ್ಯರಿಗೆ ಭರವಸೆಯನ್ನು ನೀಡಿದರು.

ಮುಂದಿನ ದಿನಗಳಲ್ಲಿ ಮಲ್ಲಾಪುರ ಗ್ರಾಮದಲ್ಲಿ ಜನತಾದರ್ಶನ ಕಾರ್ಯಕ್ರಮನ್ನು ಮಾಡುವುದಾಗಿ ಅಧಿಕಾರಿಗಳು ಮತ್ತು ಗ್ರಾಮಸ್ಥರಿಗೆ ತಿಳಿಸಿದರು.

ಕೆರೆಯನ್ನು ಇನ್ನು ಸರಿಯಾಗಿ ಸರ್ವೆಯನ್ನು ಮಾಡಿಸಿ ಕೆರೆಯನ್ನು ಇನ್ನು ಅಗಲ ಮಾಡುವಂತೆ ತಹಶೀಲ್ದಾರ್ ಡಾ. ಅಶ್ವತ್ಥ್ ಅವರಿಗೆ ಸೂಚಿಸಿದರು. ಮುಂದಿನ ವಾರ ಸರ್ವೆಯನ್ನು ಮಾಡಿಸಿ ವರದಿಯನ್ನು ಕೊಡುವುದಾಗಿ ಜಿಲ್ಲಾಧಿಕಾರಿಗಳಿಗೆ ತಿಳಿಸಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಆಯುಕ್ತರಾದ ರೇಣುಕಾ, ಗ್ರಾಮ ಪಂಚಾಯಿತಿ ಸದಸ್ಯರಾದ ಎ.ಸಿ. ನಾಗರಾಜ, ಡಿ.ಜಿ. ಬಸವರಾಜ್, ಕಂದಾಯ ಇಲಾಖೆಯ ರಾಜಸ್ವ ನೀರಿಕ್ಷಕ ಸಿದ್ದೇಶ್, ಗ್ರಾಮ ಆಡಳಿತಾಧಿಕಾರಿ ಶ್ರೀಶೈಲ ಮಲ್ಲಿಕಾರ್ಜುನ್, ಗ್ರಾ.ಪಂ. ಪಿಡಿಓ ಎಸ್.ಬಿ.ನಿಂಗಣ್ಣ, ಪಂಚಾಯಿತಿ ಸಿಬ್ಬಂದಿಗಳು ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

# ನೂತನ ಕಾಯ್ದೆಗಳಿಂದ ಶಿಕ್ಷೆ ಪ್ರಮಾಣ ಹೆಚ್ಚಾಗಲಿ

**(1ನೇ ಪುಟದಿಂದ)** ಕುರಿತ ಕೈಪಿಡಿಯೊಂದನ್ನು ಬಿಡುಗಡೆ ಮಾಡಲಾಯಿತು.

ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್, ವಕೀಲರ ಮರಣೋತ್ತರ ನಿಧಿ ವಕೀಲರ ಕುಟುಂಬದವರಿಗೆ ನೆರವಾಗುತ್ತಿದೆ. ಈ ನಿಧಿಗೆ ಸರ್ಕಾರದಿಂದಲೂ ನೆರವಿನ ಅಗತ್ಯವಿದೆ ಎಂದರು.

ಕಾರ್ಯಕ್ರಮದ ವೇದಿಕೆಯಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ರಾಜೇಶ್ವರಿ ಎನ್. ಹೆಗಡೆ, ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಮಂಜಪ್ಪ ಹನುಮಂತಪ್ಪ ಅಣ್ಣಯ್ಯನವರ, ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಆರ್.ಎನ್. ಪ್ರವೀಣ್ ಕುಮಾರ್ ಹಾಗೂ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಶ್ರೀರಾಮ ನಾರಾಯಣ ಹೆಗಡೆ ಉಪಸ್ಥಿತರಿದ್ದರು.

ಭಾವನ ಪತಂಗೆ ಪ್ರಾರ್ಥಿಸಿದರು. ಸಂಘದ ಉಪಾಧ್ಯಕ್ಷ ಜಿ.ಕೆ. ಬಸವರಾಜ್ ಗೋಪನಾಳ್ ಸ್ವಾಗತಿಸಿದರು.

### ಕಾಯ್ದೆಗಳು ಹೊಸವಾದರೂ ಬದಲಾವಣೆ ಕಡಿಮೆ

ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಹಾಗೂ ಭಾರತೀಯ ಸಾಕ್ಷಿ ಕಾಯ್ದೆಗಳು ಹೊಸವಾದರೂ, ಹಳೆಯದಕ್ಕೆ ಹೋಲಿಸಿದರೆ ಬದಲಾವಣೆಗಳು ಕಡಿಮೆ ಎಂದು ಹೈಕೋರ್ಟ್ ವಿಶ್ರಾಂತ ಮುಖ್ಯ ನ್ಯಾಯಮೂರ್ತಿ ಎಲ್. ನಾರಾಯಣಸ್ವಾಮಿ ಹೇಳಿದರು.

ಹಳೆಯ ಕಾಯ್ದೆಗಳ ಸಾಕಷ್ಟು ಅಂಶಗಳನ್ನು ಮುಂದುವರೆಸಲಾಗಿದೆ. ಆದರೂ ಎಲೆಕ್ಟ್ರಾನಿಕ್ ಸಾಕ್ಷ್ಯದಂತಹ ಅಂಶಗಳ ಸೇರ್ಪಡೆ ಸ್ವಾಗತಾರ್ಹ ಎಂದವರು ತಿಳಿಸಿದರು. ಸುಪ್ರೀಂ ಕೋರ್ಟ್ ತೀರ್ಪಿಗೆ ವಿರುದ್ಧವಾಗಿ ಕೆಲ ಅಂಶಗಳನ್ನು ಕಾಯ್ದೆಗೆ ಸೇರಿಸಲಾಗಿದೆ. ನೂತನ ಕಾಯ್ದೆಗಳಿಗೆ ಸಂಬಂಧಿಸಿದಂತೆ ಈಗಾಗಲೇ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಯೊಂದನ್ನು ದಾಖಲಿಸಲಾಗಿದೆ. ನ್ಯಾಯಾಲಯದ ತೀರ್ಪಿಗೆ ವ್ಯತಿರಿಕ್ತವಾಗಿರುವ ಅಂಶಗಳ ಬಗ್ಗೆ ಪರಿಶೀಲನೆಯೂ ನಡೆಯಬಹುದಾಗಿದೆ ಎಂದು ಹೇಳಿದರು.

# ಮನೆಕೆಲಸದವರ ಶೋಷಣೆ : ಹಿಂದೂಜಾ ಕುಟುಂಬದವರಿಗೆ ಸ್ವಿಸ್‌ನಲ್ಲಿ ಜೈಲು ಶಿಕ್ಷೆ

ಜಿನೇವಾ, ಜೂ. 21 – ಮನೆಕೆಲಸವದರ ಶೋಷಣೆ ಮಾಡಿದ ಆರೋಪದ ಮೇಲೆ ಸಿರಿವಂತ ಹಿಂದೂಜಾ ಕುಟುಂಬದ ನಾಲ್ವರಿಗೆ ಸ್ವಿಸ್ ಅಪರಾಧಿಕ ನ್ಯಾಯಾಲಯ ಜೈಲು ಶಿಕ್ಷೆ ವಿಧಿಸಿದೆ.

ಭಾರತ ಸಂಜಾತ ಪ್ರಕಾಶ್ ಹಿಂದುಜಾ ಹಾಗೂ ಅವರ ಪತ್ನಿ, ಮಗ ಹಾಗೂ ಸೊಸೆಗೆ ನಾಲ್ಕರಿಂದ ನಾಲ್ಕೂವರೆ ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ. ಜಿನೇವಾದಲ್ಲಿರುವ ವಿಲ್ಲಾದಲ್ಲಿ ಮನೆಕೆಲಸದವರ ಶೋಷಣೆ ಮಾಡಲಾಗಿದೆ ಎಂದು ನ್ಯಾಯಾಲಯ ತಿಳಿಸಿದೆ. ಮನೆಕೆಲಸದವರಲ್ಲಿ ಬಹುತೇಕರು ಅನಕ್ಷರಸ್ಥರಾಗಿದ್ದಾರೆ.

ನ್ಯಾಯಾಲಯ ತೀರ್ಪು ನೀಡಿದಾಗ ನಾಲ್ವರು ನ್ಯಾಯಾಲಯದಲ್ಲಿ ಇರಲಿಲ್ಲ. ಆದರೆ, ಐದನೇ ಆರೋಪಿಯಾದ ಕುಟುಂಬದ ಉದ್ಯಮ ವ್ಯವಸ್ಥಾಪಕ ನಜೀಬ್ ಜಿಯಾಜಿ ನ್ಯಾಯಾಲಯದಲ್ಲಿದ್ದರು. ಅವರಿಗೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ 18 ತಿಂಗಳ ಜೈಲು ಶಿಕ್ಷೆ ವಿಧಿಸಲಾಗಿದೆ. ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲಾಗುವುದು ಎಂದು ಹಿಂದೂಜಾ ಪರ ವಕೀಲರು ಹೇಳಿದ್ದಾರೆ.

ಮನೆಕೆಲಸದವರ ಶೋಷಣೆ ಹಾಗೂ ಅನಧಿಕೃತವಾಗಿ ಉದ್ಯೋಗಕ್ಕೆ ನೇಮಿಸಿಕೊಂಡ ಕಾರಣಕ್ಕೆ ನಾಲ್ಕು ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ. ಹಿಂದೂಜಾ ಕುಟುಂಬ ದಶಕಗಳಿಂದ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ನೆಲೆಸಿದೆ. ಪ್ರಕಾಶ್‌ಗೆ ಈ ಹಿಂದೆ 2007ರಲ್ಲಿ ಇಂಥದೇ ಆರೋಪದ ಮೇಲೆ ಕಡಿಮೆ ತೀವ್ರತೆಯ ಶಿಕ್ಷೆಯಾಗಿತ್ತು.

ಸ್ವಿಸ್ ಅಧಿಕಾರಿಗಳು ಈಗಾಗಲೇ ಕುಟುಂಬಕ್ಕೆ ಸೇರಿದ ಹಲವಾರು ಆಭರಣಗಳನ್ನು ವಶಕ್ಕೆ ತೆಗೆದುಕೊಂಡಿದ್ದಾರೆ. ಇವುಗಳನ್ನು ಕಾನೂನು ಶುಲ್ಕ ಹಾಗೂ ದಂಡಕ್ಕೆ ಬಳಸಿಕೊಳ್ಳಲಾಗುವುದು ಎಂದು ಹೇಳಿದ್ದಾರೆ.

## ಬಸ್ ನಿಲುಗಡೆಗೆ ರಾಣೇಬೆನ್ನೂರಿನಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆ



ರಾಣೇಬೆನ್ನೂರು, ಜೂ.21- ನಗರದ ಹೊರವಲಯ ಹಲಗೇರಿ ರಸ್ತೆಯ ಎಸ್ ಆರ್ ಕೆ ಬಡಾವಣೆಯಲ್ಲಿ ರಾಜ್ಯ ಸಾರಿಗೆ ಬಸ್ ನಿಲುಗಡೆಗೆ ಒತ್ತಾಯಿಸಿ ಎಸ್‌ಎಫ್‌ಐ ನೇತೃತ್ವದಲ್ಲಿ ವಿದ್ಯಾರ್ಥಿಗಳು ಇಂದು ದಿಢೀರಾಗಿ ರಸ್ತಾ ರೋಖೋ ನಡೆಸಿದರು.

# ಪವಿತ್ರ ಗ್ರಂಥಕ್ಕೆ ಹಾನಿ ಮಾಡಿದ ಆರೋಪದ ಮೇಲೆ ಪ್ರವಾಸಿಗನ ಹತ್ಯೆ

ಪೆಷಾವರ, ಜೂ. 21 – ಪವಿತ್ರ ಗ್ರಂಥಕ್ಕೆ ಹಾನಿ ಮಾಡಿದ ಆರೋಪದ ಮೇಲೆ ಪ್ರವಾಸಿಗರೊಬ್ಬರನ್ನು ಹತ್ಯೆಗೈದು ನೇಣಿಗೆ ಹಾಕಿದ ಘಟನೆ ಪಾಕಿಸ್ತಾನದ ಸ್ವಾಟ್ ನಗರದಲ್ಲಿ ನಡೆದಿದೆ.

ಪಾಕಿಸ್ತಾನದ ಸಿಯಾಲ್ಕೋಟ್ ನಗರದ ಮೊಹಮ್ಮದ್ ಇಸ್ಮಾಯಿಲ್ ಅವರು ಸ್ವಾಟ್‌ಗೆ ಭೇಟಿ ನೀಡಿದ್ದರು. ಅವರು ಪವಿತ್ರ ಗ್ರಂಥದ ಹಾಳೆಗಳನ್ನು ಸುಟ್ಟು ಹಾಕಿದ್ದಾರೆ ಎಂದು ಆರೋಪಿಸಲಾಗಿತ್ತು. ಮೊದಲು ಪೊಲೀಸರು ಇಸ್ಮಾಯಿಲ್ ವಶಕ್ಕೆ ತೆಗೆದುಕೊಂಡು ಪೊಲೀಸ್ ಠಾಣೆಯಲ್ಲಿ ಕೂಡಿ ಹಾಕಿದ್ದರು.

ಆದರೆ, ಈ ಘಟನೆಯ ಬಗ್ಗೆ ಮಸೀದಿಗಳ ಲೌಡ್‌ಸ್ಪೀಕರ್‌ಗಳ ಮೂಲಕ ಜನರಿಗೆ ತಿಳಿಸಲಾಯಿತು. ನಂತರ ಸಾವಿರಾರು ಜನರು ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿದರು. ವ್ಯಕ್ತಿಯನ್ನು ತಮ್ಮ ವಶಕ್ಕೆ ನೀಡುವಂತೆ ಆಗ್ರಹಿಸಿದರು.

ಪೊಲೀಸರ ಜೊತೆ ವಾಗ್ವಾದ ನಡೆಸಿದ ಜನರು, ನಂತರ ಹಲ್ಲೆಗೆ ಮುಂದಾದರು. ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿದಾಗ, ಅವರು ಜೀವ ಉಳಿಸಿಕೊಳ್ಳಲು ಸ್ಥಳದಿಂದ ಪರಾರಿಯಾದರು.

ನಂತರ ಇಸ್ಮಾಯಿಲ್ ಮೇಲೆ ಗುಂಡು ಹಾರಿಸಿ ಹತ್ಯೆ ಮಾಡಿದ ಜನರು, ಬಹಿರಂಗವಾಗಿ ನೇಣಿಗೆ ಹಾಕಿದರು. ಪೊಲೀಸ್ ವಾಹನಗಳಿಗೂ ಬೆಂಕಿ ಹಚ್ಚಿದರು. ನಂತರ ಹೆಚ್ಚಿನ ಪೊಲೀಸರನ್ನು ಕರೆಸಿ ಪರಿಸ್ಥಿತಿ ನಿಯಂತ್ರಿಸಲಾಗಿದೆ.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಶಿವಕುಮಾರಸ್ವಾಮಿ ಬಡಾವಣೆ 1 ಮತ್ತು 2ನೇ ಹಂತ, ಹದಡಿ ರಸ್ತೆ, ಸೇಂಟ್ ಜಾನ್ ಸ್ಕೂಲ್, ಐ.ಟಿ.ಐ. ಕಾಲೇಜು, ರಿಂಗ್ ರಸ್ತೆ, ಶ್ರೀನಿವಾಸ ನಗರ ಹಾಗೂ ಸುತ್ತ ಮುತ್ತ ಪ್ರದೇಶಗಳು.

ಪಿಬಿ. ರಸ್ತೆ, ಸಂಗೊಳ್ಳಿ ರಾಯಣ್ಣ ಸರ್ಕಲ್, ಬಿ.ಎಸ್.ಎನ್.ಎಲ್ ಕಛೇರಿ, ಶಂಕರ್ ವಿಹಾರ್ ಬಡಾವಣೆ, ಶಾಂತಿನಗರ ಮತ್ತು ವಿನಾಯಕನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಮಲೇಬೆನ್ನೂರಿನ ಪಿಎಸಿಎಸ್ ಅಧ್ಯಕ್ಷರಾಗಿ ಮಂಜುನಾಥ್ ಪಟೇಲ್



ಮಲೇಬೆನ್ನೂರು, ಜೂ.21- ಇಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಕೊಮಾರನಹಳ್ಳಿಯ ಜಿ.ಮಂಜುನಾಥ್ ಪಟೇಲ್ ಅವರು ಶುಕ್ರವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಬಿ.ಸೈಫುಲ್ಲಾ ಅವರ ರಾಜೀನಾಮೆಯಿಂದಾಗಿ ಅಧ್ಯಕ್ಷ ಸ್ಥಾನ ತೆರವಾಗಿತ್ತು.

ಸಹಕಾರ ಅಭಿವೃದ್ಧಿ ಅಧಿಕಾರಿ ಶ್ರೀಮತಿ ಸುನೀತಾ ಅವರು ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ಸಂಘದ ಸಿಇಓ ಸಿದ್ದಪ್ಪ, ಸಿಬ್ಬಂದಿಗಳಾದ ಪ್ರಕಾಶ್, ಜಾಫರ್ ಸಹಕರಿಸಿದರು.

ಸಂಘದ ಉಪಾಧ್ಯಕ್ಷರಾದ ಶ್ರೀಮತಿ ಚಂದ್ರಮ್ಮ, ನಿರ್ದೇಶಕರಾದ ಸಿರಿಗೆರೆ ರಾಜಣ್ಣ, ಕೆ.ಪಿ.ಗಂಗಾಧರ್, ಎಂ.ಬಿ.ಗುಲ್ಜಾರ್, ಪಿ.ಆರ್. ಕುಮಾರ್, ಯುನೂಸ್, ಶ್ರೀಮತಿ ನಾಗರತ್ನ ಕೆ.ಜಿ. ಪರಮೇಶ್ವರಪ್ಪ, ಶ್ರೀಮತಿ ರೇವಮ್ಮ ಐರಣಿ ಪುಟ್ಟಪ್ಪ, ಎ.ಕೆ.ನರಸಿಂಹಪ್ಪ, ಡಿಸಿಸಿ ಬ್ಯಾಂಕ್ ಮೇಲ್ವಿಚಾರಕ ಲೋಕೇಶ್ ನಾಯ್ಕ ಹಾಜರಿದ್ದು, ಮಂಜುನಾಥ್ ಪಟೇಲ್ ಅವರ ಅವಿರೋಧ ಆಯ್ಕೆಗೆ ಸಮ್ಮತಿ ಸೂಚಿಸಿದರು.

ಚುನಾವಣೆ ನಂತರ ನೂತನ ಅಧ್ಯಕ್ಷರನ್ನು ಮಾಜಿ ಶಾಸಕ ಎಸ್.ರಾಮಪ್ಪ, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಸೇರಿದಂತೆ, ಇತರರು ಅಭಿನಂದಿಸಿದರು.

# ಮತ್ತೆ ಡಿಸಿಎಂ ಬೇಡಿಕೆ

**(1ನೇ ಪುಟದಿಂದ)** ವರಿಷ್ಠರು ಹೆಚ್ಚು ಸ್ಥಾನಗಳನ್ನು ನೀಡಬೇಕು ಎಂದು ಒತ್ತಾಯಿಸಿದರು.

ನಮ್ಮ ಬೇಡಿಕೆಗಳ ಬಗ್ಗೆ ಸಾರ್ವಜನಿಕವಾಗಿ ಚರ್ಚೆ ನಡೆಯಲಿ. ಒಬ್ಬರಿಗೇ ಎಲ್ಲಾ ಹುದ್ದೆಗಳನ್ನು ನೀಡಿದರೆ, ಪಕ್ಷಕ್ಕೆ ದುಡಿದ ಬೇರೆ ನಾಯಕರ ಗತಿಯೇನು? ಎಂದು ಪ್ರಶ್ನಿಸಿದರು.

ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಶಿವಕುಮಾರ್ ಕಣಕ್ಕಿಳಿಯುವ ಬಗ್ಗೆ ಪರೋಕ್ಷವಾಗಿ ಆಕ್ಷೇಪ ವ್ಯಕ್ತಪಡಿಸಿದ ಸಚಿವರು, ಅಲ್ಲಿಯೂ ನಮ್ಮ ಒಳ್ಳೆಯ ಕಾರ್ಯಕರ್ತರಿರುತ್ತಾರೆ, ಅಂತಹವರನ್ನು ಹುಡುಕಿ ಕಣಕ್ಕಿಳಿಸಬೇಕು ಎಂದರು. ಉಪಚುನಾವಣೆಗೆ ಇನ್ನೂ ಆರು ತಿಂಗಳ ಸಮಯಾವಕಾಶ ಇದೆ, ನೋಡೋಣ. ಆದರೆ, ಸಮರ್ಥ ಅಭ್ಯರ್ಥಿ ಆಯ್ಕೆ ಪ್ರಕ್ರಿಯೆ ಸ್ಥಳೀಯವಾಗಿ ಈಗಿನಿಂದಲೇ ನಡೆಯಬೇಕು ಎಂದರು.

ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು ಮೂರು ತಿಂಗಳು ಮುಗಿಯುತ್ತಿದ್ದಂತೆ ಅವರ ಸಹೋದ್ಯೋಗಿಗಳಾದ ಜಿ.ಪರಮೇಶ್ವರ್, ಕೆ.ಎನ್.ರಾಜಣ್ಣ, ಎಂ.ಬಿ.ಪಾಟೀಲ್ ಹಾಗೂ ಸತೀಶ್ ಜಾರಕಿಹೊಳಿ ಉಪಮುಖ್ಯಮಂತ್ರಿ ಸ್ಥಾನಕ್ಕೆ ಬೇಡಿಕೆ ಇಟ್ಟಿದ್ದರು. ಅಷ್ಟೇ ಅಲ್ಲ ಸಿದ್ದರಾಮಯ್ಯ ಅವರು ಪೂರ್ಣಾವಧಿ ಅಧಿಕಾರದಲ್ಲಿರುತ್ತಾರೆ ಎಂಬ ವಿಚಾರವನ್ನು ಬಹಿರಂಗವಾಗೇ ಚರ್ಚಿಸಿ, ಶಿವಕುಮಾರ್ ನಾಯಕತ್ವಕ್ಕೆ ಪರೋಕ್ಷ ವಿರೋಧ ವ್ಯಕ್ತಪಡಿಸಿದ್ದರು.

ಬೆಂಗಳೂರು ಗ್ರಾಮಾಂತರದಲ್ಲಿ ಶಿವಕುಮಾರ್ ಸಹೋದರ ಡಿ.ಕೆ.ಸುರೇಶ್ ಲೋಕಸಭಾ ಚುನಾವಣೆಯಲ್ಲಿ ಸೋಲು ಅನುಭವಿಸಿದ ನಂತರ ಸಿದ್ದರಾಮಯ್ಯ ಬಣ ಮತ್ತೆ ಮುನ್ನೆಲೆಗೆ ಬಂದು ತಮ್ಮ ಹಳೇ ಬೇಡಿಕೆಗಳನ್ನು ಮುಂದಿಡುವ ಜೊತೆಗೆ ಪಕ್ಷದಲ್ಲೂ ಬದಲಾವಣೆಗೆ ಆಗ್ರಹ ಪಡಿಸಿದೆ.

# ಆದೇಶಕ್ಕೆ ಹೈಕೋರ್ಟ್ ತಡೆ

**(1ನೇ ಪುಟದಿಂದ)** ಆದೇಶ ಹೊರಡಿಸುವವರೆಗೆ ಜಾಮೀನು ನೀಡುವ ಆದೇಶವನ್ನು ತಡೆಯಬೇಕು ಎಂದು ನ್ಯಾಯಮೂರ್ತಿ ಸುಧೀರ್ ಕುಮಾರ್ ಅವರ ರಜೆ ಅವಧಿಯ ಪೀಠ ತಿಳಿಸಿದೆ. ಜೂನ್ 24ರ ಒಳಗೆ ಪ್ರಕರಣಕ್ಕೆ ಸಂಬಂಧಿಸಿದವರು ಅರ್ಜಿಗಳನ್ನು ಸಲ್ಲಿಸಬೇಕು ಎಂದು ನ್ಯಾಯಾಲಯ ತಿಳಿಸಿದೆ. ವಿಚಾರಣಾ ನ್ಯಾಯಾಲಯ ಜಾಮೀನು ನೀಡಿದ್ದನ್ನು ಪ್ರಶ್ನಿಸಿ ಜಾರಿ ನಿರ್ದೇಶನಾಲಯ ಹೈಕೋರ್ಟ್ ಮೊರೆ ಹೋಗಿತ್ತು.

# ಶಾಲಾ-ಕಾಲೇಜುಗಳಲ್ಲಿ ಯೋಗಾಭ್ಯಾಸ ಅಗತ್ಯ

## ಹರಿಹರ ಯೋಗ ದಿನಾಚರಣೆ ಕಾರ್ಯಕ್ರಮದಲಿ ಶಾಸಕ ಬಿ.ಪಿ ಹರೀಶ್



ಹರಿಹರ, ಜೂ. 21- ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಪಠ್ಯದ ಜೊತೆಯಲ್ಲಿ ವಾರದಲ್ಲಿ ಒಂದಷ್ಟು ದಿನ ಯೋಗಾಭ್ಯಾಸ ಮಾಡಿಸುವಂತಹ ವ್ಯವಸ್ಥೆ ನಿಗದಿ ಮಾಡಬೇಕು ಎಂದು ಶಾಸಕ ಬಿ.ಪಿ. ಹರೀಶ್ ಹೇಳಿದರು.

ನಗರದ ಶ್ರೀಮತಿ ಗಿರಿಯಮ್ಮ ಆರ್. ಕಾಂತಪ್ಪ ಶ್ರೇಷ್ಠಿ ಪ್ರಥಮ ದರ್ಜೆ ಹಾಗೂ ಪದವಿಪೂರ್ವ ಮಹಿಳಾ ಮಹಾವಿದ್ಯಾಲಯಗಳು ಮತ್ತು ಧನ್ವಂತರಿ ಪತಂಜಲಿ ಯೋಗ ಕೇಂದ್ರ ಹರಿಹರ ಹಾಗೂ ಎನ್.ಎಸ್.ಎಸ್. ಘಟಕಗಳು ಆಯೋಜಿಸಿದ್ದ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸನಾತನ ಪರಂಪರೆಯ ಯೋಗವು ವಿಶ್ವಕ್ಕೆ ಭಾರತದ ಕೊಡುಗೆಯಾಗಿದೆ. ಭಾರತದಲ್ಲಿ ಋಷಿ ಮುನಿಗಳ ಕಾಲದಿಂದಲೂ ಯೋಗ ಅಭ್ಯಾಸ ನಡೆದುಕೊಂಡು ಬಂದಿದೆ. ಅದನ್ನು ಮನಗಂಡು ಪ್ರಧಾನಿ ನರೇಂದ್ರ ಮೋದಿಯವರು ಕಳೆದ 10 ವರ್ಷಗಳ ಹಿಂದೆ ವಿಶ್ವಕ್ಕೆ ಯೋಗವನ್ನು ಪರಿಚಯಿಸುವ ಕಾರ್ಯಕ್ಕೆ ಮುಂದಾಗಿದ್ದು, ಭಾರತೀಯರು ಹೆಮ್ಮೆ ಪಡುವ ವಿಷಯವಾಗಿದೆ ಎಂದರು.


ಮೋದಿಯವರು ಯೋಗದಿಂದ ಆಗುವಂತಹ ಲಾಭವನ್ನು ವಿಶ್ವಕ್ಕೇ ಪರಿಚಯ ಮಾಡಿಕೊಟ್ಟ ಪರಿಣಾಮವಾಗಿ, ಇಂದು ವಿಶ್ವದ ಅನೇಕ ದೇಶಗಳಲ್ಲಿ ಯೋಗ ದಿನಾಚರಣೆ ಮಾಡುವಂತೆ ಪ್ರೇರೇಪಿಸಿತು. ಜೊತೆಗೆ ವಿಶ್ವಕ್ಕೆ ಭಾರತದ ಸಂಸ್ಕಾರ, ಪರಂಪರೆಯ ಶಕ್ತಿ ಎಷ್ಟರಮಟ್ಟಿಗೆ ಇದೆ ಎಂಬುದು ಕೂಡ ಸಾಬೀತು ಆಯಿತು ಎಂದು ಹೇಳಿದರು.

ಪ್ರತಿನಿತ್ಯ ಯೋಗ ಮಾಡುವುದರಿಂದ ದೇಹದ ಮನಸ್ಥಿತಿ ಸ್ಥಿರತೆಯನ್ನು ಹೊಂದಿರುತ್ತದೆ. ಆರೋಗ್ಯದಲ್ಲಿ ದುಷ್ಪರಿಣಾಮ ಬೀರುವುದನ್ನು ನಿಯಂತ್ರಣ ಮಾಡುತ್ತದೆ. ಮನಸ್ಸು ಲವಲವಿಕೆಯಿಂದ ಕೂಡಿರುತ್ತದೆ. ಹಾಗಾಗಿ ಪ್ರತಿಯೊಬ್ಬ ನಾಗರಿಕರು ತಮ್ಮ ದೈನಂದಿನ ಜೀವನದಲ್ಲಿ ಬೆಳಗ್ಗೆ ಒಂದು ಗಂಟೆ ಕಾಲ ಯೋಗ ಅಭ್ಯಾಸ ಮಾಡುವುದನ್ನು ರೂಢಿಸಿಕೊಳ್ಳಬೇಕು.

ಈ ವೇಳೆ ಬಾಲಕಿ ಎನ್. ಸಾನ್ವಿ ಮಾಡಿದ ಯೋಗ ಪ್ರದರ್ಶನ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.


ಪ್ರಾಚಾರ್ಯ ಡಾ.ಜಿ.ಬಿ.ಗಂಗಾಧರಪ್ಪ, ಆಡಳಿತ ಮಂಡಳಿ ಅಧ್ಯಕ್ಷ ಜಿ.ಎಂ. ತಿಪ್ಪೇಸ್ವಾಮಿ, ಕಾರ್ಯದರ್ಶಿ ಎಸ್. ಪ್ರಸನ್ನಕುಮಾರ್, ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯೆ ಪ್ರೊ. ಸುಜಾತ, ಪತ್ರಕರ್ತ ಎಂ. ಚಿದಾನಂದ ಕಂಚಿಕೇರಿ, ಎನ್.ಎಸ್.ಎಸ್. ಘಟಕದ ಕಾರ್ಯಕ್ರಮ ಅಧಿಕಾರಿ ಹೆಚ್.ಎಂ.ಗುರುಬಸವರಾಜಯ್ಯ, ಧನ್ವಂತರಿ ಯೋಗ ಕೇಂದ್ರದ ಎನ್. ನಿರಂಜನ್, ಎನ್ ಮೀನಾಕ್ಷಿ , ಕರಿಬಸಪ್ಪ ಕಂಚಿಕೇರಿ. ವಿನಾಯಕ ಆರಾಧ್ಯಮಠ, ಕಾಂತರಾಜ್ ಮತ್ತಿತರರು ಉಪಸ್ಥಿತರಿದ್ದರು.

### ಜಿಗಳಿ ಗ್ರಾಮದ ಗುಬ್ಬಿ ಹನುಮಂತಪ್ಪ ನಿಧನ



ಹರಿಹರ ತಾಲ್ಲೂಕು ಜಿಗಳಿ ಗ್ರಾಮದ ಎ.ಕೆ. ಕಾಲೋನಿಯ ಹಿರಿಯರಾದ ಗುಬ್ಬಿ ಹನುಮಂತಪ್ಪ (85 ವರ್ಷ) ಅವರು ದಿನಾಂಕ 21.06.2024ರ ಶುಕ್ರವಾರ ಸಂಜೆ 4 ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ನಾಲ್ವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 22.06.2024ರ ಶನಿವಾರ ಮಧ್ಯಾಹ್ನ 1ಕ್ಕೆ ಜಿಗಳಿಯಲ್ಲಿ ನೆರವೇರಲಿದೆ.

### ಮಡಿವಾಳರ ಕೆಂಚಪ್ಪ ಎಂ. ನಿಧನ



ದಾವಣಗೆರೆ ವಾಸಿ ಮಡಿವಾಳರ ಕೆಂಚಪ್ಪ ಎಂ. (68) ಇವರು ದಿನಾಂಕ 21.06.2024ರ ಶುಕ್ರವಾರ ಮಧ್ಯಾಹ್ನ 12.50ಕ್ಕೆ ನಿಧನರಾದರು. ಮೃತರು ಮೂವರು ತಂಗಿಯರು, ಅಳಿಯ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುತ್ತಾರೆ. ಮೃತರ ಅಂತ್ಯಕ್ರಿಯೆಯು ದಿನಾಂಕ 22.06.24ರ ಶನಿವಾರ ಬೆಳಿಗ್ಗೆ 11 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

# ಶಿಥಿಲಾವಸ್ಥೆಯಲ್ಲಿರುವ ಸರ್ಕಾರಿ ಶಾಲೆಗಳನ್ನು ಪರಿಶೀಲಿಸಲು ಸೂಚನೆ

**(1ನೇ ಪುಟದಿಂದ)** ತಿಳಿಸಿದರು. ಜಿಲ್ಲಾಧಿಕಾರಿ ಮಾತಾನಾಡಿ, ಗ್ರಾಮ ಪಂಚಾಯಿತಿ ಅಥವಾ ಸ್ಥಳೀಯ ಅನುದಾನದಲ್ಲಿ ಹೊಸ ಪೈಪ್ ಲೈನ್ ಅಳವಡಿಸುವಂತೆ ಕಾರ್ಯಪಾಲಕ ಇಂಜಿನಿಯರ್ ಗೆ ಸೂಚಿಸಿದರು.

ಜಗಳೂರು ತಾಲ್ಲೂಕಿನ ಕೆರೆಯ ಹಿಂಭಾಗದಲ್ಲಿ ಸುಮಾರು ವರ್ಷಗಳಿಂದ 30 ರಿಂದ 40 ಕೊರಚ ಸಮುದಾಯದ ಕುಟುಂಬಗಳು ವಾಸವಿದ್ದು, ಅತಿಯಾದ ಮಳೆಯ ಕಾರಣ ಗುಡಿಸಲುಗಳು ಹಾಳಾಗಿವೆ, ಪಟ್ಟಣ ಪಂಚಾಯಿತಿಯ ಆದೇಶದ ಮೇರೆಗೆ ಬಸ್ ಸ್ಟ್ಯಾಂಡ್ ಬಳಿ ಇರುವ ಮಳಿಗೆಗಳಲ್ಲಿ ವಾಸಿಸಲು ಅವಕಾಶ ಮಾಡಿಕೊಡಬೇಕು. ಆದರೆ ಇತ್ತೀಚೆಗೆ 53 ಮಳಿಗೆಗಳ ಹರಾಜು ಆದಕಾರಣ ಗುಡಿಸಲುಗಳನ್ನು ಕಳೆದುಕೊಂಡು ಮಳಿಗೆಗಳಲ್ಲಿ ವಾಸವಿದ್ದ ಕುಂಟುಂಬಗಳಿಗೆ ಯಾವುದೇ ರೀತಿಯ ವ್ಯವಸ್ಥೆ ಮಾಡದೇ, ಖಾಲಿ ಮಾಡಲು ಸೂಚಿಸಿರುವ ವಿಚಾರ ಪ್ರಸ್ತಾಪಿಸಿದಾಗ ಜಿಲ್ಲಾಧಿಕಾರಿಗಳು ಕುಟುಂಬಗಳಿಗೆ ಬೇರೆ ಕಡೆ ವಾಸಿಸಲು ಅವಕಾಶ ಕಲ್ಪಿಸಲು ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಿಗೆ ಸೂಚಿಸಿದರು.

ಹರಿಹರ ನಗರದಲ್ಲಿರುವ ಡಿ.ಆರ್.ಎಂ ಶಾಲೆಯ ಕಾಂಪೌಂಡ್ ಶಿಥಿಲ ಸ್ಥಿತಿಯಲ್ಲಿದ್ದು ದುರಸ್ತಿ ಮಾಡುವ ವಿಚಾರವಾಗಿ ಹರಿಹರ ನಗರಸಭೆ ಇವರು ನಗರದಲ್ಲಿರುವ ಡಿ.ಆರ್. ಎಂ. ಶಾಲೆಗೆ ಭೇಟಿ ನೀಡಿ ಪರಿಶೀಲಿಸಲಾಗಿ ಈ ಶಾಲೆಗೆ ಹೊಸದಾಗಿ ಕಾಂಪೌಂಡ್ ನಿರ್ಮಾಣಕ್ಕೆ ಅಂದಾಜು 15 ಲಕ್ಷಗಳು ಅವಶ್ಯಕತೆ ಇದ್ದು, ಹರಿಹರ ನಗರಸಭೆಯಿಂದ ನಿರ್ಮಾಣ ಮಾಡಲು ಅನುದಾನದ ಕೊರತೆ ಇರುವುದರಿಂದ ಸರ್ಕಾರಕ್ಕೆ ಅನುದಾನ ಬಿಡುಗಡೆಗಾಗಿ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದರು.

ದಾವಣಗೆರೆ ಜಿಲ್ಲೆಯ ಜಗಳೂರು ಬಸ್ ಸ್ಟಾಂಡ್, ಎ.ಪಿ.ಎಂ.ಸಿ ಹಾಗೂ ಗೋಶಾಲೆ ಬಳಿ ಎಸ್.ಸಿ, ಎಸ್.ಟಿ ಸಮುದಾಯದವರು ಗುಡಿಸಲುಗಳಲ್ಲಿ ವಾಸವಿದ್ದು ಅವರಿಗೆ ಶೌಚಾಲಯ ನಿರ್ಮಿಸಿಕೊಡವ ವಿಷಯವನ್ನು ತಿಳಿಸಿದಾಗ ಜಿಲ್ಲಾಧಿಕಾರಿಗಳು ಶೌಚಾಲಯ ಅಥವಾ ಸುಲಭ ಶೌಚಾಲಯಗಳನ್ನು ನಿರ್ಮಿಸಿಕೊಡಲು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ ಇವರಿಗೆ ಸೂಚಿಸಿದರು.

ಹರಿಹರ ನಗರಸಭೆಯಿಂದ ವಿವಿಧ ಕಾಮಗಾರಿಗಳಿಗೆ ಇ-ಪ್ರಕ್ಯೂರ್‌ಮೆಂಟ್ ಕರೆಯಲಾಗಿದ್ದು ಉದ್ದೇಶ ಪೂರ್ವಕವಾಗಿ ಟೆಂಡರ್ ನಲ್ಲಿ ಪರಿಶಿಷ್ಟ ಜಾತಿ,ಪ. ಪಂಗಡದವರಿಗೆ ಮೀಸಲಿಟ್ಟಿದ್ದ ಟೆಂಡರ್ ಗಳನ್ನು ರದ್ದು ಮಾಡಿರುತ್ತಾರೆಂದು ಪ್ರಸ್ತಾಪಿಸಿದಾಗ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು ತಾಂತ್ರಿಕ ತೊಂದರೆಗಳನ್ನು ಹೊರತುಪಡಿಸಿ ಯಾವುದೇ ದುರುದ್ದೇಶದಿಂದ ಪ.ಜಾ, ಪ.ಪಂಗಳಿಗೆ ಮೀಸಲಿಟ್ಟ ಟೆಂಡರ್ ಗಳನ್ನು ರದ್ದು ಪಡಿಸಲಾಗಿರುವುದಿಲ್ಲ ಎಂದು ಪೌರಾಯುಕ್ತರು ವರದಿ ನೀಡಿರುತ್ತಾರೆ ಎಂದರು.

ಹಾಸ್ಟೆಲ್ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ಎಲ್ಲಾ ಇಲಾಖೆಗಳಿಂದ ಹೆಚ್ಚು ಹಾಸ್ಟೆಲ್‌ಗಳಿಗೆ ನಿವೇಶನ ಮಂಜೂರು ಮಾಡಬೇಕೆಂದರು. ಸಮಾಜದ ಬದಲಾವಣೆಗೆ ಶಿಕ್ಷಣ ಪ್ರಮುಖವಾಗಿದ್ದು ಈ ನಿಟ್ಟಿನಲ್ಲಿ ಪರಿಶಿಷ್ಟ ಜಾತಿ, ಪ.ಪಂಗಡದ ವಿದ್ಯಾರ್ಥಿಗಳು ಹಾಸ್ಟೆಲ್ ಪ್ರವೇಶಕ್ಕೆ ಬಂದಾಗ ನಿರಾಕರಣೆ ಮಾಡದೇ ಪ್ರವೇಶ ಕಲ್ಪಿಸಲಾಗಿದೆ. ಪ್ರತಿ ಗ್ರಾಮದಲ್ಲಿಯು ಸ್ಮಶಾನ ಇದ್ದು ಇದನ್ನು ಅಭಿವೃದ್ಧಿ ಮಾಡುವ ಮೂಲಕ ಲ್ಯಾಂಡ್ ಬೀಟ್ ಮಾಡಲಾಗುತ್ತದೆ.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್.ಬಿ. ಇಟ್ನಾಳ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಮಲ್ಲಾನಾಯ್ಕ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಕೆ.ನಾಗರಾಜ, ಡಿಡಿಪಿಐ ಕೊಟ್ರೇಶ್, ಪರಿಶಿಷ್ಟ ವರ್ಗ ಗಳ ಅಧಿಕಾರಿ ಬೇಬಿ ಸುನೀತಾ ಹಾಗೂ ಕಿರುವಾಡಿ ಮಂಜುನಾಥ, ಬಾಬಣ್ಣ ಉಪಸ್ಥಿತರಿದ್ದರು.

# ಜನರ ಪಕ್ಷವೇ 'ಕರ್ನಾಟಕ ಜನ ಶಕ್ತಿ ಪಕ್ಷ'

## ಸಂಸ್ಥಾಪನಾ ಸಮಾರಂಭ ಹಾಗೂ ರಾಜಕೀಯ ಸಮಾವೇಶದಲ್ಲಿ ರಾಜನಹಳ್ಳಿ ಮಂಜುನಾಥ್



ದಾವಣಗೆರೆ, ಜೂ.21- ಕರ್ನಾಟಕ ಜನ ಶಕ್ತಿ ಪಕ್ಷವು ಜನರ ಪಕ್ಷ ಹಾಗೂ ಸಾಮಾನ್ಯ ಜನರ ಸಮಸ್ಯೆಗಳ ಕುರಿತು ದನಿ ಎತ್ತುವ ಪಕ್ಷವಾಗಿದೆ ಎಂದು ಸಂಸ್ಥಾಪಕ ಸದಸ್ಯ ರಾಜನಹಳ್ಳಿ ಮಂಜುನಾಥ್ ಹೇಳಿದರು.

ನಗರದ ರೋಟರಿ ಬಾಲಭವನದಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಪಕ್ಷದ ಸಂಸ್ಥಾಪನಾ ಸಮಾರಂಭ ಹಾಗೂ ರಾಜಕೀಯ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ಇದುವರೆಗೆ ಆಳಿದ ಯಾವ ಪಕ್ಷಗಳೂ ಜನ ಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸಲಿಲ್ಲ. ನಮ್ಮ ಪಕ್ಷವು ಯಾವುದೇ ಪಕ್ಷಗಳನ್ನು ವಿರೋಧಿಸುವುದಿಲ್ಲ. ಆದರೆ ಆ ಪಕ್ಷಗಳ ನೀತಿಗಳಿಗೆ ನಮ್ಮ ವಿರೋಧವಿದೆ ಎಂದು ಹೇಳಿದರು.

ಉತ್ತಮ ಆರೋಗ್ಯ ಸೇವೆ ಹಾಗೂ ಗುಣ ಮಟ್ಟದ ಶಿಕ್ಷಣ ಪ್ರತಿಯೊಬ್ಬರಿಗೂ ದೊರೆಯುವಂತಾಗಬೇಕು. ಆದರೆ ಇಂದು ಉಳ್ಳವರ ಮಕ್ಕಳು ಮಾತ್ರ ಅತ್ಯುನ್ನತ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಬಡವರ ಮಕ್ಕಳು ಮೂಲ ಸೌಲಭ್ಯಗಳಿಲ್ಲದ ಸರ್ಕಾರಿ ಶಾಲೆಗಳಲ್ಲಿದ್ದಾರೆ.

ಬಡವರು ಆಧುನಿಕ ಸೌಲಭ್ಯಗಳಿಲ್ಲದ ಸರ್ಕಾರಿ ಆಸ್ಪತ್ರೆಗಳಿಗೆ ಚಿಕಿತ್ಸೆಗೆ ಬಂದರೆ, ಹಣವಂತರು ಅತ್ಯಾಧುನಿಕ ಸೌಕರ್ಯಗಳ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇಂತಹ ತಾರತಮ್ಯ ನಿವಾರಣೆಯಾಗಬೇಕಿದೆ ಎಂದು ಹೇಳಿದರು.

42 ಅಸಂಘಟಿತ ವಲಯದ ಕಾರ್ಮಿಕರು ಇಂದು ಆರ್ಥಿಕವಾಗಿ ದುರ್ಬಲರಾಗಿದ್ದಾರೆ. ಉದ್ಯೋಗ ಭದ್ರತೆ ಇಲ್ಲ ಎಂದ ಅವರು, ಬೆಲೆ ಏರಿಕೆಯಿಂದಾಗಿ ಜನ ಸಾಮಾನ್ಯರು ಜೀವನ ಸಾಗಿಸುವುದೇ ಕಷ್ಟವಾಗಿದೆ.

ಬಡವರಾಗಿ ಹುಟ್ಟಿದ್ದೇ ತಪ್ಪು ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ಬಗ್ಗೆ ದನಿ ಎತ್ತಬೇಕಿದೆ ಎಂದರು.

ರೈತರ ಸಮಸ್ಯೆಗಳನ್ನಂತೂ ಕೇಳುವವರೇ ಇಲ್ಲ. ನಿರುದ್ಯೋಗ ತಾಂಡವವಾಡುತ್ತಿದೆ. ಪ್ರತಿ ವರ್ಷ ಅಷ್ಟೊಂದು ಸಾವಿರ ಪದವೀಧರರು ಹೊರ ಬರುತ್ತಿ ದ್ದರೂ ಉದ್ಯೋಗ ಸಿಗುತ್ತಿಲ್ಲ ಎಂದರೆ ಈ ಬಗ್ಗೆ ಚಿಂತಿಸುವ ಅಗತ್ಯವಿದೆ. ನಿರುದ್ಯೋಗ ನಿರ್ಮೂಲನೆ ನಮ್ಮ ಪಕ್ಷದ ಆದ್ಯತೆಯಾಗಲಿದೆ ಎಂದರು.

ಹಣವಂತ ಪಕ್ಷಗಳ ಬದಲಿಗೆ ಜನ ಸಾಮಾನ್ಯರ ಪಕ್ಷ ಹುಟ್ಟುಹಾಕಬೇಕಿದೆ. ನಿಜವಾದ ಜನಪರ ಕಾಳಜಿ ವುಳ್ಳ, ನಾಡು, ನುಡಿ, ಜಲ ರಕ್ಷಣೆಗೆ ಬದ್ಧರಾದವರು ಒಟ್ಟಾಗಿ ಪಕ್ಷ ಬೆಳೆಸುವ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಮುಖಂಡರುಗಳಾದ ಕೆ.ಎನ್. ರವಿಕುಮಾರ್, ಬಿ.ಜಿ. ಶಂಕರ್ ರಾವ್, ಗುರಪ್ಪ ಬಿ.ದೇಸಾಯಿ, ಎಂ.ಜಿ. ಶ್ರೀಕಾಂತ್, ಪೃಥ್ವಿರಾಜ್ ನರೇನಹಳ್ಳಿ, ಇಮಾಂ ಸಾಬ್, ದ್ರಾಕ್ಷಾಯಿಣಿ ಹಿರೇಮಠ್, ಸಿದ್ದಮ್ಮ ವಾಲಿ, ಶಶಿಧರ್ ನಾಯ್ಕ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಕೇಂದ್ರದ ಮಧ್ಯಂತರ ಬಜೆಟ್‌ನಲ್ಲಿ ಬಿಸಿಯೂಟ ತಯಾರಕರಿಗೆ ವೇತನ ಹೆಚ್ಚಿಸಲು ಮನವಿ



ದಾವಣಗೆರೆ, ಜೂ. 21- ಎಐಟಿಯುಸಿ ಅಕ್ಷರ ದಾಸೋಹ ಬಿಸಿಯೂಟ ತಯಾರಕರ ಫೆಡರೇಶನ್ ರಾಜ್ಯ ಸಮಿತಿ ಕರೆಯ ಮೇರೆಗೆ ಕೇಂದ್ರ ಸರ್ಕಾರದ ಮಧ್ಯಂತರ ಬಜೆಟ್ ನಲ್ಲಿ ಬಿಸಿಯೂಟ ತಯಾರಕರಿಗೆ ವೇತನ ಹೆಚ್ಚಿಸುವಂತೆ ಜಿಲ್ಲಾ ಬಿಸಿಯೂಟ ತಯಾರಕರ ನಿಯೋಗವು ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಇಂದು ಮನವಿ ಸಲ್ಲಿಸಿತು.

ಫೆಡರೇಷನ್ನಿನ ರಾಜ್ಯ ಪ್ರಧಾನ ಕಾರ್ಯದರ್ಶಿ ಆವರಗೆರೆ ಚಂದ್ರು ನೇತ್ರತ್ವದಲ್ಲಿ ಸಂಸದರ ನಿವಾಸಕ್ಕೆ ತೆರಳಿದ ಬಿಸಿಯೂಟ ತಯಾರಕರು, ಕಳೆದ 20 ವರ್ಷಗಳಿಂದ ಕೇಂದ್ರ ಸರ್ಕಾರ ಬಿಸಿಯೂಟ ತಯಾರಕರಿಗೆ ಗೌರವ ಸಂಭಾವನೆಯಾಗಿ ರೂಪಾಯಿ 600 ಮಾತ್ರ ನೀಡುತ್ತಿದ್ದು (ಕರ್ನಾಟಕ ರಾಜ್ಯ ಸರ್ಕಾರ ರೂ. 3000 ನೀಡುತ್ತಿದೆ) ಇದರಿಂದ ಬಿಸಿಯೂಟ ತಯಾರಕರು ಜೀವನ ನಡೆಸುವುದು ತುಂಬಾ ಕಷ್ಟಕರವಾಗಿದ್ದು, ಕೇಂದ್ರ ಸರ್ಕಾರದ ಮಧ್ಯಂತರ ಬಜೆಟ್ ನಲ್ಲಿ ಬಿಸಿಯೂಟ ತಯಾರಕರಿಗೆ ವೇತನ ಹೆಚ್ಚಿಸುವಂತೆ ಹಾಗೂ ಕೆಲಸದ ಭದ್ರತೆ ಸೇರಿದಂತೆ ಮತ್ತಿತರೆ ಸೌಲತ್ತುಗಳನ್ನು ಜಾರಿಗೊಳಿಸುವಂತೆ ಸಂಸತ್ ನಲ್ಲಿ ತಾವುಗಳು ಗಮನ ಸೆಳೆಯಬೇಕೆಂದು ಮನವಿ ಸಲ್ಲಿಸುವುದರ ಮೂಲಕ ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ರವರಿಗೆ ಆಗ್ರಹಿಸಿದರು.

ಬಿಸಿಯೂಟ ತಯಾರಕರ ನಿಯೋಗದೊಂದಿಗೆ ಬಹಳ ಸಾವಧಾನವಾಗಿ ಮಾತನಾಡಿ ಮನವಿ ಸ್ವೀಕರಿಸಿದ ಸಂಸದರು, ಬಿಸಿಯೂಟ ಯೋಜನೆ ಬಗ್ಗೆ ಕೇಂದ್ರ ಸರ್ಕಾರ ಗೌರವ ಸಂಭಾವನೆ ನೀಡುತ್ತಿರುವುದರ ಬಗ್ಗೆ ಮತ್ತಷ್ಟು ವಿವರಗಳನ್ನು ನೀಡುವಂತೆ ನಿಯೋಗಕ್ಕೆ ತಿಳಿಸಿದರು.

ಮನವಿ ಸಲ್ಲಿಸಲು ಸಂಸದರ ನಿವಾಸಕ್ಕೆ ತೆರಳಿದ ಸಂದರ್ಭದಲ್ಲಿ ಬಿಸಿಯೂಟ ತಯಾರಕರ ಫೆಡರೇಶನ್ ಜಿಲ್ಲಾ ಸಮಿತಿ ವತಿಯಿಂದ ನೂತನ ಲೋಕಸಭಾ ಸದಸ್ಯರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ರವರಿಗೆ ಹೂ ಗುಚ್ಛ ನೀಡುವುದರೊಂದಿಗೆ ಅಭಿನಂದಿಸಲಾಯಿತು.

ಈ ವೇಳೆ ಮುಖಂಡರುಗಳಾದ ರುದ್ರಮ್ಮ ಬೆಳಲಗೆರೆ, ಸಿ. ರಮೇಶ್, ಸರೋಜ, ವಿಜಯಲಕ್ಷ್ಮಿ, ಗೀತಾ, ದೇವಮ್ಮ ಮುನಿರಾ ಬಾನು, ಜ್ಯೋತಿ, ಶಬೀನಾ ತಾಜ್, ನೇತ್ರಾವತಿ, ಜ್ಯೋತಿಲಕ್ಷ್ಮಿ, ಪದ್ಮಾ ಮೀನಾಕ್ಷಿ, ವನಜಾಕ್ಷಮ್ಮ, ಚನ್ನಮ್ಮ ಜಯಮ್ಮ ಮಳಲ್ಕೆರೆ, ಹಸೀನಾ ಬಾನು, ಲಕ್ಷ್ಮಮ್ಮ ಸುಭದ್ರಮ್ಮ, ಸುಮಾ, ಸಾವಿತ್ರಮ್ಮ ಸೇರಿದಂತೆ ಮುಂತಾದವರು ಇದ್ದರು.

# ಯೋಗ ಜೀವನ ಶೈಲಿಯಾಗಬೇಕು



ಬೆಂಗಳೂರು, ಜೂ. 21 - ಪ್ರತಿಯೊಬ್ಬರೂ ಯೋಗವನ್ನು ಜೀವನ ಶೈಲಿಯನ್ನಾಗಿ ಮಾಡಿಕೊಳ್ಳಬೇಕು ಎಂದು ಕೇಂದ್ರ ಭಾರೀ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಕರೆ ನೀಡಿದ್ದಾರೆ.

ಹತ್ತನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಜಗತ್ತಿಗೆ ಭಾರತ ಕೊಟ್ಟ ಅಮೂಲ್ಯ ಕೊಡುಗೆ ಯೋಗ, ಭಾರತ ಯೋಗದ ಮೂಲಕ ಇಡೀ ಜಗತ್ತನ್ನು ಬೆಸೆದಿದೆ. ಯೋಗವೆಂದರೆ 'ಜೋಡಿಸು' 'ಸೇರಿಸು' 'ಕೂಡಿಸು' ಎಂಬ ಅರ್ಥ. ಇದಕ್ಕೆ ಸಾರ್ಥಕತೆ ತರುವಲ್ಲಿ ಯೋಗ ಇಡೀ ಜಗತ್ತನ್ನು ಬೆಸೆದುಕೊಂಡು ಬೆಳಗುತ್ತಿದೆ ಎಂದರು.

ಯೋಗವನ್ನು ವಿಶ್ವಸಂಸ್ಥೆಗೆ ತೆಗೆದುಕೊಂಡು ಹೋಗಿ ಜಾಗತಿಕ ಮಟ್ಟದಲ್ಲಿ ಪ್ರಚಾರಗೊಳಿಸಿ ಭಾರತದ ನೆಲದಲ್ಲಿ ನಿಂತು ಜಗತ್ತನ್ನು ನೋಡುವ ಹಿರಿಮೆ ತಂದುಕೊಟ್ಟ ಪ್ರಧಾನಿ ನರೇಂದ್ರ ಮೋದಿ ಅವರನ್ನು ಮನಸಾರೆ ಅಭಿನಂದಿಸುತ್ತೇನೆ ಎಂದು ಹೇಳಿದರು.

ಯೋಗ ವಿಕಸನಕ್ಕೆ ಪೂರಕ, ಮನುಕುಲಕ್ಕೆ ಪೂರಕ ಹಾಗೂ ಸಾಧನೆಯ ಮೆಟ್ಟಿಲೇರಲು ಪೂರಕ. ಯೋಗಾಭ್ಯಾಸ ಆತ್ಮವಿಶ್ವಾಸ ಹೆಚ್ಚಿಸುತ್ತದೆ. ಮನಸ್ಸನ್ನು ನಿಯಂತ್ರಿಸಿ ದೇಹವನ್ನು ಪುನರುಜ್ಜೀವನಗೊಳಿಸುತ್ತದೆ. ಪ್ರತಿದಿನ ಯೋಗ ಮಾಡುವುದರಿಂದ ದೇಹ, ಮನಸ್ಸು ಚೈತನ್ಯಶೀಲವಾಗಿರುತ್ತದೆ.

ಯೋಗಾಭ್ಯಾಸಕ್ಕೆ 5,000 ವರ್ಷಗಳ ಇತಿಹಾಸವಿದೆ. ಋಗ್ವೇದದಲ್ಲಿ ಯೋಗದ ಬಗ್ಗೆ ಉಲ್ಲೇಖವಿದೆ, ಯೋಗ ದೇಶಕ್ಕೆ ಆರೋಗ್ಯವಂತ ಮಾನವ ಸಂಪನ್ಮೂಲ ಸೃಷ್ಟಿ ಮಾಡುತ್ತದೆ. ದೃಢತೆಯ ನಾಯಕತ್ವಕ್ಕೆ ಯೋಗ ದೊಡ್ಡ ಕಾಣಿಕೆ ನೀಡುತ್ತಿದೆ.

ಪ್ರಧಾನಿ ನರೇಂದ್ರ ಮೋದಿ ಯೋಗವನ್ನೇ ಬದುಕು ಮಾಡಿಕೊಂಡಿರುವ ನಿಜಯೋಗಿ, ಅವರ ಜೀವನ ಶೈಲಿ ಯುವಕರಿಗೆ ಪ್ರೇರಣೆಯಾಗಿದೆ, ಇಡೀ ಜಗತ್ತು ಯೋಗವನ್ನು ಅವಲಂಬಿಸುತ್ತಿದೆ ಎಂದರೆ ಭಾರತವನ್ನು ವಿಶ್ವಗುರುವಾಗಿ ಪರಿಭಾವಿಸುತ್ತಿದೆ ಎಂದೇ ಅರ್ಥ ಎಂದರು.

# ನನ್ನ ರಾಜಕೀಯ ಅಂತ್ಯ ಜನ ತೀರ್ಮಾನ ಮಾಡ್ತಾರೆ: ಡಿಕೆಶಿ

ಬೆಂಗಳೂರು, ಜೂ. 21 - ನನ್ನ ರಾಜಕೀಯ ಅಂತ್ಯ ತೀರ್ಮಾನ ಮಾಡೋರು ಜನರು, ಬೇರೆ ಯಾರೂ ಅಲ್ಲ. ಜನರೇ ನನ್ನ ಹಿಂದಿರುವ ಶಕ್ತಿ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಯೋಗ ದಿನ ಕಾರ್ಯಕ್ರಮದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಸ್ಪರ್ಧೆ ಮಾಡಿದರೆ ತಮ್ಮ ರಾಜಕೀಯ ಭವಿಷ್ಯ ಅಂತ್ಯವಾಗಲಿದೆ ಎಂಬ ಹೇಳಿಕೆ ನೀಡಿರುವ ಮಾಜಿ ಸಚಿವ ಸಿ.ಪಿ.ಯೋಗೇಶ್ವರ್ ದೊಡ್ಡವರು. ಅವರ ಮಾತಿಗೆ ಪ್ರತಿಕ್ರಿಯೆ ನೀಡುವಷ್ಟು ಸಮಯ ನನ್ನ ಬಳಿ ಇಲ್ಲ ಎಂದರು.

ನಾನೂ ರಾಮನಗರ ಜಿಲ್ಲೆಯವನು. ನಿಮ್ಮ ಋಣ ತೀರಿಸಲು ಬದ್ಧನಿದ್ದೇನೆ. ಶಕ್ತಿ ಕೊಡಿ ಎಂದು ಕ್ಷೇತ್ರದ ಜನರ ಬಳಿ ಕೇಳಿಕೊಂಡಿದ್ದೇನೆ. ನನ್ನ ಮೇಲೆ ವಿಶ್ವಾಸವಿದ್ದರೆ ಬೆಂಬಲ ನೀಡುತ್ತಾರೆ ಎಂದರು.

ಸ್ವಪ್ರತಿಷ್ಠೆಗಾಗಿ ದೇಶದ ಸಂಪತ್ತು ಹಾಳು ಮಾಡುತ್ತಿದ್ದಾರೆ ಎಂಬ ಸುರೇಶ್ ಕುಮಾರ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿ, ಚನ್ನಪಟ್ಟಣದಲ್ಲಿ ಉಪಚುನಾವಣೆ ನಡೆದರೆ ಕನಕಪುರದಲ್ಲಿ ಏಕೆ ಉಪಚುನಾವಣೆ ನಡೆಯುತ್ತದೆ? ನಾನು ಕನಕಪುರದ ಶಾಸಕ, ಪಕ್ಷದ ಅಧ್ಯಕ್ಷನಾಗಿ ನನ್ನ ಮೇಲೆ ಜವಾಬ್ದಾರಿ ಇದೆ. ಇದೂ ನನ್ನದೇ ಕ್ಷೇತ್ರ, ನನ್ನದೇ ನಾಯಕತ್ವ, ಸಿದ್ದರಾಮಯ್ಯ ಹಾಗೂ ನಾನು ಸೇರಿ ಚುನಾವಣೆ ನಡೆಸುತ್ತೇವೆ ಎಂದರು.

# ಗ್ರಾಮಾಂತರದಲ್ಲಿ ರಕ್ತದಾನ ಜಾಗೃತಿ ಮೂಡಿಸಿ



ದಾವಣಗೆರೆ, ಜೂ.21- ಗ್ರಾಮೀಣ ಪ್ರದೇಶದಲ್ಲಿ ರಕ್ತದಾನ ಜಾಗೃತಿ ಮೂಡಿಸಿ, ರಕ್ತದಾನ ಮಾಡುವಂತೆ ಪ್ರೋತ್ಸಾಹಿಸಬೇಕೆಂದು ನ್ಯಾಯಮೂರ್ತಿ ಲೋಕಾಯುಕ್ತ ಬಿ. ಎಸ್. ಪಾಟೀಲ್ ಹೇಳಿದರು.

ಇಲ್ಲಿನ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಜೀನ್ ಹೆನ್ರಿ ಡ್ಯುನಾಂಟ್ ಸಭಾಂಗಣದಲ್ಲಿ ಈಚೆಗೆ ವಿಶ್ವ ರಕ್ತದಾನಿಗಳ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶದಲ್ಲಿ ಪ್ರತಿ ನಿತ್ಯ 12 ಸಾವಿರಕ್ಕಿಂತ ಅಧಿಕ ಜನ ರಕ್ತದ ಕೊರತೆಯಿಂದ ಸಾವನ್ನಪ್ಪುತ್ತಿದ್ದಾರೆ. ಆದ್ದರಿಂದ ಅವಶ್ಯಕತೆ ಇರುವವರಿಗೆ ರಕ್ತ ದಾನ ಮಾಡುವಂತೆ ಮನವಿ ಮಾಡಿದರು.

ಅತ್ಯಂತ ಶ್ರೇಷ್ಠ ಸೇವೆಯಲ್ಲಿ ರಕ್ತದಾನವು ಒಂದಾಗಿದೆ. ಆದ್ದರಿಂದ ಯುವಕರು ರಕ್ತದಾನ ಮಾಡುವ ಮನಸ್ಥಿತಿ ಬೆಳೆಸಿಕೊಳ್ಳಿ ಎಂದು ಹೇಳಿದರು.

ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ರಾಜ್ಯ ಉಪಾಧ್ಯಕ್ಷ ಗೋಪಾಲ್ ಹೋಸೂರ್ ಮಾತನಾಡಿ, ರಕ್ತದಾನವು ಜಾತಿ, ಧರ್ಮ ಮೀರಿದಂತಹ ಒಂದು ಅದ್ಭುತ ಸೇವೆಯಾಗಿದೆ. ಮನುಷ್ಯ ಮಾಡುವ ರಕ್ತದಾನವು ಪರಮ ಶ್ರೇಷ್ಠ ಎಂದರು ಸ್ವಯಂ ಪ್ರೇರಿತ ರಕ್ತದಾನ ಸಮಾಜವನ್ನು ಒಗ್ಗೂಡಿಸುವ ಮತ್ತು ಆರೋಗ್ಯಯುತ ಸ್ವಾಸ್ಥ್ಯ ಸಮಾಜ ನಿರ್ಮಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ ಎಂದು ತಿಳಿಸಿದರು.

ಇದೇ ವೇಳೆ 23ಕ್ಕೂ ಹೆಚ್ಚು ಬಾರಿ ರಕ್ತದಾನ ಮಾಡಿರುವ ಶ್ರೀನಿವಾಸ ಎಸ್. ಪಂಡಿತ್, ದೇವದಾಸ ಪಾಟ್ಕರ್, ಬಿ.ಪಿ. ರಾಜು, ಆರ್. ಹರೀಶ್ ಕುಮಾರ್, ಮೆಹಬೂಬ್ ಬಾಷಾ, ಕೆ.ಎ. ರಮೇಶ್ ಸೇರಿದಂತೆ ಅವನೀತ್ ಅವರಿಗೆ ಸನ್ಮಾನಿಸಲಾಯಿತು.

ಸಂಸ್ಥೆಯ ಸಭಾಪತಿ ವಿಜಯ್ ಕುಮಾರ್ ಪಾಟೀಲ್ ಶಾವಂತಗೇರಾ, ಆನಂದ್ ಎಸ್. ಜಿಗಜಿನ್ನಿ, ಕೋಶಾಧ್ಯಕ್ಷ ಯತೀಶ್ ಬೈಕಂಪಾಡಿ, ಟಿ.ಎನ್. ರವಿಕುಮಾರ್ ಮತ್ತಿತರರಿದ್ದರು.

# ನೀಟ್ ಪರೀಕ್ಷೆ ತಡೆ ಹಿಡಿಯಬೇಕು, ನೆಟ್ ಮರುಪರೀಕ್ಷೆ ದಿನಾಂಕ ಪ್ರಕಟಿಸಿ

**ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಅಜಯ ಕಾಮತ್ ಒತ್ತಾಯ**

ದಾವಣಗೆರೆ, ಜೂ. 20- ಪ್ರಕರಣವು ತಾರ್ಕಿಕ ಅಂತ್ಯ ತಲುಪುವವರೆಗೂ ನೀಟ್ ಕೌನ್ಸೆಲಿಂಗ್ ತಡೆ ಹಿಡಿಯಬೇಕು. ನೆಟ್ ಮರು ಪರೀಕ್ಷೆ ದಿನಾಂಕವನ್ನು ಕೂಡಲೇ ಪ್ರಕಟಿಸಿ, ನೇರವಾಗಿ ಯುಜಿಸಿಯೇ ಪರೀಕ್ಷೆ ನಡೆಸಬೇಕೆಂದು ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಅಜಯ ಕಾಮತ್ ಒತ್ತಾಯಿಸಿದ್ದಾರೆ.

ನೀಟ್ ಯುಜಿಸಿಯಲ್ಲಿನ ಭ್ರಷ್ಟಾಚಾರ ಹೊರ ಬಿದ್ದಿರುವ ಬೆನ್ನಲ್ಲೇ, ಎನ್ ಟಿಎ ಯಿಂದ ಆಯೋಜಿಸಲ್ಪಟ್ಟ ನೆಟ್ ಪರೀಕ್ಷೆಯನ್ನು ಶಿಕ್ಷಣ ಸಚಿವಾಲಯವು ರದ್ದುಗೊಳಿಸಿದೆ. ಪರೀಕ್ಷೆ ನಡೆದ ಮರುದಿನವೇ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದಿದ್ದಾರೆ.

ಮೊನ್ನೆ ನೀಟ್ ಆದರೆ ಇಂದು ನೆಟ್ ಪರೀಕ್ಷೆಯಲ್ಲಿ ವ್ಯಾಪಕ ಭ್ರಷ್ಟಾಚಾರ ಕೇಳಿ ಬಂದಿದೆ. ಮಿಲಿಯಾಂತರ ವಿದ್ಯಾರ್ಥಿಗಳು ವರ್ಷಗಟ್ಟಲೇ ಈ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಾರೆ. ನೀಟ್ ಪರೀಕ್ಷೆಯಲ್ಲಿ ನಡೆದ ಗಂಭೀರ ಪ್ರಮಾಣದ ಅವ್ಯವಹಾರವನ್ನು ಚಿಕ್ಕದೆಂದು ಬಿಂಬಿಸಲು ಶಿಕ್ಷಣ ಸಚಿವಾಲಯ ಮತ್ತು ಎನ್‌ಟಿಎ ಪ್ರಯತ್ನಿಸುತ್ತಲೇ ಇವೆ. ನೆಟ್ ಪರೀಕ್ಷೆಯಲ್ಲಿ ನಡೆದ ಅವ್ಯವಹಾರಗಳು ಈ ಪ್ರಕರಣದ ತೀವ್ರತೆಯನ್ನು ಪ್ರತಿಬಿಂಬಿಸುತ್ತಿವೆ.

ಅಷ್ಟೇ ಅಲ್ಲದೆ, ಪರೀಕ್ಷಾ ಪ್ರಕ್ರಿಯೆಯ ಪಾರದರ್ಶಕತೆ ಮತ್ತು ಪಾವಿತ್ರ್ಯತೆ ಕಾಪಾಡಲು ಪರೀಕ್ಷೆ ನಡೆದ ಮರು ದಿನವೇ ಅದನ್ನು ರದ್ದು ಪಡಿಸಿ ಸಿಬಿಐಗೆ ಒಪ್ಪಿಸಲಾಗಿದೆ. ಈ ನಡೆಯು ಸಾಕಷ್ಟು ಪ್ರಶ್ನೆಗಳನ್ನು ಹುಟ್ಟು ಹಾಕಿದೆ.

ಪರೀಕ್ಷಾ ಕೇಂದ್ರಗಳಿಗೆ ತಲುಪಲು ದೂರದ ಪ್ರಯಾಣ, ವಸತಿ, ಅಧಿಕ ಪ್ರಮಾಣದ ಪರೀಕ್ಷಾ ಶುಲ್ಕ ಸೇರಿದಂತೆ ಮಿಲಿಯಾಂತರ ಅಭ್ಯರ್ಥಿಗಳ ವೆಚ್ಚಕ್ಕೆ ಯಾರು ಹೊಣೆ? ಎಲ್ಲದಕ್ಕೂ ಮಿಗಿಲಾಗಿ ಎನ್.ಟಿ.ಎ ಪ್ರದರ್ಶಿಸುತ್ತಿರುವ ಬೇಜವಾಬ್ದಾರಿ, ಅಸಮರ್ಥತೆ ಮತ್ತು ಪಾರದರ್ಶಕತೆಯ ಕೊರತೆಯು ಮಿಲಿಯಾಂತರ ಅಭ್ಯರ್ಥಿಗಳ ಭವಿಷ್ಯವನ್ನು ಅತಂತ್ರಕ್ಕೆ ದೂಡಿದೆ.

ವ್ಯಾಪಾರೀಕರಣ, ಅನಾರೋಗ್ಯಪೀಡಿತ ಸ್ಪರ್ಧೆ ಮತ್ತು ವ್ಯಾಪಕ ಭ್ರಷ್ಟಾಚಾರ ಜಾರಿಯಲ್ಲಿರುವಾಗ, ಒಂದು ಕೇಂದ್ರೀಕೃತ ಪರೀಕ್ಷೆಯು ಭ್ರಷ್ಟಾಚಾರದ ಏಕಸ್ವಾಮ್ಯಾಧಿಕಾರವನ್ನುಂಟು ಮಾಡಬಲ್ಲದೆ ಹೊರತು, ಈ ಯಾವ ಸಮಸ್ಯೆಯನ್ನೂ ಪರಿಹರಿಸುವುದಿಲ್ಲ ಎಂದು ಅಜಯ ಕಾಮತ್ ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ, ನೀಟ್ ಮತ್ತು ನೆಟ್ ಪರೀಕ್ಷೆಗಳಲ್ಲಿ ನಡೆದಿರುವ ಅಕ್ರಮದ ಕುರಿತು ಸಮರೋಪಾದಿಯಲ್ಲಿ ಸಮಗ್ರ ನ್ಯಾಯಾಂಗ ತನಿಖೆ ನಡೆಸಬೇಕು. ಶಿಕ್ಷಕರು ಮತ್ತು ಸೌಲಭ್ಯಗಳನ್ನು ಒದಗಿಸಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸಬೇಕು ಹಾಗೂ ಪ್ರಬಲ ಕೋಚಿಂಗ್ ಸಂಸ್ಥೆಗಳ ಮೇಲೆ ನಿಬಂಧನೆ ವಿಧಿಸಬೇಕು ಎಂದು ಆಗ್ರಹಿಸಿದ್ದಾರೆ.

# 39ನೇ ವಾರ್ಡ್‌ನಲ್ಲಿ ವನ ಮಹೋತ್ಸವ



ದಾವಣಗೆರೆ, ಜೂ. 21- ಕ್ಲೀನ್ ಅಂಡ್ ಗ್ರೀನ್ (ದಾವಣಗೆರೆ), ಕರುಣಾ ಜೀವ ಕಲ್ಯಾಣ ಟ್ರಸ್ಟ್, ಭಾರತೀಯ ವಿಕಾಸ ಪರಿಷತ್, ವಿದ್ಯಾನಗರ ರೋಟರಿ ಕ್ಲಬ್ ಹಾಗೂ ತರಳಬಾಳು-ವಿದ್ಯಾನಗರ ನಾಗರಿಕರು ಹಾಗೂ ಮಹಾಗನರ ಪಾಲಿಕೆಯ 39ನೇ ವಾರ್ಡಿನ ಸದಸ್ಯರ ಸಹಕಾರದಿಂದ ವಿವಿಧ ಪಾರ್ಕ್‌ಗಳಲ್ಲಿ ಸಸಿ ನೆಡುವ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

# ಬಿಇಎ ಶಾಲೆಯಲ್ಲಿ ಯೋಗ ದಿನಾಚರಣೆ



ದಾವಣಗೆರೆ, ಜೂ. 21- ನಗರದ ಪಿ.ಜೆ. ಬಡಾವಣೆಯಲ್ಲಿರುವ ಬಿಇಎ ನರ್ಸರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ, 10ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಶಾಲೆಯ ಆವರಣದಲ್ಲಿ ವಿದ್ಯಾರ್ಥಿಗಳಿಗೆ ಯೋಗಾಭ್ಯಾಸ ಮಾಡಿಸಲಾಯಿತು.

# ಭರಮಸಾಗರದಲ್ಲಿ ನಾಳೆ ಶಾರದಾ ಪುರಸ್ಕಾರ ಪ್ರದಾನ



ಭರಮಸಾಗರ, ಜೂ.21- ಪವಮಾನ ಪ್ರತಿಷ್ಠಾನದ ವತಿಯಿಂದ ಸ್ಥಳೀಯ ವಾಣಿ ನಿವಾಸ ಅಂಗಳದಲ್ಲಿ ನಾಡಿದ್ದು ದಿನಾಂಕ 23ರ ಭಾನುವಾರ ಸಂಜೆ 4.30ಕ್ಕೆ 'ಶಾರದಾ ಪುರಸ್ಕಾರ' ಕಾರ್ಯಕ್ರಮ ನಡೆಯಲಿದೆ.

ಅಂದು 2023-24ನೇ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಭರಮಸಾಗರದ 5 ಶಾಲೆಯ ಮಕ್ಕಳಿಗೆ ಶಾರದಾ ಪುರಸ್ಕಾರ ನೀಡಲಾಗುವುದು. ಡಿ.ವಿ.ಎಸ್. ವಿದ್ಯಾ ಸಂಸ್ಥೆಯ ಎಚ್.ಎಂ ಭಾವನಾ, ಶ್ರೀ ಅಕ್ಕಮಹಾದೇವಿ ಪೌಢ ಶಾಲೆಯ ವಿ. ಅಂಕಿತಾ, ಸರ್ಕಾರಿ ಪ್ರೌಢ ಶಾಲೆಯ ಬಿ. ಐಶ್ವರ್ಯ, ಬಾಪೂಜಿ ಪ್ರೌಢ ಶಾಲೆಯ ಎಸ್. ಬಸವರಾಜ್ ಮತ್ತು ಟಿ.ಪಿ. ಸಾನ್ವಿ ಕಶ್ಯಪ್ ಶಾರದಾ ಪುರಸ್ಕಾರ ಪಡೆಯಲಿದ್ದಾರೆ.

ಗ್ರಾ.ಪಂ. ಅಧ್ಯಕ್ಷೆ ರತ್ನಮ್ಮ ಆರ್. ಜಯ್ಯಣ್ಣ, ಗ್ರಾಮಾಭಿವೃದ್ಧಿ ಯೋಜನೆ ಟ್ರಸ್ಟ್ ಯೋಜನಾಧಿಕಾರಿ ನಾಗರಾಜ್ ಕುಲಾಲ್, ದಂತ ತಜ್ಞೆ ಡಾ. ರೂಪಾ ಶಶಿಕಾಂತ್, ಜಿ.ಕೆ. ಗುರು ಕಮಲೇಶ್, ಎಸ್. ನಾರಾಯಣರಾವ್ ಕಾರ್ಯಕ್ರಮದಲ್ಲಿ ಭಾಗವಹಿಸುವರು.

# ಬಿಜೆಪಿಯಿಂದ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳ : ಖಂಡನೆ

ಪಣಜಿ, ಜೂ. 21 – ಗೋವಾ ಬಿಜೆಪಿ ಸರ್ಕಾರ ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ಮೌಲ್ಯ ವರ್ಧಿತ ತೆರಿಗೆಯನ್ನು ಹೆಚ್ಚಿಸಿದೆ. ಇದರಿಂದಾಗಿ ಪೆಟ್ರೋಲ್ ಬೆಲೆ 1 ರೂ. ಹಾಗೂ ಡೀಸೆಲ್ ಬೆಲೆ 36 ಪೈಸೆ ಹೆಚ್ಚಳವಾಗಿದೆ. ಬೆಲೆ ಹೆಚ್ಚಳ ಮಾಡುವ ಬಗ್ಗೆ ಶುಕ್ರವಾರ ಅಧಿಸೂಚನೆ ಹೊರಡಿಸಲಾಗಿದೆ. ಇದರಿಂದಾಗಿ ಗೋವಾದಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ 95.40 ರೂ. ಹಾಗೂ ಡೀಸೆಲ್ ಬೆಲೆ 87.90 ರೂ.ಗಳಿಗೆ ತಲು ಪಿದೆ. ತೈಲ ಬೆಲೆ ಏರಿಕೆಯನ್ನು ಖಂಡಿಸಿರುವ ಕಾಂಗ್ರೆಸ್ ನಾಯಕ ಯೂರಿ ಅಲೆಮಾವೋ, ಸರ್ಕಾರ ಸಂವೇದನಾ ರಹಿತವಾಗಿ ವರ್ತಿಸುತ್ತಿದೆ. ಬೆಲೆ ಏರಿಕೆ ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದ್ದಾರೆ.

# ಪರಿಸರ ರಕ್ಷಣೆ ಎಲ್ಲರ ಆದ್ಯತೆಯಾಗಲಿ



**ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಬಿ.ಡಿ. ಕುಂಬಾರ ಕರೆ**

ದಾವಣಗೆರೆ, ಜೂ. 21 - ದಾವಣಗೆರೆ ವಿಶ್ವವಿದ್ಯಾನಿಲಯ ಕಂಪ್ಯೂಟರ್ ವಿಜ್ಞಾನ ವಿಭಾಗ, ಎಂಸಿಎ ಮತ್ತು ಎನ್‌ಎಸ್‌ಎಸ್ ಸಹಯೋಗದಲ್ಲಿ ಏರ್ಪಡಿಸಿದ್ದ ಪರಿಸರ ದಿನವನ್ನು ಆಚರಿಸಲಾಯಿತು.

ಸಸಿ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಕುಲಪತಿ ಪ್ರೊ.ಬಿ.ಡಿ. ಕುಂಬಾರ ಮಾತನಾಡಿ, ಮನುಷ್ಯನ ಜೀವನ ಪರಿಸರದ ಜೊತೆಗೆ ಬೆಸೆದುಕೊಂಡಿದೆ. ಪರಿಸರ ರಕ್ಷಿಸದಿದ್ದರೆ ಭವಿಷ್ಯವೇ ಇಲ್ಲ. ಶುದ್ಧ ಗಾಳಿ, ನೀರು ಪಡೆಯಲು ಪರಿಸರ ಅತ್ಯಗತ್ಯ. ಆದ್ದರಿಂದ ಪರಿಸರ ರಕ್ಷಣೆ ಪ್ರತಿಯೊಬ್ಬರ ಕರ್ತವ್ಯ ಮತ್ತು ಜವಾಬ್ದಾರಿ. ವರ್ಷಕ್ಕೊಂದು ಗಿಡ ನೆಟ್ಟು ಬೆಳೆಸಿದರೆ ಪರಿಸರ ರಕ್ಷಣೆಗೆ ಬಹುದೊಡ್ಡ ಕೊಡುಗೆಯಾಗಲಿದೆ ಎಂದು ಹೇಳಿದರು.

ಭೂಮಿಯ ತಾಪಮಾನ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಜಾಗತಿಕ ಮಟ್ಟದಲ್ಲಿ ಆತಂಕ ಶುರುವಾಗಿದೆ. ಜಾಗತೀಕರಣದ ನಂತರ ಕೈಗಾರಿಕೀಕರಣ, ನಗರೀಕರಣ ಹೆಚ್ಚಾಗಿ ಮನುಷ್ಯನ ದುರಾಸೆಗೆ ಪರಿಸರ ನಾಶವಾಗುತ್ತಿದೆ. ಅದರ ಪರಿಣಾಮವನ್ನು ಮನುಕುಲ ಎದುರಿಸುತ್ತಿದೆ. ಅತಿವೃಷ್ಟಿ, ಅನಾವೃಷ್ಟಿ, ಸುನಾಮಿಯಂತಹ ಪ್ರಕೃತಿ ವಿಕೋಪಗಳನ್ನು ತಡೆಯಲು ಗಿಡ ನೆಟ್ಟು ಪರಿಸರ ಉಳಿಸುವುದೊಂದೇ ಪರಿಹಾರ ಮಾರ್ಗ ಎಂದು ತಿಳಿಸಿದರು.

ಕುಲಸಚಿವ ಪ್ರೊ.ಯು.ಬಿ. ಮಹಾಬಲೇಶ್ವರ ಮಾತನಾಡಿ, ಪರಿಸರವು ಮನುಕುಲದ ರಕ್ಷಕ. ಉತ್ತಮ ಪರಿಸರವನ್ನು ಕಾಪಾಡಲು ವಿದ್ಯಾರ್ಥಿಗಳು ಗಮನ ನೀಡಿದರೆ, ಉದ್ದೇಶಿತ ಗುರಿ ಈಡೇರಲು ಸಾಧ್ಯ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಕಂಪ್ಯೂಟರ್ ವಿಭಾಗ ಅಧ್ಯಕ್ಷ ಪ್ರೊ. ಚಂದ್ರಕಾಂತ ನಾಯ್ಕೊಡಿ, ತೋಟಗಾರಿಕೆ ಇಲಾಖೆಯ ಸಿಬ್ಬಂದಿ, ವಿದ್ಯಾರ್ಥಿಗಳು ಭಾಗವಹಿಸಿ, ಗಿಡ ನೆಟ್ಟರು. ಎನ್‌ಎಸ್‌ಎಸ್ ಅಧಿಕಾರಿ ಡಾ. ಅಶೋಕ ಕುಮಾರ ಪಾಳೇದ ಸ್ವಾಗತಿಸಿದರು. ಎಂಸಿಎ ವಿಭಾಗದ ಅಧ್ಯಕ್ಷ ಪ್ರೊ.ಎಂ. ಬಸವಣ್ಣ ವಂದಿಸಿದರು.

# ಕನ್ನಡ ಫಿಲಂ ಚೇಂಬರ್ ಅಸ್ತಿತ್ವಕ್ಕೆ

ದಾವಣಗೆರೆ, ಜೂ. 21- ಕನ್ನಡ ಚಿತ್ರರಂಗದ ಹೊಸ ಕಲಾವಿದರು ಹಾಗೂ ಹಿರಿಯ ಕಲಾವಿದರು ಸೇರಿಕೊಂಡು ಹೊಸದಾಗಿ ಕನ್ನಡ ಫಿಲಂ ಚೇಂಬರ್ ಸ್ಥಾಪಿಸಿದ್ದೇವೆ ಎಂದು ಚೇಂಬರ್ ಅಧ್ಯಕ್ಷ ಎಂ.ಎಸ್. ರವೀಂದ್ರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು. ಸಿನಿಮಾಗೆ ಸಂಬಂಧಿಸಿದ ನಿರ್ದೇಶಕರು, ಕ್ಯಾಮೆರಾಮನ್, ಸಂಗೀತ ನಿರ್ದೇಶಕರು, ಫೈಟ್ ಮಾಸ್ಟರ್ ಎಲ್ಲಾ ವಿಭಾಗದವರಿಗೆ ಲೈಫ್ ಟೈಮ್ ನೋಂದಣಿ ಮಾಡಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಎನ್.ಎನ್. ಪ್ರಹ್ಲಾದ್, ಎಂ.ಎಸ್. ರಮೇಶ್, ರುದ್ರಮನಿ, ಜಗನ್ನಾಥ್, ಚಿರತೆ ನಾಗರಾಜ್, ಅಂಜಿನಪ್ಪ, ನರಸಿಂಹಯ್ಯ ಉಪಸ್ಥಿತರಿದ್ದರು.

# ಕಾನೂನು ಪದವೀಧರರಿಗೆ ಶಿಷ್ಯವೇತನಕ್ಕಾಗಿ ಅರ್ಜಿ

ದಾವಣಗೆರೆ, ಜೂ.21- ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪ್ರಸಕ್ತ ಸಾಲಿಗೆ ಜಿಲ್ಲೆಯ ಪರಿಶಿಷ್ಟ ಜಾತಿ ಕಾನೂನು ಪದವೀಧರರಿಗೆ ಶಿಷ್ಯವೇತನಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜುಲೈ 31 ಕೊನೆಯ ದಿನವಾಗಿರುತ್ತದೆ. ಅರ್ಜಿ ಸಲ್ಲಿಸಿದ ನಂತರ ಅಗತ್ಯ ದಾಖಲೆಗಳೊಂದಿಗೆ ಸಂಬಂಧಿಸಿದ ತಾಲ್ಲೂಕುಗಳ ಸಹಾಯಕ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ ಇಲ್ಲಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ವೆಬ್‌ಸೈಟ್ HYPERLINK "http://www.sw.kar.nic.in/" \t "_blank" www.sw.kar.nic.in ಗೆ ಅಥವಾ ನಾಗರಾಜ.ಕೆ, ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ದಾವಣಗೆರೆ ಇಲ್ಲಿಗೆ ಸಲ್ಲಿಸಬೇಕು ಎಂದು ತಿಳಿಸಿದ್ದಾರೆ.

# ಊಟ, ನಿದ್ರೆಯಂತೆ ಯೋಗ ಕೂಡಾ ದಿನಚರಿ ಆಗಬೇಕು

## ಪ್ರಕೃತಿ ಚಿಕಿತ್ಸಾ ಆಸ್ಪತ್ರೆ ಕಾರ್ಯಕ್ರಮದಲ್ಲಿ ವೈದ್ಯಾಧಿಕಾರಿ ಡಾ.ರತ್ನ ಡಿ.ಎಂ ಸಲಹೆ




ದಾವಣಗೆರೆ, ಜೂ. 21- ನಗರದ ದೇವರಾಜ ಅರಸು ಬಡಾವಣೆಯ ಸರ್ಕಾರಿ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಆಸ್ಪತ್ರೆಯಲ್ಲಿ 10ನೇ ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ತರಬೇತಿ ಪಡೆಯುತ್ತಿರುವ ಸಾರ್ವಜನಿಕರಿಗೆ, ಮಕ್ಕಳಿಗೆ ಯೋಗಾಸನ ಸ್ಪರ್ಧೆ ಏರ್ಪಡಿಸಿ ಪ್ರಶಂಸಾ ಪತ್ರ ವಿತರಿಸಲಾಯಿತು.

ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ. ರತ್ನ ಡಿ.ಎಂ ಸಮಾರೋಪ ಕಾರ್ಯಕ್ರಮ ಉದ್ಘಾಟಿಸಿ, ಆಧುನಿಕ ಜೀವನ ಶೈಲಿಯಿಂದ ರೋಗಗಳು ಬರುತ್ತಿದ್ದು, ಜೀವನ ಶೈಲಿ ಬದಲಾವಣೆ ಮಾಡಿಕೊಂಡು ಯೋಗವನ್ನು ಸೀಮಿತಗೊಳಿಸದೇ ಪ್ರತಿನಿತ್ಯ ಊಟ, ನಿದ್ರೆಯಂತೆ ಯೋಗವನ್ನು ಕೂಡ ದಿನಚರಿ ಮಾಡಿಕೊಳ್ಳಿ ಎಂದು ಸಲಹೆ ನೀಡಿದರು.

ಚಿಗಟೇರಿ ಜಿಲ್ಲಾ ಆಸ್ಪತ್ರೆಯ ಆಯುಷ್ ವಿಭಾಗದ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ವೈದ್ಯಾಧಿಕಾರಿ ಡಾ. ಮಂದಾಕಿನಿ ಮಾತನಾಡಿ, ಈಗ ಸಣ್ಣ-ಪುಟ್ಟ ಮಕ್ಕಳಲ್ಲಿಯೂ ಮಾನಸಿಕ ಒತ್ತಡ, ಮಧುಮೇಹ, ಥೈರಾಯ್ಡ್ ಸಮಸ್ಯೆ, ಹೃದ್ರೋಗ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸುತ್ತಾ, ಪ್ರತಿನಿತ್ಯ ಯೋಗಾಸನ ಮಾಡುವುದರಿಂದ ಮಾನಸಿನ ಸಮತೋಲನ ಏಕಾಗ್ರತೆ ಮತ್ತು ಆರೋಗ್ಯವನ್ನು ಕಾಪಾಡಿಕೊಳ್ಳಲು ಸಹಾಯವಾಗುತ್ತದೆ ಎಂದರು.

ಯೋಗ ಗುರು ಆನಂದ ಕುಮಾರ್, ರೇವಣ್ಣ ಸಿಬ್ಬಂದಿಗಳಾದ ವಸಂತ ಲಕ್ಷ್ಮಿ, ಕವಿತ, ಪವಿತ್ರ ರಾಮಾಂಜನೇಯ ಡಿ, ಈಶ್ವರ, ವಿಜಯಮ್ಮ ಮತ್ತಿತರರು ಉಪಸ್ಥಿತರಿದ್ದರು.

# ಬನ್ನಿ ಮಳೆಯನ್ನು ತುರ್ತಾಗಿ ಹಿಡಿದಿಡೋಣ




**ಕಾಲಕಾಲಕ್ಕೆ ಬರುವ ಮಳೆಯು ನಮಗೆ ದೇವರು ಕಳಿಸಿದ ಟ್ಯಾಂಕರ್ ನೀರು. ಬನ್ನಿ ಇದನ್ನು ಸರಿಯಾಗಿ ಉಪಯೋಗಿಸಿ ಅಣ್ಣ ಹೇಗೆ ಟ್ಯಾಂಕರ್ ನೀರನ್ನು ಎಲ್ಲಾ ಪಾತ್ರಗಳಲ್ಲಿ ಹಿಡಿದಿಟ್ಟು ಉಪಯೋಗಿಸುತ್ತೇವೆ ಹೀಗೆ ನಮ್ಮ ನಮ್ಮ ಮನೆಯ ಸುತ್ತ ಎಲ್ಲೆಲ್ಲಿ ಸಾಧ್ಯವಾ ಅಲ್ಲಲ್ಲಿ ಇಂಗು ಗುಂಡಿಗಳನ್ನು ಸ್ವೀಕರಿಸಿ ಇಡೋಣ ಇದರಿಂದ ಅಂತರ್ಜಲ ಮರುಪೂರ್ಣಗೊಂಡು ನಮಗೆ ಬೋರ್ವೆಲ್ ಗಳ ಮೂಲಕ ಮತ್ತೆ ಸಿಗುತ್ತದೆ. ಕೊನೆ ಪಕ್ಷ ಶೇಕಡ 50ರಷ್ಟು ಮಳೆ ನೀರನ್ನಾದರೂ ಸಂಗ್ರಹಿಸೋಣ. ಉಳಿದದ್ದು ಕೊನೆಗೆ ನದಿಯಿಂದ ಸಮುದ್ರ ತಲುಪಿ ಮತ್ತೆ ಮಳೆಯಾಗಿ ನಮಗೆ ಬರಲಿ.**

ನೀರು ಜೀವ ಜಲ. ಭೂಮಿಯಲ್ಲಿರುವ ನೀರಿನಲ್ಲಿ ಕೇವಲ ಶೇಕಡ 10-15 ರಷ್ಟು ಮಾತ್ರ ಜೀವಿಗಳಿಗೆ ಉಪಯೋಗವಾಗುವ ಸಿಹಿ ನೀರು. ಮಿಕ್ಕಿದ್ದು ಸಮುದ್ರದಲ್ಲಿರುವ ಉಪ್ಪು ನೀರು. ನದಿ ಬಾವಿ ಹಳ್ಳಗಳಲ್ಲಿರುವ ನೀರು ಮನುಷ್ಯನ ಉಪಯೋಗಕ್ಕೆ ಬರುವುದು. ಇವೆಲ್ಲಾ ಬೇಸಿಗೆಯಲ್ಲಿ ಬತ್ತಿ ಹೋದರೆ ಜಲಕ್ಷಾಮ ಎದುರಾಗುತ್ತದೆ. ಭೂಗರ್ಭದೊಳಗಿನ ಅಂತರ್ಜಲ ಬಹು ಮುಖ್ಯವಾದ ಬೇಸಿಗೆಯಲ್ಲಿ ಉಪಯೋಗಿಸಬಹುದಾದ ಸಿಹಿ ನೀರಿನ ಬ್ಯಾಂಕ್. ಶೇಕಡ 70ರಷ್ಟು ವ್ಯವಸಾಯ ಈ ಜಲದಿಂದ ಆಗುತ್ತಿದೆ. ನಗರಗಳಲ್ಲಿಯೂ ಸಹ ಕುಡಿಯುವ ನೀರಿಗೆ ಶೇಕಡ 30ರಷ್ಟು ಜನ ಅಂತರ್ಜಲವನ್ನೇ ಉಪಯೋಗಿಸುತ್ತಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಅಂತರ್ಜಲ ಮಟ್ಟ ಕುಸಿಯುತ್ತಿರುವುದು ದಾಖಲಾಗಿದೆ. ಇದಕ್ಕೆ ಕಾರಣ ಅಂತರ್ಜಲದ ಅತಿಯಾದ ಬಳಕೆ ಮತ್ತು ಮಳೆ ಬಂದಾಗ ಇದರ ಮರುಪೂರಣ ಆಗದೇ ಇರುವುದು. ಇದರಿಂದ ಜಲಕ್ಷಾಮ ಬೇಸಿಗೆಯ ನಿತ್ಯ ಪರಿಪಾಟಲಾಗಿದೆ.

10- 15 ದಿನಕ್ಕೊಮ್ಮೆ ಮಹಾನಗರ ಪಾಲಿಕೆ/ ಪುರಸಭೆಯಿಂದ ಕುಡಿಯುವ ನೀರನ್ನು ಬಿಡುತ್ತಾರೆ. ಅವಾಗ ಹಗಲು ರಾತ್ರಿ ಎನ್ನದೆ ಎಲ್ಲಾ ಕೆಲಸಗಳನ್ನು ಬದಿಗೊತ್ತಿ, ನಿದ್ದೆಯನ್ನು ಬಿಟ್ಟು ಮನೆಯಲ್ಲಿರುವ ಎಲ್ಲಾ ತೊಟ್ಟಿಗಳು ಪಾತ್ರೆಗಳಲ್ಲಿ ನೀರನ್ನು ತುಂಬಿಸಿ, ಮತ್ತೆ ನೀರು ಬಿಡುವವರೆಗೆ ಅದನ್ನೇ ಒಂದು ಚೂರೂ ಪೋಲಾಗದಂತೆ ಉಪಯೋಗಿಸುತ್ತೇವೆ. ಕೆಲವು ಸಲ ನೀರಿನ್ ಟ್ಯಾಂಕರ್ ಗೆ ದುಡ್ಡು ಕೊಟ್ಟು ನೀರನ್ನು ಹಾಕಿಸಿಕೊಳ್ಳುತ್ತೇವೆ

**ಬರಗಾಲ :** ಎಲ್ಲಿಯೂ ಕುಡಿಯುವ, ನಿತ್ಯ ಉಪಯೋಗಿಸುವ ನೀರಿಲ್ಲ. ಬಹುಷಃ ಸರ್ಕಾರದ ವತಿಯಿಂದ ಒಂದು ನೀರಿನ ಟ್ಯಾಂಕರ್ ನಮ್ಮ ಬಡಾವಣೆ/ ರಸ್ತೆಗೆ ಬರುತ್ತದೆ. ಎಲ್ಲಾ ಮನೆಯವರು ಬಿಂದಿಗೆ, ಬಕೆಟ್ ಗಳನ್ನು ತೆಗೆದುಕೊಂಡು ಸರದಿ ಸಾಲಿನಲ್ಲಿ ನಿಂತು ಎಷ್ಟು ಸಿಗುತ್ತದೋ ಅಷ್ಟು ನೀರನ್ನು ಹಿಡಿದುಕೊಂಡು ಹೋಗಿ ಜತನದಿಂದ ಉಪಯೋಗಿಸುತ್ತೇವೆ. ಕೆಲವೊಮ್ಮೆ ಇದಕ್ಕಾಗಿ ಜಗಳಗಳೂ ಆಗುವುದುಂಟು.

ಬರಗಾಲದಲ್ಲಿ ತೋಟಗಳು ಒಣಗಿ ರೈತರಿಗೆ ನಷ್ಟ ಉಂಟಾಗುತ್ತದೆ. ಜನರಿಗೆ ಆಹಾರದ ಅಭಾವ ಉಂಟಾಗುತ್ತದೆ. ದುಡ್ಡು ಕೊಟ್ಟರೂ ನೀರು ಸಿಗದ ಪರಿಸ್ಥಿತಿ ಇರುತ್ತದೆ.

ಇತ್ತೀಚಿನ ದಿನಗಳಲ್ಲಿ ಮೇಲಿನ ಮೂರು ದೃಶ್ಯಗಳು ಪ್ರತಿ ಬೇಸಿಗೆಯಲ್ಲಿ ಎಲ್ಲಾ ಕಡೆಯೂ ಕಾಣಬಹುದಾಗಿದೆ. ಇದಕ್ಕೆ ಮೂಲ ಕಾರಣ ನಾವೇ. ನೀರು ಸಾಕಷ್ಟು ಇದ್ದಾಗ ಅದನ್ನು ಬೇಕಾಬಿಟ್ಟಿ ಖರ್ಚು ಮಾಡುತ್ತೇವೆ. ಆದರೆ ಇದನ್ನು ಭೂಮಿಯಲ್ಲಿ ತುಂಬಿಸಿಡುವ ಬಗ್ಗೆ ನಾವ್ಯಾರು ಚಿಂತಿಸುತ್ತಲೇ ಇಲ್ಲ.

ಕಾಲಕಾಲಕ್ಕೆ ಬರುವ ಮಳೆಯು ನಮಗೆ ದೇವರು ಕಳಿಸಿದ ಟ್ಯಾಂಕರ್ ನೀರು. ಬನ್ನಿ ಇದನ್ನು ಸರಿಯಾಗಿ ಉಪಯೋಗಿಸೋಣ, ಅಣ್ಣ ಹೇಗೆ ಟ್ಯಾಂಕರ್ ನೀರನ್ನು ಎಲ್ಲಾ ಪಾತ್ರಗಳಲ್ಲಿ ಹಿಡಿದಿಟ್ಟು ಉಪಯೋಗಿಸುತ್ತೇವೋ ಹಾಗೆ ನಮ್ಮ ನಮ್ಮ ಮನೆಯ ಸುತ್ತ ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಇಂಗು ಗುಂಡಿಗಳನ್ನು ನಿರ್ಮಿಸಿ ಶೇಕರಿಸಿ ಇಡೋಣ. ಇದರಿಂದ ಅಂತರ್ಜಲ ಮರುಪೂರ್ಣಗೊಂಡು ನಮಗೆ ಬೋರ್‌ವೆಲ್ ಗಳ ಮೂಲಕ ಮತ್ತೆ ಸಿಗುತ್ತದೆ. ಕೊನೆ ಪಕ್ಷ ಶೇಕಡ 50ರಷ್ಟು ಮಳೆ ನೀರನ್ನಾದರೂ ಸಂಗ್ರಹಿಸೋಣ. ಉಳಿದದ್ದು ಕೊನೆಗೆ ನದಿಯಿಂದ ಸಮುದ್ರ ತಲುಪಿ ಮತ್ತೆ ಮಳೆಯಾಗಿ ನಮಗೆ ಬರಲಿ.

ಅನೇಕರಿಗೆ ಅಂತರ್ಜಲದ ಮರುಪೂರ್ಣ ದ ಬಗ್ಗೆ ಗೊತ್ತಿದ್ದರೂ ಸಹ ಮಾಡುವುದಿಲ್ಲ. ನಾವ್ಯಾರೂ ಇದನ್ನು ಗಂಭೀರವಾಗಿ ಪರಿಗಣಿಸಿಲ್ಲ. ಆಚರಣೆಗೆ ತಂದಿಲ್ಲ. ಈ ಸಾಮಾಜಿಕ ಜಡತ್ವವನ್ನು ಹೋಗಲಾಡಿಸೋಣ.

ಅಂತರ್ಜಲ ಮರುಪೂರ್ಣ ಮಾಡಬೇಕಾದ್ದು ನಮ್ಮೆಲ್ಲರ ಕರ್ತವ್ಯ. ಸರ್ಕಾರ ಮಾಡಲಿ ಎಂದು ಕಾಯ್ದು ಕುಳಿತುಕೊಳ್ಳುವುದು ಬೇಡ. ಎದ್ದೇಳಿ ಎಚ್ಚೆತ್ತುಕೊಂಡು ಈಗಲಾದರೂ ನಿಮ್ಮ ನಿಮ್ಮ ಮನೆಯ ತಾರಸಿಯ ಮೇಲೆ ಅಂಗಳದಲ್ಲಿ ಬೀಳುವ ಮಳೆ ನೀರನ್ನು ಭೂಮಿಯಲ್ಲಿ ಇಂಗಿಸಿ ಅಥವಾ ತೊಟ್ಟಿಗಳನ್ನು ನಿರ್ಮಿಸಿ ಹಿಡಿದಿಟ್ಟುಕೊಳ್ಳಿ. ನೀರನ್ನು ಸಂರಕ್ಷಿಸಿ, ಹೊಲಗದ್ದೆ ತೋಟಗಳಲ್ಲಿ ಬಿದ್ದ ಮಳೆ ನೀರನ್ನು ಅಲ್ಲಲ್ಲಿ ಇಂಗು ಗುಂಡಿಗಳನ್ನು ನಿರ್ಮಿಸಿ ಇಂಗಿಸಿ ಕೊಳ್ಳಿ. ಬೇಸಿಗೆಯಲ್ಲಿ ಅಂತರ್ಜಲ ಕಾಪಾಡುತ್ತದೆ.

ಸರ್ಕಾರದ ಕಡೆಯಿಂದಲೂ ಮಳೆ ನೀರಿನ ಕೊಯ್ಲಿನ ಬಗ್ಗೆ ಕೆಲಸಗಳು ಆಗಬೇಕಾಗಿದೆ. ಸಾರ್ವಜನಿಕ ಸ್ಥಳಗಳಾದ ರಸ್ತೆ, ದೇವಸ್ಥಾನಗಳಲ್ಲಿ, ಸರ್ಕಾರಿ ಕಚೇರಿ, ಶಾಲಾ-ಕಾಲೇಜುಗಳಲ್ಲಿ, ಉದ್ಯಾನವನಗಳಲ್ಲಿ ಸರಳವಾದ ಮಳೆ ನೀರು ಕೊಯ್ಲನ್ನು ಅಳವಡಿಸಿದರೆ ಜನರಿಗೂ ತಮ್ಮ ತಮ್ಮ ಮನೆಗಳಲ್ಲಿ ಈ ಕೆಲಸವನ್ನು ಮಾಡಲು ಪ್ರೇರಣೆ ಸಿಗುತ್ತದೆ. ಜೊತೆಗೆ ಸರ್ಕಾರದ ವತಿಯಿಂದ ಜನರಿಗೆ ಪ್ರೋತ್ಸಾಹ ನೀಡಿದರೆ ಒಳ್ಳೆಯದು. ಹೀಗೆ ಸಾರ್ವಜನಿಕ ಮತ್ತು ಸರ್ಕಾರದ ಸಹಯೋಗದೊಂದಿಗೆ ಸರಿಯಾದ ಮಳೆ ನೀರು ಕೊಯ್ಲಿನಿಂದ ಬೇಸಿಗೆಯಲ್ಲಿ ಆಗುವ ನೀರಿನ ಬವಣೆಯನ್ನು ತಪ್ಪಿಸಬಹುದು.

**ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಮರಗಿಡಗಳನ್ನು ಬೆಳೆಸುವುದು :** ಮರಗಿಡಗಳು ಭೂಮಿಯಲ್ಲಿ ಸ್ವಾಭಾವಿಕವಾಗಿ ಅಂತರ್ಜಲ ಮರುಪೂರಣ ವಿಧಗಳು. ಇದನ್ನು ಎಲ್ಲರೂ ಮಾಡಬಹುದಲ್ಲವೇ? ಆದ್ದರಿಂದ ಯಾವುದಾದರು ಮರಗಳನ್ನು ಬೀದಿ ಬದಿಯಲ್ಲಿ ಉದ್ಯಾನವನಗಳಲ್ಲಿ ದೇವಸ್ಥಾನಗಳಲ್ಲಿ ನೆಟ್ಟು ಪೋಷಿಸೋಣ.

**ಮಳೆ ನೀರಿನ ಇಂಗು ಗುಂಡಿಗಳು :** ಮನೆಯ ಸುತ್ತಮುತ್ತ ರಸ್ತೆ ಕೆಲ ಭಾಗಗಳಲ್ಲಿ ಸುಲಭವಾಗಿ ಸರಳವಾಗಿ ಇಂಗು ಗುಂಡಿಗಳನ್ನು ಮಾಡಿ ಮಳೆ ನೀರನ್ನು ಇಂಗಿಸಬಹುದು. ಇದರಿಂದ ಸುತ್ತಮುತ್ತ ಅಂತರ್ಜಲ ಮಟ್ಟ ಏರುತ್ತದೆ ಮತ್ತು ಬೋರ್ ವೆಲ್ ಗಳು. ಮರುಪೂರ್ಣಗೊಳ್ಳುತ್ತವೆ.

ಇಳಿ ಜಾರಿನಲ್ಲಿ ಇರುವ ಭೂಮಿಯಲ್ಲಿ 4-6 ಅಡಿ ಅಗಲ 8- 15ಅಡಿ ಆಳ ಇರುವ ಗುಂಡಿಗಳನ್ನು ತೆಗೆದು ತೂತು ಇರುವ ಸಿಮೆಂಟ್ ರಿಂಗುಗಳನ್ನು ಇಟ್ಟು, ದಪ್ಪ ಕಲ್ಲು, ದೊಡ್ಡ ಜಲ್ಲಿ, ಸಣ್ಣ ಜಲ್ಲಿ, ಮರಳನ್ನು ಕ್ರಮವಾಗಿ ಕೆಳಗಿನಿಂದ ಮೇಲೆ ತುಂಬಿ ಮಳೆ ನೀರನ್ನು ಇಂಗಿಸಬಹುದು. ತಾರಸಿಯಿಂದ ಬರುವ ಕೊಳವೆಗಳನ್ನು ಇಲ್ಲಿಗೆ ಬಿಡಬಹುದು.

ತಾರಸಿಯ ಮೇಲೆ ಹರಿಯುವ ಮಳೆ ನೀರನ್ನು ನೀರಿನ ಟ್ಯಾಂಕುಗಳಲ್ಲಿ (ಸೋಸುವ ಸಾಧನದ ಮೂಲಕ) ತುಂಬಿಸಿ ಉಪಯೋಗಿಸಬಹುದು. ತೊಟ್ಟಿ ನಿರ್ಮಾಣಕ್ಕೆ ಸ್ವಲ್ಪ ಜಾಸ್ತಿ ಖರ್ಚು ತಗಲುತ್ತದೆ. ಮನೆ ಕಟ್ಟುವಾಗಲೇ ದೊಡ್ಡ ಟ್ಯಾಂಕ್ ವ್ಯವಸ್ಥೆ ಅಥವಾ ದೊಡ್ಡ ಇಂಗು ಗುಂಡಿಯ ವ್ಯವಸ್ಥೆ ಮಾಡಿದರೆ ಖರ್ಚು ಕಡಿಮೆಯಾಗಿ ಸುಲಭವಾಗಿ ಕೆಲಸ ಆಗುತ್ತದೆ.

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನಿಮಗೆ ಪರಿಚಯ ಇರುವ ಯಾವುದೇ ಸಿವಿಲ್ ಇಂಜಿನಿಯರ್ ಅವರನ್ನು ಸಂಪರ್ಕಿಸಿ ಅವರ ಮಾರ್ಗದರ್ಶನದಲ್ಲಿ ಈ ಮಳೆಗಾಲದಲ್ಲಿಯಾದರೂ ಮಳೆ ನೀರಿನ ಗುಂಡಿಗಳನ್ನು ನಿರ್ಮಿಸಿ ಅಂತರ್ಜಲ ಮಟ್ಟ ಏರಿಸಿ. ಮುಂದಿನ ಬೇಸಿಗೆ ಕಾಲಕ್ಕೆ ನೀರಿನ ಅಭಾವ ಆಗದಂತೆ ನೋಡಿಕೊಳ್ಳೋಣ.

ಈ ಬಗ್ಗೆ ಸರ್ಕಾರದ ಗಮನಕ್ಕೆ ತಂದು ಎಲ್ಲರ ಜೊತೆಗೂಡಿ ಮಳೆ ನೀರನ್ನು ಹಿಡಿದಿಡೋಣ. ಮುಂದಿನ ಪೀಳಿಗೆಗೆ ಸಿಹಿ ನೀರಿನ ಅಭಾವ ಆಗದಂತೆ ನೋಡಿಕೊಳ್ಳೋಣ.

ಪರಿವರ್ತನಾ ವೇದಿಕೆ ದಾವಣಗೆರೆ ಇವರಿಂದ ಇದೇ ತಿಂಗಳು 22 ನೇ ತಾರೀಕು ಶನಿವಾರ ಮಧ್ಯಾಹ್ನ 4 ಕ್ಕೆ ಎಸ್.ಎನ್. ಬಡಾವಣೆ ರಿಂಗ್ ರಸ್ತೆಯಲ್ಲಿರುವ ಕರ್ನಾಟಕ ಹಿಮೊಫಿಲಿಯಾ ಸೊಸೈಟಿಯಲ್ಲಿ ಮಳೆ ನೀರು ಕೊಯ್ಲು ಬಗ್ಗೆ ನುರಿತ ಇಂಜಿನಿಯರ್ ರವರಿಂದ ವಿಚಾರಸಂಕಿರಣ ಇದೆ. ಆಸಕ್ತಿಯುಳ್ಳ ಎಲ್ಲರಿಗೂ ಆದರದ ಸ್ವಾಗತ. ಮಳೆ ನೀರು ಕೊಯ್ಲಿನ ಬಗ್ಗೆ ಮಾಹಿತಿಯನ್ನು ಪಡೆದು ಕಾರ್ಯಪ್ರವೃತ್ತರಾಗಿ ಎಂದು ವಿನಂತಿಸಿಕೊಳ್ಳುತ್ತೇವೆ.



- **ಡಾ|| ಶಾಂತಾ ಭಟ್**
ಪರಿವರ್ತನಾ ವೇದಿಕೆ,
ದಾವಣಗೆರೆ.
97407 69505

## ಡಿಕೆಶಿ ಬಗ್ಗೆ ಚನ್ನಪಟ್ಟಣ ಜನರ ಮನದಾಳ ನಿಗೂಢ : ವಿಜಯೇಂದ್ರ

ಬೆಂಗಳೂರು, ಜೂ. 21 - ಕಾಂಗ್ರೆಸ್ ಶಾಸಕರಾಗಿದ್ದರೂ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಸ್ಪರ್ಧಿಸುವ ಅಭಿಲಾಷೆ ಹೊಂದಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಬಗ್ಗೆ ಜನರ ಮನದಾಳದಲ್ಲಿ ಏನಿದೆ ಎಂಬುದು ನಿಗೂಢ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇಂದಿಲ್ಲಿ ಮಾರ್ಮಿಕವಾಗಿ ನುಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ತಮ್ಮನ್ನು ಸೋಲಿಸಲು ಅಸಾಧ್ಯ ಎಂಬ ಅತಿಯಾದ ಆತ್ಮವಿಶ್ವಾಸ ಕಾಂಗ್ರೆಸ್ ಅಭ್ಯರ್ಥಿಯಲ್ಲಿತ್ತು. ಆದರೆ, ಮತದಾರರು ನೀಡಿದ ತೀರ್ಪನ್ನು ನಾವೆಲ್ಲರೂ ನೋಡಿದ್ದೇವೆ ಎಂದರು.

ಚನ್ನಪಟ್ಟಣ ಕ್ಷೇತ್ರದಲ್ಲಿ ಶಾಸಕರಾಗಿ ಕುಮಾರಸ್ವಾಮಿ ಅವರು ಅಭಿವೃದ್ಧಿ ಮಾಡಿದ್ದಾರೆ. ಸಂಸದರಾಗಿ ಆಯ್ಕೆಯಾದ ಕಾರಣ ಉಪಚುನಾವಣೆ ನಡೆಯುತ್ತಿದೆ. ಎನ್‌ಡಿಎ ಅಭ್ಯರ್ಥಿ ಯಾರೆಂಬ ಬಗ್ಗೆ ಜೆಡಿಎಸ್ ಜೊತೆ ಚರ್ಚಿಸಿ ತೀರ್ಮಾನ ಮಾಡಲಿದ್ದೇವೆ ಎಂದರು.

## ಅತ್ತಿಗೆರೆ ಸ.ಶಾಲೆಯಲ್ಲಿ ಪರಿಸರ ದಿನ

ದಾವಣಗೆರೆ, ಜೂ. 21- ಅತ್ತಿಗೆರೆ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಯಲ್ಲಿ ಪರಿಸರ ದಿನಾಚರಣೆಯ ಅಂಗವಾಗಿ ಮಾತೃ ಶ್ರೀ ನಗರ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ವತಿಯಿಂದ ಸಸಿ ನೆಡುವ ಕಾರ್ಯಕ್ರಮ ನಡೆಯಿತು.

ಗ್ರಾಮ ಪಂಚಾಯಿತಿಯ ಅಧ್ಯಕ್ಷ ಕೆ.ಓ. ಮಹೇಶ್ ಮಾತನಾಡಿ, ಪರಿಸರ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಿದೆ. ನಾವು ಪರಿಸರ ಉಳಿಸಬೇಕಿದೆ ಎಂದರು. ಗ್ರಾ.ಪಂ. ಸದಸ್ಯರಾದ ಆಶಾ ದೇವರಾಜ್ ಮಾತನಾಡಿ ದರು.

ಮಾತೃಶ್ರೀ ಸಂಸ್ಥೆಯ ಅಧ್ಯಕ್ಷ ಎ.ಎಲ್. ಕಿರಣ್ ಶಾಲಾ ಮಕ್ಕಳಿಗೆ ಪರಿಸರದ ರಕ್ಷಣೆ ಕುರಿತು ಜಾಗೃತಿ ಮೂಡಿಸಿದರು. ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಕರಾದ ಶೋಭಾ, ಅನಿತಾ, ಬುಡೇನ್ ಸಾಬ್ ಹಾಗೂ ಸಂಸ್ಥೆಯ ಸದಸ್ಯರಾದ ಲಕ್ಷ್ಮಿ ಪಿ. ಆಂಜನೇಯ, ಮುರುಳೀಧರ ಗಿರೀಶ್, ಯೋಗೇಶ್, ಕುಮಾರಸ್ವಾಮಿ, ಆನಂದ್ ಮತ್ತಿತರರು ಉಪಸ್ಥಿತರಿದ್ದರು.



## ಮಲೇಬೆನ್ನೂರು : ವಿವಿಧೆಡೆಯಲ್ಲಿ ಯೋಗ ದಿನಾಚರಣೆ





ಮಲೇಬೆನ್ನೂರು, ಜೂ. 21- ಪಟ್ಟಣದ ವಿವಿಧ ಶಾಲಾ-ಕಾಲೇಜುಗಳಲ್ಲಿ ವಿಶ್ವ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.

ಇಲ್ಲಿನ ನೀರಾವರಿ ಇಲಾಖೆಯ ಮುಂಭಾಗದಲ್ಲಿ ಪತಂಜಲಿ ಯೋಗ ಸಮಿತಿ ವತಿಯಿಂದ ಹಮಿಕೊಂಡಿದ್ದ 9ನೇ ವರ್ಷದ ವಿಶ್ವ ಯೋಗ ಕಾರ್ಯಕ್ರಮವನ್ನು ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಪುರಸಭೆ ಸದಸ್ಯ ಗೌಡ್ರ ಮಂಜಣ್ಣ ಅವರು ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿದರು.

ಕಾರ್ಯಕ್ರಮದ ಸಂಘಟಕರಾದ ಅಂಗನವಾಡಿ ಕಾರ್ಯಕರ್ತೆ ಮಂಜುಳಾ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿ, ಯೋಗಾಭ್ಯಾಸವನ್ನು ಒಂದು ದಿನ ಮಾಡಿದರೆ ಸಾಲದು, ಪ್ರತಿನಿತ್ಯ ಕನಿಷ್ಠ ಅರ್ಧ ಗಂಟೆ ಯೋಗಾಭ್ಯಾಸ ಮಾಡಿ ಬದುಕನ್ನು ಸುಂದರವಾಗಿಸಿಕೊಳ್ಳಿ ಎಂದರು.

ನಿವೃತ್ತ ಶಿಕ್ಷಕ ಡಿ. ರವೀಂದ್ರಪ್ಪ ಮಾತನಾಡಿ, ಯೋಗ ಮಾಡುವುದರಿಂದ ಆರೋಗ್ಯ ಅಷ್ಟೇ ಅಲ್ಲ, ನಮ್ಮ ಉತ್ಸಾಹವನ್ನೂ ಹೆಚ್ಚಿಸಿ, ಹೆಚ್ಚು ಕ್ರಿಯಾಶೀಲರನ್ನಾಗಿ ಮಾಡುತ್ತದೆ ಎಂದರು.

ಇನ್ನೋರ್ವ ನಿವೃತ್ತ ಶಿಕ್ಷಕ ಜಿ.ಆರ್. ನಾಗರಾಜ್ ಮಾತನಾಡಿ, ಜಗತ್ತಿನಲ್ಲಿ ಅತಿ ವೇಗವಾಗಿ ಓಡುವುದು ಮನಸ್ಸು. ಅಂತಹ ವೇಗದ ಮನಸ್ಸನ್ನು ನಿಯಂತ್ರಿಸುವ ಶಕ್ತಿ ಯೋಗಕ್ಕೆ ಇದೆ ಎಂದರು.

ಪತ್ರಕರ್ತ ಜಿಗಳಿ ಪ್ರಕಾಶ್ ಮಾತನಾಡಿ, ಯೋಗ ಪ್ರತಿಯೊಬ್ಬರ ಬದುಕಿನ ಭಾಗವಾಗಬೇಕೆಂದರು.

ಕರಾಟೆ ತರಬೇತುದಾರ ಪಾಂಡುರಂಗ ಮಾತನಾಡಿ, ಆರೋಗ್ಯಕ್ಕಾಗಿ ನಾವು ತೆಗೆದುಕೊಳ್ಳುವ ಮಾತ್ರೆ ಕ್ಷಣಿಕವಾಗಿದ್ದು, ಯೋಗಾಭ್ಯಾಸ ಬದುಕಿನ ಕೊನೆ ಕ್ಷಣದವರೆಗೂ ರಕ್ಷಾ ಕವಚವಾಗಿರುತ್ತದೆ ಎಂದು ಪ್ರತಿಪಾದಿಸಿದರು.

ಬಸವ ಬಳಗದ ಅಧ್ಯಕ್ಷ ವೈ. ನಾರೇಶಪ್ಪ, ಅಕ್ಕನ ಬಳಗದ ಶ್ರೀಮತಿ ವನಜಾಕ್ಷಮ್ಮ ಹಾಲೇಶಪ್ಪ, ಎಸ್‌ಡಿಎಂಸಿ ಅಧ್ಯಕ್ಷ ಬೆಣ್ಣೆಹಳ್ಳಿ ಬಸವರಾಜ್ ಮಾತನಾಡಿದರು.

ಈ ವೇಳೆ ರಾಷ್ಟ್ರೀಯ ಯೋಗ ಪಟು ಕು. ಮಾನ್ಯ ಅವರು ವಿವಿಧ ಭಂಗಿಯ ಯೋಗ ಮಾಡಿ ಎಲ್ಲರ ಗಮನ ಸೆಳೆದರು.

ಪತಂಜಲಿಯ ಕೆ.ಜಿ. ನಾಗರಾಜ್, ವಿಜಯ ಟೈರ್ಸ್‌ನ ಬೇಬಿಜಾನ್, ಕುಂಬಳೂರು ನಿರಂಜನ್, ಯೋಗಪಟುಗಳಾದ ವೈಷ್ಣವಿ, ಗೀತಾ, ಐಶ್ವರ್ಯ, ಅಕ್ಕನ ಬಳಗದ ಗೌಡ್ರು ಮಂಗಳಮ್ಮ, ಪ್ರೇಮ, ಸುನಂದ, ರತ್ನಮ್ಮ, ರಾಜೇಶ್ವರಿ, ಶಾರದಮ್ಮ, ನಾಗಮ್ಮ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪಿಡಬ್ಲ್ಯೂಡಿ ಸರ್ಕಾರಿ ಶಾಲೆಯಲ್ಲಿ ಜರುಗಿದ ಯೋಗ ದಿನಾಚರಣೆಯಲ್ಲಿ ದೈಹಿಕ ಶಿಕ್ಷಕ ನಿರಂಜನ್ ಅವರು ಮಕ್ಕಳಿಗೆ ಯೋಗಾಭ್ಯಾಸ ಮಾಡಿಸಿದರು. ಎಸ್ ಡಿ ಎಂ ಸಿ ಅಧ್ಯಕ್ಷ ಬೆಣ್ಣೆಹಳ್ಳಿ ಬಸವರಾಜ್ ಮತ್ತು ಇತರರು ಭಾಗವಹಿಸಿದ್ದರು. ಸರ್ಕಾರಿ ಉರ್ದು ಪ್ರೌಢಶಾಲೆ ಮತ್ತು ಪ್ರಾಥಮಿಕ ಶಾಲೆಯಲ್ಲಿ ಪ್ರೌಢಶಾಲೆ ಮುಖ್ಯ ಶಿಕ್ಷಕ ಎಂ ಮಲ್ಲಿಕಾರ್ಜುನಪ್ಪ ಅವರು ಮಕ್ಕಳಿಗೆ ಯೋಗ ಮತ್ತು ಪ್ರಾಣಾಯಾಮದ ಅಭ್ಯಾಸ ಮಾಡಿಸಿ, ಮಹತ್ವವನ್ನು ತಿಳಿಸಿದರು.

ಪ್ರೌಢಶಾಲಾ ಹಿರಿಯ ಶಿಕ್ಷಕ ರೇವಣಸಿದ್ದಪ್ಪ ಅಂಗಡಿ, ಸಹ ಶಿಕ್ಷಕಿಯರಾದ ಸೈದಾ ಕೌಸರ್, ರತ್ನವ್ವ ಸಾಲಿಮಠ, ಆರಿಫಾ ನಸ್ರೀನ್, ಫರ್ಜಾನ ಬಾನು, ಸಫೂರಾಬೀ, ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕಿ ಫಹಿಮಿದ, ಸಹ ಶಿಕ್ಷಕರಾದ ರಜಾಕ್‌ವುಲ್ಲಾ, ಶಕೀಲಾ ಸುಲ್ತಾನ್, ನೂರ್ ಜಹಾನ್, ಶಾಂತ, ಮಂಗಳ, ವಿನುತಾ ಈ ವೇಳೆ ಹಾಜರಿದ್ದರು.

## ರಾಷ್ಟ್ರಮಟ್ಟದ ಕರಾಟೆ ಸ್ಪರ್ಧೆಯಲ್ಲಿ ನಿಧಿ ಬೇತೂರ್ ಗೆ ಬೆಳ್ಳಿ ಕಂಚು




ದಾವಣಗೆರೆ, ಜೂ. 21- ಚೆನ್ನೈನಲ್ಲಿ ಈಚೆಗೆ ನಡೆದ ರಾಷ್ಟ್ರ ಮಟ್ಟದ ಕರಾಟೆ ಚಾಂಪಿಯನ್ ಶಿಪ್ 2024 ಸ್ಪರ್ಧೆಯ 10-11 ವರ್ಷದ ಸಬ್ ಜ್ಯೂನಿಯರ್ ವಿಭಾಗದಲ್ಲಿ ನಗರದ ನಿಧಿ ಬೇತೂರ್ ಕರಾಟೆ ಸ್ಪರ್ಧೆಯ ಕುಮಿಟೆ ವಿಭಾಗದಲ್ಲಿ ಬೆಳ್ಳಿ ಹಾಗೂ ಕಟಾ ವಿಭಾಗದಲ್ಲಿ ಕಂಚಿನ ಪದಕ ಪಡೆದಿದ್ದಾಳೆ. ಕೆ.ಪಿ. ಜೋಸ್ ಅವರಿಂದ ತರಬೇತಿ ಪಡೆದಿರುವ ನಗರದ ನಿಜಲಿಂಗಪ್ಪ ಬಡಾವಣೆಯ ಬಾಪೂಜಿ ಶಾಲೆಯ 5ನೇ ತರಗತಿ ವಿದ್ಯಾರ್ಥಿನಿ ನಿಧಿ ಅಭಿಷೇಕ್ ಬೇತೂರು ಹಾಗೂ ಶ್ವೇತಾ ದಂಪತಿ ಪುತ್ರಿ.

## ಪಿಎಂಶ್ರೀ ಸರ್ಕಾರಿ ಶಾಲೆಯಲ್ಲಿ ಯೋಗ ದಿನ



ದಾವಣಗೆರೆ, ಜೂ. 21- ನಿಟುವಳ್ಳಿಯ ಪಿಎಂಶ್ರೀ ಸರ್ಕಾರಿ ಪ್ರೌಢ, ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ಕೆ.ಟಿ. ಜಯಪ್ಪ, ಕೆ.ಬಿ. ಕೊಟ್ರೇಶ್, ಮೌನೇಶಪ್ಪ ಮತ್ತಿತರರು ಉಪಸ್ಥಿತರಿದ್ದರು.

## ಪ್ರಧಾನಮಂತ್ರಿ ಬಾಲ ಪುರಸ್ಕಾರ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

ದಾವಣಗೆರೆ, ಜೂ. 21- ಕೇಂದ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯದಿಂದ ಪ್ರಸಕ್ತ ಸಾಲಿನ ರಾಷ್ಟ್ರೀಯ ಪ್ರಧಾನ ಮಂತ್ರಿ ಬಾಲ ಪುರಸ್ಕಾರ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲೆಯಲ್ಲಿ ಧೈರ್ಯ ಮತ್ತು ಸಾಹಸದಿಂದ ಇತರರನ್ನು ರಕ್ಷಿಸಿದ ಹಾಗೂ ಕ್ರೀಡೆ, ಸಮಾಜ ಸೇವೆ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಸಂರಕ್ಷಣೆ, ಕಲೆ ಮತ್ತು ಸಂಸ್ಕೃತಿ ಹಾಗೂ ನೂತನ ಅವಿಷ್ಕಾರಗಳಲ್ಲಿ ಉತ್ತಮ ಸಾಧನೆ ಮಾಡಿದ 5 ವರ್ಷ ಮೇಲ್ಪಟ್ಟ 18 ವರ್ಷದೊಳಗಿನವರು ಅರ್ಜಿ ಸಲ್ಲಿಸಬಹುದು. ನ್ಯಾಷನಲ್ ಅವಾರ್ಡ್ ಪೋರ್ಟಲ್‌ನಲ್ಲಿ ಆನ್ ಲೈನ್ ವೆಬ್ ಸೈಟ್ https://awards.gov.in ಮೂಲಕ ಅರ್ಜಿ ಸಲ್ಲಿಸಬಹುದು ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08192-222701, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಜಿ.ಹೆಚ್ ಪಟೇಲ್ ಬಡಾವಣೆ, ಜಿಲ್ಲಾ ಬಾಲಭವನ, ದಾವಣಗೆರೆ ಇಲ್ಲಿ ಸಂಪರ್ಕಿಸಲು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಕವಿತಾ ತಿಳಿಸಿದ್ದಾರೆ.

## ಮೋಟಾರ್ ರಿವೈಂಡಿಂಗ್, ದುರಸ್ತಿ ತರಬೇತಿ

ದಾವಣಗೆರೆ, ಜೂ.21 - ವಿದ್ಯುತ್ ಮೋಟಾರ್ ರಿವೈಂಡಿಂಗ್ ಮತ್ತು ದುರಸ್ತಿ ಸೇವೆಗಳ ತರಬೇತಿ ನೀಡಲಾಗುವುದು. ವಿವರಕ್ಕೆ ಸಂಪರ್ಕಿಸಿ : 8105526792, 9113880324, 9241482541.

## ರಾಜ್ಯಮಟ್ಟದ ಯುವಜನೋತ್ಸವ : ಎ.ಆರ್.ಜಿ. ಕಾಲೇಜಿಗೆ ಪ್ರಥಮ ಸ್ಥಾನ



ದಾವಣಗೆರೆ, ಜೂ.21- ರಾಷ್ಟ್ರೀಯ ಸೇವಾ ಯೋಜನೆ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮತ್ತು ರಾಷ್ಟ್ರೀಯ ಸೇವಾ ಯೋಜನೆ ಸಹಯೋಗದಲ್ಲಿ ದಾವಣಗೆರೆ ವಿವಿಯ ಆವರಣದಲ್ಲಿ ನಡೆದ ರಾಜ್ಯ ಮಟ್ಟದ ಯುವಜನೋತ್ಸವ-2024 ಸ್ಪರ್ಧೆಯಲ್ಲಿ ಎ.ಆರ್.ಜಿ. ಕಾಲೇಜಿನ ವಿದ್ಯಾರ್ಥಿಗಳು ಸಾಂಸ್ಕೃತಿಕ ಮೆರವಣಿಗೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

ಕಾಲೇಜಿನ ಪ್ರಾಚಾರ್ಯ ಡಾ.ಜಿ.ಬಿ. ಬೋರಯ್ಯ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಅಧಿಕಾರಿ ಡಾ.ಎಚ್.ಆರ್. ತಿಪ್ಪೇಸಾಮಿ ಮತ್ತು ಕಾಲೇಜಿನ ಸಿಬ್ಬಂದಿ ಹರ್ಷ ವ್ಯಕ್ತ ಪಡಿಸಿದ್ದಾರೆ.

**ಸೈಟ್ ಬೇಕಾಗಿದೆ**
ಸರ್ಕಾರಿ ನೌಕರರ ಬಡಾವಣೆ, ಹಂತ-2, ಕುಂದುವಾಡ. ಜಿಎಂಐಟಿ ಕಾಲೇಜ್ ಎದುರು
ಮಧುಸೂದನ್
85534 62689

**ಮನೆಗಳು ಲೀಸ್‌ಗೆ ಇವೆ**
ವಿದ್ಯಾನಗರ ಕೊನೆಯ ಬಸ್ ಸ್ಟಾಪ್ ಹತ್ತಿರ 2 ಬೆಡ್ ರೂಂ, 3 ಬೆಡ್ ರೂಂ, ಮೊದಲನೇ ಮಹಡಿಯಲ್ಲಿ ಹೈಟೆಕ್ ಹಾಸ್ಪಿಟಲ್ ಹತ್ತಿರ, ಹೈಟೆಕ್ ಲೇಔಟ್‌ನಲ್ಲಿ ಇಂಡಿಪೆಂಡೆಂಟ್ ಹೌಸ್ 3 ಬೆಡ್ ರೂಂ ಮನೆ ಲೀಸ್‌ಗೆ ಇವೆ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**'ಸಿದ್ದ' ನವೋದಯ**
ಕೋಚಿಂಗ್ ಸೆಂಟರ್ - ದಾವಣಗೆರೆ
ಸ್ಥಳ 1 : ಸೇಂಟ್ಸ್ ಜಾನ್ಸ್ ಸ್ಕೂಲ್ ಬಿಲ್ಡಿಂಗ್ ಶಿವಕುಮಾರಸ್ವಾಮಿ ಬಡಾವಣೆ (ಬೆಳಿಗ್ಗೆ).
2 : ಶ್ರೀ ಸಿದ್ದ ಸಾಯಿ ಕೃಪ ಸಪ್ತಗಿರಿ ಶಾಲೆ ಹಿಂಭಾಗ, ಎಸ್.ಎಸ್. ಬಡಾವಣೆ ಬಿ ಬ್ಲಾಕ್ (ಸಂಜೆ)
3 : ಡಾ. ಸಿ.ವಿ.ರಾಮನ್ ಕಾಲೇಜ್ ಬಿಲ್ಡಿಂಗ್ ಶ್ರೀ ಸೋಮೇಶ್ವರ ವಿದ್ಯಾಲಯ ಪಕ್ಕ, ನಿಟ್ಟುವಳ್ಳಿ ರಸ್ತೆ (ಸಂಜೆ)
99807 26426, 98455 62991

**FLAT FOR SALE**
2BHK, SQ.FT : 1325
Flat for Lease, 3 BHK,
SQFT : 1888
Vidyanagar, last city bus stop, AM Apartment, Nainika Prime Rose
89519 38228, 80502 22181

**ಮನೆ ಬಾಡಿಗೆಗೆ ಇದೆ**
ನೂತನವಾಗಿ ನಿರ್ಮಿಸಿರುವ ಮೊದಲನೇ ಮಹಡಿ 1 BHK ಮನೆ ಬಾಡಿಗೆಗೆ ಇದೆ. ಜೆ.ಹೆಚ್ ಪಟೇಲ್ ಬಡಾವಣೆ, ಇ ಬ್ಲಾಕ್ 3ನೇ ಮೇನ್, 2ನೇ ಕ್ರಾಸ್, ದಾವಣಗೆರೆ.
70199 24038, 81478 38023

**ಮನೆ ಬಾಡಿಗೆಗೆ ಇದೆ**
ಶ್ರೀರಾಮ್ ಬಿಲ್ಡಿಂಗ್ ಶ್ರೀ ಸಾಯಿ ಗಾರ್ಮೆಂಟ್ಸ್ ಎದುರು 2 BHK First ಫ್ಲೋರ್ ಮನೆ ಬಾಡಿಗೆಗೆ ಇದೆ. ಕಾಲೇಜ್ ರಸ್ತೆ, ನಿಟ್ಟುವಳ್ಳಿ.
ಮೊ : 98443 04848

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನದ ಎದುರಿಗೆ ಇರುವ $\frac{34+44}{2} \times 72$ ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ :
70196-74592

**ಮನೆ, ಶಾಪ್ ಬಾಡಿಗೆಗೆ ಇದೆ**
ಪೂರ್ವ ಮುಂಬಾಗಿಲಿನ ಗ್ರೌಂಡ್ ಫ್ಲೋರ್ 2/3 BHK ನೀರಿನ ಸೌಕರ್ಯವುಳ್ಳ ಮನೆ ಪಿ.ಜೆ. ಬಡಾವಣೆ 8ನೇ ಮುಖ್ಯ ರಸ್ತೆ, 8ನೇ ಅಡ್ಡರಸ್ತೆ, ಮನೆ ನಂ. 408, ಬಾಡಿಗೆಗೆ ಇದೆ.
ಮೊ : 9916862900
9538641980

**ಮನೆ ಬಾಡಿಗೆಗೆ ಇದೆ**
ಹೊಂಡದ ಸರ್ಕಲ್‌ನ ಖಂಡಪ್ಪನ ಗಲ್ಲಿಯಲ್ಲಿ 13x45 ಅಳತೆಯ ಒಂದನೇ ಮಹಡಿ ಮನೆ ಸೋಲಾರ್, ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94480 47506

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಡಾಲರ್ಸ್‌ಕಾಲೋನಿ, ಶಿವಪಾರ್ವತಿ ಗ್ಲಾಸ್ ಹೌಸ್ ಲೇಔಟ್, ಗೀತಂ ಕಾಲೇಜ್ ಹತ್ತಿರ, ಜೆ.ಹೆಚ್. ಪಟೇಲ್ ಬಡಾವಣೆ, ಹೈಟೆಕ್ ಹಿಂಭಾಗ, ಎರಗುಂಟೆ ಇನ್ವೆಸ್ಟ್ ಸೈಟ್ಸ್, ಉತ್ತಮ ದರದಲ್ಲಿ ದೊರೆಯುತ್ತವೆ. 30x40, 40x50, 40x60, 30x50 ಎಲ್ಲಾ ಅಳತೆಯ ಸೈಟ್‌ಗಳಿವೆ.
97315 12365

**NEET, K-CET**
Long Term
ಬ್ಯಾಚ್‌ಗಳು ಪ್ರಾರಂಭ
ಸಮೃದ್ಧಿ ಅಕಾಡೆಮಿ
96202 62361

**ಬೇಕಾಗಿದ್ದಾರೆ**
ಮಾರ್ಕೆಟಿಂಗ್ ಮಾಡಲು ಹುಡುಗರು ಬೇಕಾಗಿದ್ದಾರೆ
ಸಂಬಳ : 10,000 ರಿಂದ 15,000
ಫೋ : 91106 21233

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಅಡುಗೆ ಮತ್ತು ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. ವಸತಿ ಸೌಲಭ್ಯ ಇರುತ್ತದೆ
87228 02637,
79759 57575

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಗ್ಯಾಸ್ ಗೀಸರ್ ರಿಪೇರಿ**
ಎಲ್ಲಾ ಕಂಪನಿಯ ಗ್ಯಾಸ್ ಗೀಸರ್ ಮತ್ತು ಗ್ಯಾಸ್ ಸ್ಟವ್‌ಗಳನ್ನು ನಿಮ್ಮ ಮನೆಗೆ ಬಂದು ರಿಪೇರಿ ಮಾಡಿಕೊಡುತ್ತೇವೆ. ಹಳೆಯ ಗ್ಯಾಸ್ ಗೀಸರ್ ಮತ್ತು ಗ್ಯಾಸ್ ಸ್ಟವ್‌ಗಳನ್ನು ಖರೀದಿಸುತ್ತೇವೆ.
99019 40727

**ವಾಣಿಜ್ಯ ಮಳಿಗೆಗಳು ಬಾಡಿಗೆಗೆ**
ಎರಡು ವಾಣಿಜ್ಯ ಮಳಿಗೆಗಳು ಬಾಡಿಗೆಗೆ ದೊರೆಯುತ್ತವೆ. ಹಾರ್ಡ್ ವೇರ್, ಮೆಡಿಕಲ್, ದಿನಸಿ ಅಂಗಡಿಗಳಿಗೆ ಹಾಗೂ ಬ್ಯಾಂಕ್‌ಗಳಿಗೆ ಅನುಕೂಲಕರವಾಗಿರುತ್ತದೆ.
ಸ್ಥಳ : ಬಿಐಇಟಿ ಮೇನ್ ರೋಡ್, ದಾವಣಗೆರೆ
89707 77554

**TEACHERS REQUIRED**
Qualified and Experienced teachers are required School is located at Old Davangere.
KANNADA PRIMARY TEACHER EVS :
D.Ed Science, Maths & science, B.Sc, B.Ed Drawing BFA/MFA Physical Education BPEd.
Interested Candidates Can Contact:
9844022959, 9964023607
9902150005

**READY RESTAURANT FOR RENT**
AVK College, Davanagere. Contact :
96638 28812

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**SMART CITY CABS DAVANAGERE**
Minimum 4 km Rs - 99/-
Above per km Rs - 25/-
waiting charges per hours Rs - 100/- and 24 service will be available.
Ph : 08192 255555
94811 79933, 99868 18205

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**NAME CLARIFICATION**
I **Nancy Sowmya Malin** W/o John do hereby solemnly afirm and declare that the in my Aadhar card and Pan Card my name mentioned as **Nancy Sowmya Malin** but in my SSLC Marks card my name mentioned as **Nancy Sowmya.** Above said two names are me only none one else. sworn before Notary, Davangere on 21.6.2024. In future all my records and transaction will be using my name as Nancy Sowmya Malin.
Sd/- Nancy Sowmya Malin

**WANTED**
WORKING PHARMACIST
Qualification : D Pharma/B Pharma
Age : Below 40 Years
Scale : Rs. 16000 to 18200/- (ESI+PF+Incentive)
90355 03140

**WANTED TEACHERS**
B.Sc, B.Com, M.Sc, Diploma with fluent in English for Part time or Full time Job, Contact :
98448 35527

**JOB VACANCY**
For fabrication work
Karur Industrial Area, Davangere
99807 55224

**ಹೋಟೆಲ್ ಸಾಮಾನುಗಳು ಬೇಕಾಗಿವೆ**
1. ಫ್ರಿಜ್ 2. ಸ್ಟೀಲ್ ಸಿಂಕ್
3. ಸ್ಟವ್ ಮತ್ತು ಕೌಂಟರ್
ಸಂಪರ್ಕಿಸಿ :
97392 94066, 87110 04905

**ಸೈಟ್, ಮನೆ & ಹೊಲ ಬೇಕಾದಲ್ಲಿ ಸಂಪರ್ಕಿಸಿ :**
ಬೈಪಾಸ್ ಸರ್ವೀಸ್ ರಸ್ತೆಗೆ 30x55 ದಕ್ಷಿಣ (ಕಮರ್ಷಿಯಲ್) ವಿನಾಯಕ ಬಡಾವಣೆ 30x50 ದಕ್ಷಿಣ ಪೂರ್ವ ಕಾರ್ನರ್ ಹಳೆ ಕುಂದುವಾಡದಲ್ಲಿ 30x65 ಉತ್ತರ ಕಲ್ಲಹಳ್ಳಿ ರುದ್ರೇಶ್ ಬಡಾವಣೆಯಲ್ಲಿ 30x50 ಪೂರ್ವ ಬೈಪಾಸ್ ಸರ್ವೀಸ್ ರಸ್ತೆ ಹತ್ತಿರ ಸೈಟ್‌ಗಳು ಮಾರಾಟಕ್ಕಿವೆ.
ಸಂಪರ್ಕಿಸಿ : P.S. ಸುರೇಶ್ ಶಾಮನೂರು
84314 00907
(ಪ್ರಾಪರ್ಟಿ ಅಡ್ವೈಸರ್)

**ಬೇಕಾಗಿದ್ದಾರೆ**
ಕಂಪನಿಯಲ್ಲಿ Helper (ಹೆಲ್ಪರ್) ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ.
ವಯೋಮಿತಿ - 20 ರಿಂದ 30 ವರ್ಷ
ಸುವಿ ಇಂಡಸ್ಟ್ರೀಸ್,
ಕರೂರು ಇಂಡಸ್ಟ್ರಿಯಲ್ ಏರಿಯಾ, ದಾವಣಗೆರೆ.
96206 38679

**SITE FOR SALE**
East facing site, 40ftx106ft
Road 40ft width
SS Layout , B Block, 3rd Main Road, Davangere
74831 70877

**ENGINEERING DIPLOMA TUTIONS**
(FOR ALL BRANCHES)
ಸಮೃದ್ಧಿ ಅಕಾಡೆಮಿ
81472 62361

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಮನೆ ಬಾಡಿಗೆಗೆ/ ಭೋಗ್ಯಕ್ಕೆ ಇದೆ**
2BHK ಪಶ್ಚಿಮ ದಿಕ್ಕಿನ ಹಾಗೂ ಬೋರ್-ಕಾರ್ಪೋರೇಷನ್ ನೀರಿನ ಸೌಲಭ್ಯವಿರುವ ಮನೆ. # 4 ರಾಮರತ್ನ ನಿವಾಸ, ಶಕ್ತಿ ನಗರ, 3ನೇ ಹಂತ, 3ನೇ ಕ್ರಾಸ್, ರಾಘವೇಂದ್ರ ಬಡಾವಣೆ. (ಮೆಡಂ ಲೇಔಟ್) ದಾವಣಗೆರೆ.
70194 27951, 93410 14488

**3 BHK HOUSE FOR RENT**
At Uttam Badavane, 1st Main, B ward No. 30 Avaragere Road, conatct No.
99015 64535, 94498 04535

**ERA GROUP OF COMPANIES CALL CENTRE**
ಮಹಿಳೆಯರು ಟೆಲಿಕಾಲರ್ಸ್ ಬೇಕಾಗಿದ್ದಾರೆ
ಕನ್ನಡ ಮತ್ತು ಇಂಗ್ಲಿಷ್ ಓದಲು ಮತ್ತು ಬರೆಯಲು ಬರಬೇಕು
QUALIFICATION : SSLC TO DEGREE
5000 K TO 12,000 K + INCENTIVES
ಸ್ಥಳ : K.R. MARKET, DAVANGERE.
95350 51589, 78670 75786

**WANTED LADY TEACHERS**
* B.Sc./B.Ed.-PCM/CBZ-04 Posts
* BA/B.Ed., - 04 Posts
* Computer Teachers -02
Note : we preference will be given to right & Experienced & Attractive Salary will be given to experienced candidates
95356 10817

# ಪ್ರತಿದಿನ ಯೋಗದಿಂದ ದೈಹಿಕ, ಮಾನಸಿಕ ಆರೋಗ್ಯ ವೃದ್ಧಿ



**ಹರಪನಹಳ್ಳಿ ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಉಷಾ ರಾಣಿ**

ಹರಪನಹಳ್ಳಿ,ಜೂ.21- ಪ್ರತಿದಿನ ಯೋಗ ಮಾಡುವುದರಿಂದ ದೈಹಿಕ, ಮಾನಸಿಕ ಆರೋಗ್ಯ ವೃದ್ಧಿಯಾಗುತ್ತದೆ. ಯೋಗದಿಂದ ಆಗುವ ಅನುಕೂಲ ಹಾಗೂ ಪ್ರಯೋಜನಗಳ ಬಗ್ಗೆ ನಾವು ಮನವರಿಕೆ ಮಾಡಿಕೊಳ್ಳಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಉಷಾ ರಾಣಿ .ಆರ್ ಹೇಳಿದರು.

ಪಟ್ಟಣದ ನ್ಯಾಯಾಲಯದ ಆವರಣದಲ್ಲಿರುವ ವಕೀಲರ ಸಂಘದಲ್ಲಿ ತಾಲ್ಲೂಕು ಸೇವಾ ಸಮಿತಿ, ವಕೀಲರ ಸಂಘ ಹರಪನಹಳ್ಳಿ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಿತ್ಯ ಕೆಲ ಸಮಯ ಯೋಗದಲ್ಲಿ ತೊಡಗಿಸಿಕೊಳ್ಳುವುದರಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯ ವೃದ್ಧಿಯಾಗಲಿದೆ. ಜೊತೆಗೆ ಬದುಕಿನಲ್ಲಿ ಸದಾ ಕ್ರಿಯಾಶೀಲತೆ, ಓದು, ವೃತ್ತಿ ಸೇರಿದಂತೆ ಮಾಡುವ ಯಾವುದೇ ಕೆಲಸದಲ್ಲಿ ಏಕಾಗ್ರತೆ ಸಾಧಿಸಲು ಪೂರಕವಾಗಲಿದೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ವಕೀಲರ ಸಂಘದ ಅಧ್ಯಕ್ಷ ರಾಮನಗೌಡ ಪಾಟೀಲ್ ಮಾತನಾಡಿ, ಯೋಗ ಎಂಬುದು ಶರೀರಕ್ಕೆ ಅನುಗುಣವಾಗಿ ಮಾಡುವ ಅಭ್ಯಾಸವಾಗಿದ್ದು, ದೇಹದ ರಜಸ್ಸು, ತಮಸ್ಸು, ಸಾಮವನ್ನು ನಿಗ್ರಹಿಸುವ ಸಲುವಾಗಿ ವಯಸ್ಸಿಗೆ ಅನುಗುಣವಾಗಿ ಅಭ್ಯಾಸ ಮಾಡಲಾಗುವುದು. ದೇಹ, ಮನಸ್ಸು, ಬುದ್ಧಿಯನ್ನು ಹತೋಟಿಯಲ್ಲಿಡಲು ಯೋಗವನ್ನು ಅಭ್ಯಾಸ ಮಾಡಬೇಕು. ಇದರಿಂದ ಸಂಸ್ಕಾರ ಬೆಳೆಯುತ್ತದೆ. ಮನಸ್ಸು ಚಿತ್ತದಲ್ಲಿದ್ದು, ಮಾನಸಿಕ, ದೈಹಿಕವಾಗಿ ಸದೃಢ ಆರೋಗ್ಯ ಲಭಿಸುತ್ತದೆ ಎಂದು ತಿಳಿಸಿದರು.

ಸಿವಿಲ್ ನ್ಯಾಯಾಧೀಶರಾದ ಮನು ಶರ್ಮ ಎಸ್.ಪಿ., ಯೋಗ ಶಿಕ್ಷಕ ಲೋಕೇಶ್ ಎಸ್.ಟಿ ಮಾತನಾಡಿದರು. ವಕೀಲದ ಸಂಘದ ಕಾರ್ಯದರ್ಶಿ ಜಿ.ಎಸ್.ಎಂ.ಕೊಟ್ರಯ್ಯ, ಹಿರಿಯ ವಕೀಲ ಪಿ.ಜಗದೀಶ್ ಗೌಡ್ರು, ಎಂ.ಮೃತ್ಯುಂಜಯ, ಬಿ. ಹಾಲೇಶ್, ತಾಲ್ಲೂಕು ಕಾನೂನು ಸೇವಾ ಸಮಿತಿಯ ಸದಸ್ಯರಾದ ಕೊಟ್ರೇಶ್, ಬಸವರಾಜ ಸೇರಿದಂತೆ ಉಭಯ ನ್ಯಾಯಾಲಯದಗಳ ನ್ಯಾಯಾಧೀಶರು ಹಾಜರಿದ್ದರು.

# ಬಿಜೆಪಿ ಅಭ್ಯರ್ಥಿ ಸೋಲಿಗೆ ಸಂಚು ರೂಪಿಸಿದವರೇ ರೇಣುಕಾಚಾರ್ಯ

ದಾವಣಗೆರೆ, ಜೂ. 21- ಲೋಕಸಭಾ ಚುನಾವಣೆ ವೇಳೆ ಜಿ.ಎಂ. ಸಿದ್ದೇಶ್ವರ ಅವರಿಗೆ ಟಿಕೆಟ್ ನೀಡಬಾರದೆಂದು ಟೀಂ ಮಾಡಿಕೊಂಡು ವಿರೋಧ ಮಾಡಿದ್ದೇ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ. ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರ ಸೋಲಿಗೂ ವ್ಯವಸ್ಥಿತ ಸಂಚು ರೂಪಿಸಿದವರು ರೇಣುಕಾಚಾರ್ಯ ಎಂದು ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ ಆರೋಪಿಸಿದರು.

ನಗರದ ಮಾಜಿ ಶಾಸಕ ಎಸ್.ವಿ. ರಾಮಚಂದ್ರ ಅವರ ನಿವಾಸದಲ್ಲಿ ಇಂದು ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಅಭ್ಯರ್ಥಿ ಆಯ್ಕೆ, ನಂತರದಲ್ಲಿನ ಗೊಂದಲವನ್ನು ಜೀವಂತವಾಗಿಟ್ಟದ್ದೇ ಬಿಜೆಪಿ ಅಭ್ಯರ್ಥಿ ಸೋಲಿಗೆ ಕಾರಣ ಎಂದರು.

ಬಿಜೆಪಿ ಕಾರ್ಯಕರ್ತರು ಎಂದಿಗೂ ಸೋಲಿಗೆ ಅಂಜುವವರಲ್ಲ. ಚುನಾವಣಾ ಸಂಚಾಲಕರಾದ ರೇಣುಕಾಚಾರ್ಯ ಅವರು ಯಾವುದೇ ಕ್ಷೇತ್ರದಲ್ಲಿ ಚುನಾವಣೆ ಗೆಲುವಿನ ಬಗ್ಗೆ ಚರ್ಚೆ, ಸಭೆ ನಡೆಸಲಿಲ್ಲ. ಅಭ್ಯರ್ಥಿ ಸೋಲಿಗೆ ಅವರು ನಡೆದುಕೊಂಡ ರೀತಿ ಕಾರಣ ಎಂದು ದೂರಿದರು.

ನೂತನ ಸಂಸದರೇ ನಮ್ಮ ಗೆಲುವಿಗೆ ಬಿಜೆಪಿಯ ಕೆಲವರ ಸಹಕಾರ ಕಾರಣ ಎಂದಿದ್ದಾರೆ. ಅವರು ಯಾರನ್ನು ಭೇಟಿ ಮಾಡಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ನರೇಂದ್ರ ಮೋದಿ ವಿಶ್ವ ಕಂಡ ಅಪರೂಪದ ನಾಯಕರು. ಅವರಿಗೆ ಮೋಸ ಮಾಡಿದವರು ಎಂದಿಗೂ ಉದ್ದಾರವಾಗುವುದಿಲ್ಲ. ಕುತಂತ್ರದಿಂದ ಆಗಿರುವ ಸೋಲು ಎಂದು ಹೇಳಿದರು.

ಹೊನ್ನಾಳಿ ಕ್ಷೇತ್ರಕ್ಕೆ ಮಾಜಿ ಸಚಿವ ಮಾಧುಸ್ವಾಮಿ, ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಬರದಂತೆ ನೋಡಿಕೊಂಡರು. ನಮ್ಮ ಅಭ್ಯರ್ಥಿ ಪ್ರಚಾರಕ್ಕೆ ತೆರಳಿದಾಗ ಅವರ ಹಿಂಬಾಲಕರ ಮೂಲಕ ಇಲ್ಲದ ಪ್ರಶ್ನೆಗಳನ್ನು ಕೇಳಿಸಿದರು. ಪಕ್ಷ ಇವರ ಸ್ವಂತ ಆಸ್ತಿಯೇ ? ಎಂದು ಪ್ರಶ್ನಿಸಿದ ವೀರೇಶ್ ಅವರು, ರೇಣುಕಾಚಾರ್ಯ ಅವರ ಹುಟ್ಟೂರು ಕುಂದೂರಿನಲ್ಲಿ ಕಾಂಗ್ರೆಸ್ 651 ಮತಗಳ ಲೀಡ್ ಪಡೆದುಕೊಂಡಿದೆ ಎಂದು ವಾಗ್ದಾಳಿ ನಡೆಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಮುಖಂಡರಾದ ಯಶವಂತರಾವ್ ಜಾಧವ್, ಅಣಬೇರು ಜೀವನಮೂರ್ತಿ, ದೇವರಮನಿ ಶಿವಕುಮಾರ್, ಎನ್.ಎ. ಮುರುಗೇಶ್, ರಾಜನಹಳ್ಳಿ ಶಿವಕುಮಾರ್, ಬಿ.ಎಸ್. ಜಗದೀಶ್, ಯಶೋಧ ಹೆಗ್ಗಪ್ಪ, ಗಾಯತ್ರಿಬಾಯಿ ಖಂಡೋಜಿರಾವ್, ಜಿ.ಎಸ್. ಶ್ಯಾಮ್, ಸಿ. ರಮೇಶನಾಯ್ಕ, ಸುರೇಶ ಗಂಡಗಾಳೆ, ಉಪಸ್ಥಿತರಿದ್ದರು.

### ಕುತಂತ್ರ ರಾಜಕಾರಣದ ಲಿಸ್ಟ್ ನನ್ನ ಬಳಿ ಇದೆ : ಯಶವಂತರಾವ್

ಕುತಂತ್ರ ರಾಜಕಾರಣ ಮಾಡಿರುವವರ ಪಟ್ಟಿ ನನ್ನ ಬಳಿ ಇದೆ. ಲೋಕಸಭಾ ಚುನಾವಣೆಯಲ್ಲಿ ಯಾರು ಯಾರಿಗೆ ಫೋನ್ ಕಾಲ್ ಮಾಡಿದ್ದಾರೆ, ಏನೆಲ್ಲಾ ಮಾತನಾಡಿದ್ದಾರೆ, ಎಲ್ಲೆಲ್ಲಿ ಭೇಟಿ ಯಾಗಿದ್ದರು ಎಂಬುದರ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ಪೈಲ್ವಾನ್ ಗಿರಿ ಎಲ್ಲಿ ತೋರಿಸಬೇಕು ಅಲ್ಲಿ ತೋರಿಸುತ್ತೇವೆ. ಮಾತನಾಡುವಾಗ ಎಚ್ಚರಿಕೆಯಿಂದ ಇರಬೇಕು ಎಂದು ದೂಡಾ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್ ಗುಡುಗಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಸೋಲಿಗೆ ಕಾರಣವಾದ ಅಂಶಗಳ ಬಗ್ಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಬಿ.ಎಲ್. ಸಂತೋಷ್ ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದೇವೆ ಎಂದರು.

# ಜೀವನ ರಕ್ಷಣೆಗಾಗಿ ರಕ್ತದಾನ ಮಾಡಿ

## ಹರಪನಹಳ್ಳಿ : ಉಪವಿಭಾಗಾಧಿಕಾರಿ ಚಿದಾನಂದ ಗುರುಸ್ವಾಮಿ



ಹರಪನಹಳ್ಳಿ,ಜೂ.21- ಸಾರ್ವಜನಿಕರು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡುವ ಸಂಕಲ್ಪ ಮಾಡಿ, ಇನ್ನೊಂದು ಜೀವಕ್ಕೆ ವರದಾನ ನೀಡಿದಂತಾಗುತ್ತದೆ ಎಂದು ಉಪವಿಭಾಗಾಧಿಕಾರಿ ಚಿದಾನಂದ ಗುರುಸ್ವಾಮಿ ಹೇಳಿದರು.

ಪಟ್ಟಣದ ಹೊಸಪೇಟೆ ರಸ್ತೆಯ ಜೋಶಿಕೇರಿಯಲ್ಲಿರುವ ಸ್ವಾಸ್ಥ್ಯ ಸ್ಪೆಷಾಲಿಟಿ ಹೆಲ್ತ್ ಕೇರ್‌ನಲ್ಲಿ ತಾಲ್ಲೂಕು ಜೆ.ಸಿ.ಐ ಯಿಂದ ಆಯೋಜಿಸಲಾಗಿದ್ದ ಉಚಿತ ರಕ್ತದಾನ ಶಿಬಿರದಲ್ಲಿ ಮಾತನಾಡಿದ ಅವರು, ರಕ್ತವನ್ನು ಕೃತಕವಾಗಿ ಸೃಷ್ಟಿಸಲು ಸಾಧ್ಯವಿಲ್ಲ. ರಕ್ತ ದೇಹದ ಜೀವನಾಡಿ ಎಂದರು.

ಡಾ. ಪ್ರಿಯಾಂಕ ಅಧಿಕಾರ್ ಮಾತನಾಡಿ, ರಕ್ತಕ್ಕೆ ವರ್ಷವಿಡೀ ನಿರಂತರವಾಗಿ ಬೇಡಿಕೆ ಇರುತ್ತದೆ. ಏಕೆಂದರೆ ಅಪಘಾತಗಳು, ತುರ್ತು ಶಸ್ತ್ರಚಿಕಿತ್ಸೆಗಳ ಸಂದರ್ಭಗಳು ಸಂಭವಿಸುತ್ತಲೇ ಇರುತ್ತವೆ. ಜೊತೆಯಲ್ಲಿ ಕ್ಯಾನ್ಸರ್ ರೋಗಿಗಳು, ಗರ್ಭಿಣಿ ಸ್ತ್ರೀಯರು, ಹಿಮೋಫಿಲಿಯಾ, ಅನಿಮಿಯಾ ಮುಂತಾದ ರೋಗಿಗಳು ರಕ್ತದಾನಿಗಳನ್ನೇ ಅವಲಂಬಿಸಿರುತ್ತಾರೆ. ರಕ್ತದಾನ ಮಾಡಿದ ಕೆಲವೇ ಕ್ಷಣಗಳಲ್ಲಿ ದಾನಿಯ ದೇಹದಲ್ಲಿ ರಕ್ತದ ಉತ್ಪತ್ತಿಯಾಗುತ್ತದೆ ಎಂದರು.

ರವಿ ಅಧಿಕಾರ್ ಮಾತನಾಡಿ, ಹೆಣ್ಣು-ಗಂಡೆಂಬ ಭೇದವಿಲ್ಲದೇ 18 ರಿಂದ 60 ವರ್ಷದ ಒಳಗಿರುವ ಎಲ್ಲಾ ಆರೋಗ್ಯವಂತ ವ್ಯಕ್ತಿಗಳು ರಕ್ತದಾನ ಮಾಡಬಹುದು. ಪುರುಷರು ಪ್ರತಿ 3 ತಿಂಗಳಿಗೊಮ್ಮೆ ಮತ್ತು ಮಹಿಳೆಯರು ಪ್ರತಿ 4 ತಿಂಗಳಿಗೊಮ್ಮೆ ರಕ್ತದಾನ ಮಾಡಬಹುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸ್ವರೂಪ್, ಬಾವರಾಜ್, ಪರಶುರಾಮ ಚಲವಾದಿ, ಡಾ. ಪ್ರವೀಣ್ ಕುಮಾರ್, ಅಕ್ಷತಾ ನಾಗರಾಜ್ ಸೇರಿದಂತೆ ಇತರರು ಇದ್ದರು.

# ರೇಣುಕ ಸ್ವಾಮಿ ಕೊಲೆ ಪ್ರಕರಣ ಕುಟುಂಬಕ್ಕೆ ನ್ಯಾಯ ಒದಗಿಸಲು ಆಗ್ರಹ



ಕೊಟ್ಟೂರು, ಜೂ. 21- ಚಿತ್ರದುರ್ಗದ ಜಂಗಮ ಸಮಾಜದ ರೇಣುಕಸ್ವಾಮಿ ಅವರನ್ನು ಚಿತ್ರ ಹಿಂಸೆ ನೀಡಿ ಹತ್ಯೆ ಮಾಡಿರುವುದು ಖಂಡನಾರ್ಹ. ಈ ಪ್ರಕರಣದಲ್ಲಿ ಬಂಧಿತರಾಗಿರುವ ಚಿತ್ರ ನಟ ದರ್ಶನ್ ಮತ್ತು ಅವರ ತಂಡದವರಿಗೆ ತ್ವರಿತ ಗತಿಯಲ್ಲಿ ಕಠಿಣ ಶಿಕ್ಷೆ ನೀಡಬೇಕು ಎಂದು ಕೊಟ್ಟೂರು ತಾಲ್ಲೂಕು ಬೇಡ ಜಂಗಮ ಮತ್ತು ರೈತ ಸಂಘಟನೆಗಳು ಆಗ್ರಹಿಸಿವೆ.

ಕೊಟ್ಟೂರು ತಾಲ್ಲೂಕು ಬೇಡ ಜಂಗಮ ಮತ್ತು ರೈತ ಸಂಘಟನೆಗಳವರು ಸರ್ಕಾರವನ್ನು ಒತ್ತಾಯಿಸುವ ಮನವಿ ಪತ್ರವನ್ನು ತಾಲ್ಲೂಕು ಆಡಳಿತದ ಉಪ ತಹಶೀಲ್ದಾರ್‌ರವರಿಗೆ ಸಲ್ಲಿಸಿ, ನಂತರ ಅವರು ಮಾತನಾಡಿದರು.

ಎನ್. ಭರಮಣ್ಣ ಮಾತನಾಡಿ, ರೇಣುಕಸ್ವಾಮಿ ಕುಟುಂಬಕ್ಕೆ ನ್ಯಾಯ ಸಿಗಬೇಕು. ಆತನ ಪತ್ನಿಗೆ ಸರ್ಕಾರಿ ಉದ್ಯೋಗ ನೀಡಬೇಕು ಎಂದು ಒತ್ತಾಯಿಸಿದರು.

ಪಂಡಿತಾರಾಧ್ಯ ವಕೀಲರು ಕೊಟ್ಟೂರು, ಅಡಿಕೆ ಮಂಜುನಾಥ, ಬೇಡ ಜಂಗಮ ಸಮಾಜದ ತಾಲ್ಲೂಕು ಅಧ್ಯಕ್ಷ ಕೊಟ್ರೇಶ್, ಬಿ.ಎಂ. ಮರುಳಸಿದ್ದಯ್ಯ, ಜಿ.ಸಿದ್ದಯ್ಯ, ಅಟವಾಳಿಗೆ ಭೋಜ ರಾಜ, ಕೆ.ಎಂ.ಎಸ್ ಶಾಸ್ತ್ರಿ, ಆಟೋ ಶಿವಯ್ಯ, ರೈತ ಸಂಘಟನೆಯ ಜಂಬೂರು ಮರುಳುಸಿದ್ದಪ್ಪ, ಕೆ.ಶಾಂತ ಕುಮಾರ್, ಹೊನ್ನೂರು ಸಾಬ್, ಮರೂರು ನಾಗರಾಜ ಇನ್ನು ಅನೇಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಪತ್ರಕರ್ತ ಬಕ್ಕೇಶ್ ನಾಗನೂರುಗೆ ಸನ್ಮಾನ



ದಾವಣಗೆರೆ, ಜೂ.21- 75ನೇ ವರ್ಷದ ಸಂಭ್ರಮದಲ್ಲಿರುವ ಹಿರಿಯ ಪತ್ರಕರ್ತ ಬಕ್ಕೇಶ ನಾಗನೂರು ಅವರನ್ನು ದಾವಣಗೆರೆ - ಹರಿಹರ ಅರ್ಬನ್ ಕೋ ಆಪರೇಟೀವ್ ಬ್ಯಾಂಕ್ ವತಿಯಿಂದ ಸನ್ಮಾನಿಸಲಾಯಿತು. ಬ್ಯಾಂಕ್ ಅಧ್ಯಕ್ಷ ಎನ್.ಎ. ಮುರುಗೇಶ್, ಉಪಾಧ್ಯಕ್ಷರಾದ ಶ್ರೀಮತಿ ಜಯಮ್ಮ, ನಿರ್ದೇಶಕರಾದ ಕುಬೇರಪ್ಪ, ಚಿದಾನಂದಪ್ಪ, ಕಿರುವಾಡಿ ಸೋಮಶೇಖರ್, ಶಂಕರ್ ಖಟಾವಕರ್ ಸೇರಿದಂತೆ ಅನೇಕ ನಿರ್ದೇಶಕರು ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ಸಾಮೂಹಿಕ ಶ್ರೀ ಗಾಯತ್ರಿ ಪೂಜೆ, ಉಪಾಸನೆ

ಶ್ರೀ ಗಾಯತ್ರಿ ದೇವಿಯ ಉಪಾಸಕರ ಕ್ರಿಯಾತ್ಮಕ, ಅಧ್ಯಾತ್ಮ ಸಂಸ್ಥೆ ಶ್ರೀ ಗಾಯತ್ರಿ ಪರಿವಾರದಿಂದ ಪ್ರತೀ ತಿಂಗಳ ಹುಣ್ಣಿಮೆಯೆಂದು ನಡೆಸುವ ಸಾಮೂಹಿಕ ಶ್ರೀ ಗಾಯತ್ರಿ ಪೂಜೆ, ಉಪಾಸನೆ, ಕಾರ ಹುಣ್ಣಿಮೆ ಅಂಗವಾಗಿ ಜಯದೇವ ವೃತ್ತದಲ್ಲಿರುವ ಶ್ರೀ ಶಂಕರ ಮಠದಲ್ಲಿ ಇಂದು ಬೆಳಿಗ್ಗೆ 7ಕ್ಕೆ ನಡೆಯಲಿದೆ ಎಂದು ಪರಿವಾರದ ಅಧ್ಯಕ್ಷ ಡಾ. ರಮೇಶ್ ಪಟೇಲ್ ತಿಳಿಸಿದ್ದಾರೆ ಬಿ. ಸತ್ಯನಾರಾಯಣಮೂರ್ತಿ ಮತ್ತು ಕುಟುಂಬದವರು ಪೂಜಾ ಸೇವಾ ಕರ್ತರಾಗಿದ್ದಾರೆ.

# ದೇವನಾಯಕನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ದಿಡಗೂರಿನ ಎ.ಜಿ. ಪ್ರಕಾಶ್



ಹೊನ್ನಾಳಿ, ಜೂ. 21 - ಪಟ್ಟಣದ ದೇವನಾಯಕನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ದಿಡಗೂರಿನ ಎ.ಜಿ. ಪ್ರಕಾಶ್ ಆಯ್ಕೆಯಾದರು.

ಹಿಂದಿನ ಅಧ್ಯಕ್ಷರಾಗಿದ್ದ ಎಚ್.ಪಿ. ಗುರುಬಸಪ್ಪ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಶುಕ್ರವಾರ ಚುನಾವಣೆ ನಡೆಯಿತು. ಎ.ಜಿ. ಪ್ರಕಾಶ್ ಅವರು ಅಧ್ಯಕ್ಷ ಸ್ಥಾನಕ್ಕೆ ಒಬ್ಬರೇ ಉಮೇದುವಾರಿಕೆ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿ ಎ.ಜಿ. ನವೀನ್ ಕುಮಾರ್ ಅವರು ಆಯ್ಕೆಯನ್ನು ಘೋಷಿಸಿದರು.

ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಉಪಾಧ್ಯಕ್ಷ ಡಿ.ಎಂ. ವಿನೋದಮ್ಮ, ಸದಸ್ಯ ಡಿ.ಕೆ. ಚಂದ್ರಪ್ಪ, ಬಿ.ಎಚ್. ಗಣೇಶಪ್ಪ, ಬಿ.ಎಚ್. ಕುಮಾರ್, ಟಿ. ಮಲ್ಲಪ್ಪ, ಕೆ. ಎಚ್. ಪರಮೇಶ್, ಎಚ್.ಪಿ. ಗುರುಬಸಪ್ಪ, ಡಿ.ಬಿ. ಮಹೇಂದ್ರ, ಎಸ್.ಎಚ್. ಮಾರುತಿ, ಒ.ಕೆ. ರಮೇಶ್, ಸುಶೀಲಮ್ಮ, ಮುಖ್ಯ ಕಾರ್ಯ ನಿರ್ವಾಹಕ ಜಿ.ಎಂ. ಚೇತನ್, ಸಿಬ್ಬಂದಿಗಳಾದ ಡಿ.ಎಸ್. ನವೀನ್, ಎಂ.ಎಸ್. ಮನೋಜ್ ಉಪಸ್ಥಿತರಿದ್ದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ. ಮಂಜಪ್ಪ, ಸಣ್ಣಕ್ಕಿ ಬಸವನಗೌಡ್ರು, ಹೊನ್ನಾಳಿ ತಾಲ್ಲೂಕು ಸಾಧುವೀರಶೈವ ಸಮಾಜದ ಅಧ್ಯಕ್ಷ ಎಚ್.ಎ. ಗದ್ದಿಗೇಶ್, ನ್ಯಾಮತಿ ತಾಲ್ಲೂಕು ಅಧ್ಯಕ್ಷ ಕೋಡಿಕೊಪ್ಪ ಶಿವಣ್ಣ, ಡಿಸಿಸಿ ಬ್ಯಾಂಕ ನಿರ್ದೇಶಕ ಡಿ.ಎಸ್. ಸುರೇಂದ್ರಗೌಡ, ಡಿ.ಜಿ. ವಿಶ್ವನಾಥ್ ಸೇರಿದಂತೆ ಹಲವು ಮುಖಂಡರು ನೂತನ ಅಧ್ಯಕ್ಷರನ್ನು ಅಭಿನಂದಿಸಿದರು.

# ಜಪಾನ್ ಬಾಹ್ಯಾಕಾಶ ಸಂಸ್ಥೆ ಮೇಲೆ ಸೈಬರ್ ದಾಳಿ

ಟೋಕಿಯೋ, ಜೂ. 21 – ಜಪಾನ್ ಬಾಹ್ಯಾಕಾಶ ಸಂಸ್ಥೆ ಮೇಲೆ ಕಳೆದ ವರ್ಷದಿಂದ ಸರಣಿ ಸೈಬರ್ ದಾಳಿಗಳು ನಡೆಯುತ್ತಿವೆ. ಆದರೆ, ರಾಕೆಟ್ ಹಾಗೂ ಉಪಗ್ರಹಗಳಿಗೆ ಸಂಬಂಧಿಸಿದಂತೆ ಸೂಕ್ಷ್ಮ ಮಾಹಿತಿಯ ಮೇಲೆ ಪರಿಣಾಮವಾಗಿಲ್ಲ. ದಾಳಿಗಳನ್ನು ತಡೆಯುವ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಜಪಾನ್ ಬಾಹ್ಯಾಕಾಶ ಸಂಸ್ಥೆಯಾದ ಜೆ.ಎ.ಎಕ್ಸ್.ಎ. ಮೇಲೆ ಕಳೆದ ವರ್ಷದಿಂದ ಸೈಬರ್ ದಾಳಿಗಳು ನಡೆಯುತ್ತಿವೆ ಎಂದು ಜಪಾನ್ ಸಂಪುಟ ಮುಖ್ಯಕಾರ್ಯದರ್ಶಿ ಯೊಶಿ ಮಸ ಹಯಶಿ ಒಪ್ಪಿಕೊಂಡಿದ್ದಾರೆ.

# ನಗರದಲ್ಲಿ ಇಂದು

ಪರಿವರ್ತನಾ ವೇದಿಕೆ ವತಿಯಿಂದ ಹಿಮೋಫೋಲಿಯೋ ಸೊಸೈಟಿ ಸಭಾಂಗಣದಲ್ಲಿ ಮಳೆ ನೀರು ಕೊಯ್ಲು ವಿಷಯವಾಗಿ ಇಂಜಿನಿಯರ್ ಶ್ರೀನಿವಾಸಮೂರ್ತಿ ಮಾತನಾಡುವರು. ಮುಖ್ಯ ಅತಿಥಿಗಳಾಗಿ ಡಾ. ಬಿ.ಟಿ. ಅಚ್ಯುತ್ ಉಪಸ್ಥಿತರಿರುವರು. ಈ ಸಂದರ್ಭದಲ್ಲಿ ಕಿರುವಾಡಿ ಗಿರಿಜಮ್ಮ, ಡಾ. ಇ.ಎಂ. ಸುರೇಂದ್ರ, ಡಾ. ಜಯದೇವಪ್ಪ, ಶಿವನಳ್ಳಿ ರಮೇಶ್, ಎಸ್.ಟಿ. ವೀರೇಶ್, ಶಿಲ್ಪಾ ಜಯಪ್ರಕಾಶ್ ಉಪಸ್ಥಿತರಿರುವರು.

# ನಗರದಲ್ಲಿ ನಾಳೆ ಸ್ವಕುಳಸಾಳಿ ಸಭೆ

ದಾವಣಗೆರೆ, ಜೂ.21- ನಗರದ ಸ್ವಕುಳಸಾಳಿ ಸಮಾಜದ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯು ನಾಡಿದ್ದು ದಿನಾಂಕ 23ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ಶ್ರೀ ಡಾ. ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಹಿರೇಮಠದಲ್ಲಿ ನಡೆಯಲಿದೆ. ಸಮಾಜದ ಅಧ್ಯಕ್ಷ ಮೋಹನ್ ಪಿ. ಗಾಯಕವಾಡ ಅವರ ಅಧ್ಯಕ್ಷತೆಯಲ್ಲಿ ಏರ್ಪಾಡಾಗಿರುವ ಈ ಸಭೆಯಲ್ಲಿ ಸಮಾಜ ಬಾಂಧವರು ಭಾಗವಹಿಸುವಂತೆ ಕಾರ್ಯದರ್ಶಿ ಧರ್ಮರಾಜ್ ವಿ. ಏಕಬೋಟೆ ಕೋರಿದ್ದಾರೆ.

# ನಂದಗೋಕುಲ ಶಾಲೆಯಲ್ಲಿ ಯೋಗ ದಿನ



ದಾವಣಗೆರೆ, ಜೂ. 21- ನಗರದ ದೇವರಾಜ ಅರಸು ಬಡಾವಣೆಯ ಮೈದಾನದಲ್ಲಿ ನಂದಗೋಕುಲ ಶಾಲೆಯ ಅಧ್ಯಕ್ಷ ವೈ.ಬಿ. ಸತೀಶ್ ಹಾಗೂ ಕಾರ್ಯದರ್ಶಿ ಶ್ರೀಮತಿ ಬಿ. ಅನುಸೂಯ ಅವರ ನೇತೃತ್ವದಲ್ಲಿ, ಶಾಲೆಯ ಮುಖ್ಯ ಶಿಕ್ಷಕರು, ಶಿಕ್ಷಕ ವೃಂದದವರು, ವಿದ್ಯಾರ್ಥಿಗಳು ಸ್ಕೌಟ್ ಮಾಸ್ಟರ್ ಹಾಗೂ ಯೋಗಪಟುಗಳಾದ ರೋವರ್ಸ್ ಮತ್ತು ರೇಂಜರ್ಸ್‌ಗಳು ಪಾಲ್ಗೊಂಡು ಯೋಗ ಮಾಡುವುದರ ಮೂಲಕ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.

# ನಗರದಲ್ಲಿ ವಿಜೃಂಭಣೆಯ ಮುತ್ತು ಮಾರಿಯಮ್ಮ ದೇವಿ ಕರಗ ಮಹೋತ್ಸವ



ದಾವಣಗೆರೆ, ಜೂ. 21- ನಗರದ ಪಿ.ಬಿ. ರಸ್ತೆಯಲ್ಲಿರುವ ಮುತ್ತು ಮಾರಿಯಮ್ಮ ದೇವಸ್ಥಾನದಲ್ಲಿ ಕರಗ ಮಹೋತ್ಸವವು ವಿಜೃಂಭಣೆಯಿಂದ ನಡೆಯಿತು. ಮಧ್ಯಾಹ್ನ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಯಿತು.

# ಹರಿಹರದಲ್ಲಿ ಇಂದು ತೈಲ ಬೆಲೆ ಏರಿಕೆ ವಿರುದ್ಧ ಬಿಜೆಪಿ ಪ್ರತಿಭಟನೆ

ರಾಜ್ಯದಲ್ಲಿ ಆಡಳಿತದಲ್ಲಿರುವ ಕಾಂಗ್ರೆಸ್ ಸರ್ಕಾರ ಪೆಟ್ರೋಲ್, ಡೀಸೆಲ್ ದರ ಏರಿಕೆ ಹಾಗೂ ದಿನನಿತ್ಯ ಬಳಕೆಯ ವಸ್ತುಗಳ ಬೆಲೆ ಏರಿಕೆಯನ್ನು ವಿರೋಧಿಸಿ, ಇಂದು ಬೆಳಗ್ಗೆ 11 ಗಂಟೆಗೆ ಹರಿಹರ ತಾಲ್ಲೂಕು ಬಿಜೆಪಿ ವತಿಯಿಂದ ಪ್ರತಿಭಟನೆ ಜೊತೆಗೆ ರಾಣಿ ಚೆನ್ನಮ್ಮ ವೃತ್ತದಲ್ಲಿ ರಸ್ತೆ ತಡೆ ಹಮ್ಮಿಕೊಳ್ಳಲಾಗಿದೆ. ಪ್ರತಿಭಟನೆಯಲ್ಲಿ ಶಾಸಕ ಬಿ.ಪಿ. ಹರೀಶ್, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಹನಗವಾಡಿ ಎಸ್.ಎಂ. ವೀರೇಶ್, ಮುಖಂಡ ಚಂದ್ರಶೇಖರ್ ಪೂಜಾರ್ ಭಾಗವಹಿಸಲಿದ್ದಾರೆ ಎಂದು ನಗರ ಬಿಜೆಪಿ ಘಟಕದ ಅಧ್ಯಕ್ಷ ಅಜಿತ್ ಸಾವಂತ್ ತಿಳಿಸಿದ್ದಾರೆ.

## ಓದುಗರ ಪತ್ರ



ಮಾನ್ಯರೇ,

ಮೇ 18ರಂದು ಜನತಾವಾಣಿ ಪತ್ರಿಕೆಯಲ್ಲಿ ಓದುಗರ ಪತ್ರದ ಮೂಲಕ 'ರಸ್ತೆಯಲ್ಲಿರುವ ಹೊಂಡವನ್ನು ಮುಚ್ಚಿಸಿ' ಎಂಬ ಶೀರ್ಷಿಕೆಯಡಿ ಸಮಸ್ಯೆಯನ್ನು ಅಧಿಕಾರಿಗಳ ಗಮನಕ್ಕೆ ತಂದಿದ್ದರೂ ದಿವ್ಯ ನಿರ್ಲಕ್ಷ್ಯ ತೋರಿದ್ದಾರೆ.

ಎ.ವಿ.ಕೆ. ಕಾಲೇಜು ರಸ್ತೆಯಲ್ಲಿ ಕಾಣಸಿಗುವ ರಸ್ತೆಯ ಗುಂಡಿಯನ್ನು ಇಂದಿಗೂ ಮುಚ್ಚಿಸದೇ ಹಾಗೇ ಬಿಟ್ಟಿರುವುದು ನಿಜಕ್ಕೂ ಆಕ್ರೋಶದ ವಿಚಾರವೇ ಸರಿ.

ನಗರದ ಪ್ರಮುಖ ರಸ್ತೆಗಳಲ್ಲೊಂದಾದ ಎ.ವಿ.ಕೆ ರಸ್ತೆಯಲ್ಲಿ ಆಸ್ಪತ್ರೆ, ಕಾಲೇಜು ಮತ್ತು ಕೋರ್ಟ್ ಸೇರಿದಂತೆ ಇನ್ನಿತರೆ ಕಾರ್ಯಗಳಿಗೆ ಸಂಚರಿಸುವ ಸಾರ್ವಜನಿಕರಿಗೆ ತೊಂದರೆ ಉಂಟು ಮಾಡುವ ಗುಂಡಿಗಳನ್ನು ಮುಚ್ಚಿಸಲು ಪಾಲಿಕೆಗಿರುವ ಸಮಸ್ಯೆಯಾದರೂ ಏನು? ಸರಿ ಮಾಡಲು ಗುಂಡಿ ಇನ್ನೆಷ್ಟು ಆಳಕ್ಕೆ ಹೋಗಬೇಕು? ಮತ್ತು ಯಾರಾದರೂ ಬಿದ್ದು ಅವಘಡ ಆದ ಮೇಲೆಯೇ ಗುಂಡಿ ಮುಚ್ಚಲು ಮುಂದಾಗುತ್ತೀರಾ..?

ಪಾಲಿಕೆಯಿಂದ 1 ಕಿ.ಮೀ. ಅಂತರವೂ ಇಲ್ಲದ ರಸ್ತೆಯಲ್ಲಿ ಇರುವ ಗುಂಡಿಯು ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ಕಾಣದೇ ಇರುವುದು ಬೇಸರ ತಂದಿದೆ.

ಶೀಘ್ರವಾಗಿ ಮಹಾನಗರ ಪಾಲಿಕೆ ವಲಯದಲ್ಲಿರುವ ರಸ್ತೆಗಳಲ್ಲಿ ಕಾಣಸಿಗುವ ಗುಂಡಿಗಳನ್ನು ಈ ಕೂಡಲೇ ಮುಚ್ಚಿಸಬೇಕು.

**- ವೈ. ವಾದಿರಾಜ ಭಟ್, ವಕೀಲರು, ದಾವಣಗೆರೆ.**

# ರಾಷ್ಟ್ರೀಯ ಯೋಗ ಸ್ಪರ್ಧೆ: ಹರಿಹರದ ಟಿ. ಆರ್. ಕಲ್ಲೇಶ್ವರಿಗೆ ಮೂರನೇ ಸ್ಥಾನ



ಹರಿಹರ, ಜೂ.21- ರಾಷ್ಟ್ರೀಯ ಯೋಗ ಒಲಿಂಪಿಯಾಡ್ ಸ್ಪರ್ಧೆ -2024 ಪಂದ್ಯಾವಳಿಯಲ್ಲಿ 16 ವರ್ಷ ಒಳಗಿನ ವಿಭಾಗದಿಂದ ಕರ್ನಾಟಕ ತಂಡ ಪ್ರತಿನಿಧಿಸಿದ್ದ ಕೊಂಡಜ್ಜಿಯ ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆಯ ಯೋಗಪಟು ಟಿ. ಆರ್. ಕಲ್ಲೇಶ್ವರಿ ಮೂರನೇ ಸ್ಥಾನ ಪಡೆದಿದ್ದಾರೆ. ಕಲ್ಲೇಶ್ವರಿ, ಹರಿಹರದ ಕೆ. ಜೈಮುನಿ ಅವರ ಮಾರ್ಗದರ್ಶನದಲ್ಲಿ ತರಬೇತಿ ಪಡೆದಿದ್ದಾರೆ.

# ನಗರದಲ್ಲಿ ಇಂದು ಪುಟ್ಟರಾಜ ಸೇವಾ ಸಮಿತಿ ವಾರ್ಷಿಕೋತ್ಸವ

ಡಾ. ಪಂಡಿತ ಪುಟ್ಟರಾಜ ಸೇವಾ ಸಮಿತಿ, ಜಿಲ್ಲಾ ಮಹಿಳಾ ಘಟಕದ ವಾರ್ಷಿಕೋತ್ಸವವನ್ನು ಇಂದು ಬೆಳಿಗ್ಗೆ 11 ಗಂಟೆಗೆ ಎಂಸಿಸಿ ಬಿ ಬ್ಲಾಕ್‌ನಲ್ಲಿರುವ ಸದ್ಯೋಜಾತ ಶಿವಾಚಾರ್ಯ ಹಿರೇಮಠದಲ್ಲಿ ನೆರವೇರಿಸಲಾಗುವುದು.


ಮಹಿಳಾ ಘಟಕದ ಅಧ್ಯಕ್ಷರಾದ ಸೌಮ್ಯ ಸತೀಶ್ ಧಾರವಾಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಜಯವಿಭವ ವಿದ್ಯಾಸಂಸ್ಥೆಯ ನಿವೃತ್ತ ಸಹ ಕಾರ್ಯದರ್ಶಿ ಎಂ.ಕೆ. ಬಕ್ಕಪ್ಪ ಕಾರ್ಯಕ್ರಮ ಉದ್ಘಾಟಿಸುವರು.

ಶ್ರೀ ಜಗದ್ಗುರು ಮುಖ್ಯ ಅತಿಥಿಗಳಾಗಿ ಕಿರುವಾಡಿ ಗಿರಿಜಮ್ಮ, ಅಣಬೇರು ಮಂಜಣ್ಣ, ಶಿವಬಸಯ್ಯ ಉಪಸ್ಥಿತರಿರುವರು.

ಇದೇ ಸಂದರ್ಭದಲ್ಲಿ ಹಿಮೋಫಿಲಿಯಾ ಸೊಸೈಟಿಯ ಸಹಾಯಕರಾದ ಚಿನ್ನಮ್ಮ ಅವರಿಗೆ ಸೇವಾಶ್ರೀ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಸಂಗೀತ ಶಿಕ್ಷಕ ಶಿವಬಸಯ್ಯ ಅವರಿಂದ ಬೆಳಿಗ್ಗೆ 10 ರಿಂದ 11ರವರೆಗೆ ಡಾ. ಪಂ.ಪುಟ್ಟರಾಜ ಗವಾಯಿಗಳವರ ವಚನ ಶಿಬಿರ ಏರ್ಪಡಿಸಲಾಗಿದೆ.

# ಸೋಪ್ರೋಶೈನ್ ಕಾನ್ಸೆಪ್ಟ್ ಶಾಲೆಯಲ್ಲಿ ವಿಶ್ವ ಯೋಗ ದಿನಾಚರಣೆ

ದಾವಣಗೆರೆ, ಜೂ. 21 - ತಾಲ್ಲೂಕು ತರಳಬಾಳು ನಗರ, 6ನೇ ಮೈಲಿಕಲ್ಲಿನಲ್ಲಿರುವ ಸೋಪ್ರೋಶೈನ್ ಕಾನ್ಸೆಪ್ಟ್ ಶಾಲೆ ಹಾಗೂ ಕಾಲೇಜಿನಲ್ಲಿ ಯೋಗ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು. ಶಾಲೆಯ ಕಾರ್ಯದರ್ಶಿ ಡಾ. ಎಲ್. ಜಗದೀಶ್, ಪ್ರಾಂಶುಪಾಲರಾದ ಸೈಮನ್ಸ್, ಪಿ.ಯು. ಕಾಲೇಜಿನ ಪ್ರಾಂಶುಪಾಲರಾದ ಭರತ್ ಮತ್ತಿತರರು ಉಪಸ್ಥಿತರಿದ್ದರು.



# ನಗರದ ಆರ್ಯ-ಈಡಿಗರ ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಜೂ. 21 - ಜಿಲ್ಲಾ ಆರ್ಯ ಈಡಿಗರ ಸಂಘದ ವಿನೋಬನಗರದ ಆರ್ಯ ಈಡಿಗ ವಿದ್ಯಾರ್ಥಿ ನಿಲಯಕ್ಕೆ ಹಾಗೂ ಸರಸ್ವತಿ ಬಡಾವಣೆಯಲ್ಲಿರುವ ಮಹಿಳಾ ವಿದ್ಯಾರ್ಥಿ ನಿಲಯಕ್ಕೆ ಪ್ರಸಕ್ತ 2024-25ನೇ ಸಾಲಿಗೆ ಸೇರ ಬಯಸುವ ಅರ್ಹ ಆರ್ಯ ಈಡಿಗ ಸಮಾಜದ ಬಡ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಪಿ.ಯು.ಸಿ. ಸೈನ್ಸ್, ಬಿ.ಎಸ್ಸಿ, ಬಿ.ಕಾಂ. ಬಿ.ಸಿ.ಎ., ಬಿ.ಬಿ.ಎಂ., ಎಂ.ಎಸ್ಸಿ. ಎಂ.ಕಾಂ. ಹಾಗೂ ತಾಂತ್ರಿಕ ಕೋರ್ಸ್‌ಗಳನ್ನು ಅಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ 15ನೇ ಜುಲೈ 2024ರ ಒಳಗಾಗಿ ಅರ್ಜಿ ಸಲ್ಲಿಸಲು ಕೋರಲಾಗಿದೆ.

ದಾವಣಗೆರೆ ಜಿಲ್ಲೆಗೆ ಮೊದಲ ಆದ್ಯತೆ ನೀಡಲಾಗುವುದು ಎಂದು ಜಿಲ್ಲಾ ಆರ್ಯ ಈಡಿಗರ ಸಂಘದ ಅಧ್ಯಕ್ಷ ಶಂಕರ್ ತಿಳಿಸಿದ್ದಾರೆ.

ಅರ್ಜಿ ಸಲ್ಲಿಸಬೇಕಾದ ವಿಳಾಸ ದಾವಣಗೆರೆ ಜಿಲ್ಲಾ ಈಡಿಗ ಸಂಘ, ಪಿ.ಬಿ. ರಸ್ತೆ, ವಿನೋಬನಗರ, ದಾವಣಗೆರೆ ಹಾಗೂ ಹರಿಹರ, ಜಗಳೂರು, ಹೊನ್ನಾಳಿ ಮತ್ತು ನ್ಯಾಮತಿ ತಾಲ್ಲೂಕು ಈಡಿಗರ ಸಂಘದ ಪದಾಧಿಕಾರಿಗಳ ಬಳಿಯಲ್ಲಿ ಅರ್ಜಿಗಳು ದೊರೆಯುತ್ತವೆ. ವಿವರಕ್ಕೆ ಕಾರ್ಯದರ್ಶಿ ಎ.ನಾಗರಾಜ (98453 55008), ಹಾಸ್ಟೆಲ್ ವಾರ್ಡನ್ (88922 66468) ಅವರನ್ನು ಸಂಪರ್ಕಿಸಬಹುದು.

**WANTED**

SENIOR OFFICE EXECUTIVE-1 (MALE)
(B.COM/ M.COM / M.B.A)
HAVING EXPERIENCE IN BANKING.
Age Limit : Below 35 years
Please send your resume to: karavalidvg@yahoo.com or

**KARAVALI SOUHARDA CR. CO-OP SOCIETY LTD.,**
Kundwada Road, Near Buntara Bhavana, Davangere-577006.
Contact No : 9900870019, 9844111334

# 22 ಕೆರೆ ತುಂಬಿಸಲು ಅಧಿಕಾರಿಗಳಿಗೆ ಶಾಸಕ ಬಸವಂತಪ್ಪ ತಾಕೀತು



ಮಲ್ಲಶೆಟ್ಟಿಹಳ್ಳಿ ಜಾಕ್ ವೆಲ್ ಕಮ್ ಪಂಪ್ ಹೌಸ್-2ಗೆ ಭೇಟಿ ನೀಡಿ ಪರಿಶೀಲನೆ

ದಾವಣಗೆರೆ, ಜೂ. 21 - ಈ ಬಾರಿ ಮುಂಗಾರು ಮಳೆ ಸಮೃದ್ಧಿಯಾಗಲಿದೆ ಎಂದು ಹವಾಮಾನ ಇಲಾಖೆ ಹೇಳಿರುವುದರಿಂದ 22 ಕೆರೆಗಳನ್ನು ತುಂಬಿಸುವ ರಾಜನಹಳ್ಳಿ ಏತ ನೀರಾವರಿ ಯೋಜನೆ ವ್ಯಾಪ್ತಿಯ ಕೆರೆಗಳಿಗೆ ನೀರು ತುಂಬಿಸುವ ಕೆಲಸವನ್ನು ಸಂಬಂಧಪಟ್ಟ ಅಧಿಕಾರಿಗಳು ಮತ್ತು ನಿರ್ವಹಣೆ ಮಾಡುವ ಗುತ್ತಿಗೆದಾರರು ಮಾಡಬೇಕೆಂದು ಶಾಸಕ ಕೆ.ಎಸ್.ಬಸವಂತಪ್ಪ ಸೂಚನೆ ನೀಡಿದರು.

ತಾಲ್ಲೂಕಿನ ಮಲ್ಲಶೆಟ್ಟಿಹಳ್ಳಿ ಬಳಿಯಿರುವ ಜಾಕ್ ವಾಲ್ ಕಮ್ ಪಂಪ್ ಹೌಸ್ ನಂ- 2 ಈಚೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ರಾಜನಹಳ್ಳಿ ಬಳಿಯಿರುವ ಮೊದಲ ಜಾಕ್ ವಾಲ್ ನಿಂದ ಮಲ್ಲಶೆಟ್ಟಿ ಬಳಿಯಿರುವ ಎರಡನೇ ಜಾಕ್ ವಾಲ್ ನ ಕೆರೆಗೆ ನೀರು ಹರಿಸಲಾಗುತ್ತಿದೆ. ಆದರೆ ಪೈಪ್ ನಲ್ಲಿ ಕಾಲು ಭಾಗ ನೀರು ಬರುತ್ತಿಲ್ಲ. ನೀರು ಬಿಟ್ಟು ಎರಡ್ಮೂರು ದಿನಗಳು ಆಗಿದೆ ಇನ್ನೂ ಕೆರೆಯ ತಳಭಾಗದಲ್ಲೇ ಇದೆ.

ಮೊದಲ ಜಾಕ್ ವೆಲ್ ನಲ್ಲಿ ಒಂದೇ ಮೋಟಾರು ಆನ್ ಮಾಡಿರುವುದರಿಂದ ಪೈಪ್ ನಲ್ಲಿ ಕಡಿಮೆ ಪ್ರಮಾಣದಲ್ಲಿ ನೀರು ಹರಿಯುತ್ತದೆ. ಕೆರೆ ಭರ್ತಿಯಾಗಲು ಎಷ್ಟು ದಿನ ಬೇಕು. ಎರಡು ತಿಂಗಳಾದರೂ ಕೆರೆ ತುಂಬುವುದಿಲ್ಲ. ಇಲ್ಲಿಂದ ಮುಂದಿನ ಕೆರೆಗಳಿಗೆ ನೀರು ಯಾವಾಗ ಹರಿಯಬೇಕು. ಮೊದಲ ಜಾಕ್ ವೆಲ್ ನ ಇನ್ನೊಂದು ಮೋಟಾರು ಆನ್ ಮಾಡಿದರೆ ಎರಡು ಮೋಟಾರುಗಳ ಫ್ಯುಜರ್ ನಿಂದ ಪೈಪ್ ತುಂಬ ನೀರು ಬಂದರೆ ಕೆರೆ ತುಂಬಿಸಬಹುದು. ಇಲ್ಲಿಂದ ಮುಂದಿನ ಕೆರೆಗಳಿಗೆ ನೀರು ಹರಿಸಬಹುದು ಎಂದರು.

ಅಲ್ಲದೇ ಮಲ್ಲಶೆಟ್ಟಿಹಳ್ಳಿಯ ಎರಡನೇ ಜಾಕ್ ವಾಲ್ ನಲ್ಲಿರುವ ಮೂರು ಮೋಟಾರುಗಳಲ್ಲಿ ಎರಡು ಕೆಟ್ಟಿವೆ. ಒಂದು ಸುಸ್ಥಿತಿಯಲ್ಲಿದೆ. ಕೆಟ್ಟಿರುವ ಎರಡು ಮೋಟಾರುಗಳನ್ನು ಕೂಡಲೇ ದುರಸ್ತಿ ಮಾಡಬೇಕು. ಇಲ್ಲಿನ ಕೆರೆ ತುಂಬಿದ ಬಳಿಕ ಮುಂದಿನ ಕೆರೆಗಳಿಗೆ ನೀರು ತುಂಬಿಸಿ ರೈತರಿಗೆ ನೆರವಾಗುವ ಕೆಲಸ ಮಾಡಬೇಕೆಂದು ಇಂಜಿನಿಯರ್ ಮತ್ತು ಗುತ್ತಿಗೆದಾರರಿಗೆ ತಾಕೀತು ಮಾಡಿದರು.

22 ಕೆರೆಗಳ ರಾಜನಹಳ್ಳಿ ಏತ ನೀರಾವರಿ ಯೋಜನೆ ವ್ಯಾಪ್ತಿಯ ಪೈಪ್ ಲೈನ್ ಮಾರ್ಗದ ಅಲ್ಲಲ್ಲಿ ಸಣ್ಣಪುಣ್ಣ ಪೈಪ್ ನಲ್ಲಿ ಸಮಸ್ಯೆಗಳು ಇದ್ದು, ಅಧಿಕಾರಿಗಳು ಕೂಡಲೇ ದುರಸ್ತಿಗೊಳಿಸಿ ಸಮರ್ಪಕವಾಗಿ ಕೆರೆಗಳಿಗೆ ನೀರು ತುಂಬಿಸುವ ಕೆಲಸ ಮಾಡಬೇಕು. ಜಗಳೂರು ಮತ್ತು ಭರಮಸಾಗರ ಕೆರೆಗಳಿಗೆ ಸಮರ್ಪಕವಾಗಿ ನೀರು ಹರಿಯುತ್ತಿರುವಂತೆ ಈ ಭಾಗದ 22 ಕೆರೆಗಳನ್ನು ತುಂಬಿಸುವ ರಾಜನಹಳ್ಳಿ ಏತ ನೀರಾವರಿ ಯೋಜನೆಯ ಕೆರೆಗಳಿಗೆ ನೀರು ಹರಿಯುವಂತೆ ಕ್ರಮ ವಹಿಸಬೇಕೆಂದು ಸೂಚನೆ ನೀಡಿದರು.

ಈ ಯೋಜನೆಯ ಆರಂಭದಲ್ಲಿ ಗುತ್ತಿಗೆದಾರರು ಕಳಪೆ ಕಾಮಗಾರಿ ಮಾಡಿದ ಪರಿಣಾಮ ಆಗಾಗ ಪೈಪ್ ಲೈನ್ ಹೊಡೆದು ಮಳೆಗಾಲದಲ್ಲಿ 22 ಕೆರೆಗಳಿಗೆ ಸಂಪೂರ್ಣ ನೀರು ತುಂಬಿಸಲು ಆಗುತ್ತಿಲ್ಲ. ಈ ನಿಟ್ಟಿನಲ್ಲಿ ಹೊಸ ಪೈಪ್ ಲೈನ್ ಕಾಮಗಾರಿ ಮಾಡಿದರೆ ಕೆರೆಗಳಿಗೆ ಸಮರ್ಪಕವಾಗಿ ನೀರು ತುಂಬಿಸಬಹುದು ಎಂದು ಅವರು ಹೇಳಿದರು.

ಈ ಬಗ್ಗೆ ಸಿರಿಗೆರೆ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಅವರೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಲೋಕಸಭಾ ಸದಸ್ಯರಾದ ಡಾ.ಪ್ರಭಾ ಮಲ್ಲಿಕಾರ್ಜುನ್, ನಾವು ಚರ್ಚಿಸಿದ ಬಳಿಕ ಮುಖ್ಯಮಂತ್ರಿಗಳು ಮತ್ತು ಜಲಸಂಪನ್ಮೂಲ ಸಚಿವರ ಮೇಲೆ ಒತ್ತಡ ಹಾಕಿ ರೈತರಿಗೆ ನೀರೊದಗಿಸುವ ಕೆಲಸ ಮಾಡುವುದಾಗಿ ಶಾಸಕ ಬಸವಂತಪ್ಪ ಅವರಿಗೆ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಎಪಿಎಂಸಿ ಅಧ್ಯಕ್ಷ ಚಂದ್ರಣ್ಣ, ಶಿವು ಪ್ರಕಾಶ್ ಪಾಟೀಲ್ ಹಾಜರಿದ್ದರು.






## ಯೋಗ ದಿನಾಚರಣೆಯಲ್ಲಿ ಮುಖ್ಯಮಂತ್ರಿ

ಬಳ್ಳಾರಿ, ಜೂ. 21 - ಜಿಲ್ಲಾ ಪಂಚಾಯಿತಿ, ಜಿಲ್ಲಾಡಳಿತದ ವತಿಯಿಂದ ತೋರಣಗಲ್‌ನ ಜಿಂದಾಲ್ ಕಂಪನಿಯಲ್ಲಿ ಆಯೋಜಿಸಿದ್ದ 10 ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗವಹಿಸಿದ್ದರು.

ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ, ಸಚಿವ ಸಂತೋಷ ಲಾಡ್, ಸಂಸದ ತುಕಾರಾಂ, ನಟಿ ಶ್ರೀಲೀಲಾ ಭಾಗಿಯಾಗಿದ್ದರು.

ಬಳ್ಳಾರಿಯ ಹಲವು ಶಾಲೆಗಳ ವಿದ್ಯಾರ್ಥಿಗಳು, ಅಧಿಕಾರಿ ವರ್ಗದವರೂ ನೂರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಮಾನಸಿಕ ಮತ್ತು ದೈಹಿಕ ಆರೋಗ್ಯ ವೃದ್ಧಿಗಾಗಿ ಯೋಗ ಒಂದು ಪರಿಣಾಮಕಾರಿ ಸಾಧನ. ಇಂದು ಅಂತರರಾಷ್ಟ್ರೀಯ ಯೋಗ ದಿನ. ಇಡೀ ಜಗತ್ತು ಭಾರತದ ಕೊಡುಗೆಯಾದ ಯೋಗದ ಮಹತ್ವವನ್ನು ಅರಿತು ಅನುಸರಿಸುತ್ತಿದೆ ಎಂದು ಸಿದ್ದರಾಮಯ್ಯ ಹೇಳಿದರು.

ಭಾರತವು ಜಗತ್ತಿಗೆ ಪರಿಚಯಿಸಿದ ಅನನ್ಯ ಸಾಧನ ಯೋಗ. ಯೋಗಾಭ್ಯಾಸ ಮಾಡುವುದರಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯ ವೃದ್ಧಿ ಸಾಧ್ಯ. ನಿತ್ಯ ಜೀವನಕ್ಕೆ ಬೇಕಿರುವ ಏಕಾಗ್ರತೆ, ಸಂಯಮ, ಒತ್ತಡ ನಿರ್ವಹಣೆಯ ಕೌಶಲ್ಯಗಳು ಯೋಗದಿಂದ ಲಭಿಸುತ್ತವೆ. ಯೋಗದ ಮೂಲಕ ರೋಗಮುಕ್ತವಾದ ನೆಮ್ಮದಿಯ ಬದುಕು ಕಂಡುಕೊಳ್ಳೋಣ ಎಂದೂ ಅವರು ಹೇಳಿದರು.

## ಜಾಗತಿಕ ಒಳಿತಿಗಾಗಿ ಯೋಗ ಪ್ರಮುಖ ಮಾರ್ಗ : ಪ್ರಧಾನಿ ಮೋದಿ

ಶ್ರೀಗನರ, ಜೂ. 21 – ಜಾಗತಿಕ ಒಳಿತಿಗಾಗಿ ಯೋಗ ಪ್ರಮುಖ ಮಾರ್ಗ ಎಂದು ವಿಶ್ವ ಭಾವಿಸುತ್ತಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ ಶ್ರೀನಗರದ ದಾಲ್ ಲೇಕ್ ದಂಡೆಯ ಮೇಲೆ ಆಯೋಜಿಸಲಾಗಿದ್ದ 10ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ನೇತೃತ್ವ ವಹಿಸಿ ಅವರು ಮಾತನಾಡಿದರು.

ಯೋಗ ಕೇವಲ ಜ್ಞಾನವಷ್ಟೇ ಅಲ್ಲ, ಅದು ವಿಜ್ಞಾನವೂ ಆಗಿದೆ. ಇದು ಕೇವಲ ದೇವರ ಕಡೆಗಿನ ಅಧ್ಯಾತ್ಮಿಕ ಯಾತ್ರೆಯಷ್ಟೇ ಅಲ್ಲ. ಯೋಗ ವೈಯಕ್ತಿಕ ಬೆಳವಣಿಗೆಯ ಭಾಗವೂ ಆಗಿದೆ ಎಂದು ಮೋದಿ ಹೇಳಿದರು.

ಬಯಲು ಪ್ರದೇಶದಲ್ಲಿ ಯೋಗ ಕಾರ್ಯಕ್ರಮ ಆಯೋಜಿಸಲಾಗಿತ್ತು ಆದರೆ, ಬೆಳಿಗ್ಗೆ ಮಳೆ ಸುರಿದ ಕಾರಣ, ಕಾರ್ಯಕ್ರಮವನ್ನು ಒಳಾಂಗಣಕ್ಕೆ ಬದಲಿಸಲಾಯಿತು. ಮಳೆಯ ನಡುವೆಯೇ ವಿದ್ಯಾರ್ಥಿಗಳು ಯೋಗ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯೋಗಾಸನಗಳನ್ನು ಪ್ರದರ್ಶಿಸಿದರು.

## ವಿಶ್ವಾದ್ಯಂತ ಯೋಗ ದಿನದ ಸಂಭ್ರಮ : ವಿವಿಧ ದೇಶಗಳ ಯೋಗಾಸಕ್ತರು ಭಾಗಿ

ನ್ಯೂಯಾರ್ಕ್, ಜೂ. 21-ವಿಶ್ವದಾದ್ಯಂತ ಯೋಗಾಸಕ್ತರು ಹತ್ತನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಯಲ್ಲಿ ಸಂಭ್ರಮದಿಂದ ಭಾಗಿಯಾಗಿದ್ದಾರೆ.

ನ್ಯೂಯಾರ್ಕ್‌ನಲ್ಲಿರುವ ಭಾರತೀಯ ರಾಯಭಾರಿ ಕಚೇರಿ ಹಾಗೂ ಟೈಮ್ಸ್ ಸ್ಕ್ವೇರ್ ಅಲೈಯನ್ಸ್ ಸಹಭಾಗಿತ್ವದಲ್ಲಿ ಟೈಮ್ಸ್ ಸ್ಕ್ವೇರ್‌ನಲ್ಲಿ ವಿಶೇಷ ಯೋಗ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಯೋಗ ದಿನದಂದು ತಾಪಮಾನ ವಾಡಿಕೆಗಿಂತ ಹೆಚ್ಚಾಗಿದ್ದರೂ ಸಹ, ಸಮಾಜದ ವಿವಿಧ ವರ್ಗಗಳು ಹಾಗೂ ವಿವಿಧ ದೇಶಗಳ ಜನರು ಯೋಗ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.


ವಾಷಿಂಗ್ಟನ್‌ನಲ್ಲಿ ನಡೆದ ಯೋಗ ಕಾರ್ಯಕ್ರಮದಲ್ಲಿ ಅಮೆರಿಕದಲ್ಲಿರುವ ಭಾರತದ ಉಪ ರಾಯಭಾರಿ ಶ್ರೀಪ್ರಿಯ ರಂಗನಾಥನ್ ಅವರು ಮಾತನಾಡಿದರು. ಪ್ರಾರ್ಥನೆ ಹಾಗೂ ಭಾರತ ಶಾಸ್ತ್ರೀಯ ನೃತ್ಯದೊಂದಿಗೆ ಕಾರ್ಯಕ್ರಮ ಆರಂಭವಾಯಿತು.

ಇಸ್ರೇಲ್‌ನ ಟೆಲ್ ಅವೀವ್‌ನಲ್ಲಿರುವ ಪೆರೆಸ್ ಸೆಂಟರ್ ಫಾರ್ ಪೀಸ್ ಅಂಡ್ ಇನ್ನೋವೇಷನ್‌ನಲ್ಲಿ ಯೋಗ ಕಾರ್ಯಕ್ರಮ ಆಯೋಜಿಸಲಾಗಿತ್ತು. ದೇಶದ ಪ್ರಥಮ ಮಹಿಳೆ ಮಿಖಲ್ ಹೆರ್ಜೋಗ್ ಅವರು ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದರು.

ನೇಪಾಳದಲ್ಲಿರುವ ಭಾರತದ ರಾಯಭಾರಿ ಕಚೇರಿಯು ಪೊಖಾರಾದ ಮೂರು ಜನಪ್ರಿಯ ತಾಣಗಳಲ್ಲಿ ಯೋಗ ಕಾರ್ಯಕ್ರಮ ಆಯೋಜಿಸಿತ್ತು. ಶ್ರೀಲಂಕಾದ ಭಾರತೀಯ ರಾಯಭಾರಿ ಕಚೇರಿಯು ಜಾಫ್ನಾ ಹಾಗೂ ಕ್ಯಾಂಡಿ ಸೇರಿದಂತೆ ಹಲವೆಡೆ ಯೋಗ ಕಾರ್ಯಕ್ರಮಗಳನ್ನು ಆಯೋಜಿಸಿತ್ತು.

# ಲಿಂಗಾಯತರಲ್ಲಿ ತಾತ್ವಿಕ ಹೊಂದಾಣಿಕೆ ಇಲ್ಲ

### ಬಸವ ತತ್ವ ಶರಣ ಜಾಗೃತಿ ಕಾರ್ಯಾಗಾರದಲ್ಲಿ ಶಿವಾನಂದ ಶ್ರೀ ಗುರೂಜಿ ಅಭಿಮತ



ಚಿತ್ರದುರ್ಗ, ಜೂ.21- ಲಿಂಗಾಯತ ಧರ್ಮದಲ್ಲಿ ಇನ್ನೂ ತಾತ್ವಿಕ ಹೊಂದಾಣಿಕೆ ಇಲ್ಲ. ಆದ್ದರಿಂದ ಅರಿವಿನ ಕೊರತೆಗೆ ಮದ್ದನ್ನು ಕಂಡುಹಿಡಿದು ಜಾಗೃತಿ ಮೂಡಿಸುವ ಪ್ರಯತ್ನ ನಡೆಸ ಬೇಕಿದೆ ಎಂದು ಕುಂಬಳೂರಿನ ಬಸವ ಗುರುಕುಲದ ಮುಖ್ಯಸ್ಥರಾದ ಶ್ರೀ ಶಿವಾನಂದ ಗುರೂಜಿ ಅಭಿಪ್ರಾಯಪಟ್ಟರು.

ನಗರದ ಮುರುಘರಾಜೇಂದ್ರ ಬೃಹನ್ಮಠದ ಅಲ್ಲಮಪ್ರಭು ಸಂಶೋಧನಾ ಕೇಂದ್ರದಲ್ಲಿ ಏರ್ಪಡಿಸಿದ್ದ ಎರಡು ದಿನಗಳ ಬಸವ ತತ್ವ ಶರಣ ಜಾಗೃತಿ ಕಾರ್ಯಾಗಾರದ ಉದ್ಘಾಟನಾ ಸಮಾರಂಭದಲ್ಲಿ ಶ್ರೀಗಳು ಮಾತನಾಡಿದರು.

ಬಸವ ಧರ್ಮದಲ್ಲಿ ಲಿಂಗಾಯತ ತತ್ವ ಇದೆ ಎನ್ನುವುದನ್ನು ಅರಿಯಬೇಕಿದೆ. ನಮ್ಮ ಆಚರಣೆಗಳು ಬಹುತೇಕ ಮೂಢನಂಬಿಕೆಯಿಂದ ಕೂಡಿದ್ದು, ನಾವು ಆಚರಿಸುವುದಲ್ಲದೇ ಬೇರೆಯವರಿಗೂ ಅದೇ ದಾರಿಗೆ ಕೊಂಡೊಯ್ಯುವ ಮೂಲಕ ಅಂಧ ಸಂಪ್ರದಾಯಕ್ಕೆ ಶರಣಾಗಿರುವುದರಿಂದ ತತ್ವ ಪ್ರಚಾರಕ್ಕೆ ಅಡಚಣೆಯಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಮುರುಘರಾಜೇಂದ್ರ ಮಹಾಲಿಂಗೇಶ್ವರ ಮಠದ ಬಸವಲಿಂಗ ಮೂರ್ತಿ ಶ್ರೀಗಳು ಮಾತನಾಡಿ, 12ನೇ ಶತಮಾನದ ಕ್ರಾಂತಿ ಕೇವಲ ಧರ್ಮ ಜಾಗೃತಿ ಆಗಿರದೇ ಸಾಮಾಜಿಕ ಸಮಾನತೆ ತರುವ ಪ್ರಜಾಪ್ರಭುತ್ವವಾದಿ ಜಾಗೃತಿಯ ಆಂದೋಲನವಾಗಿತ್ತು.

ಹಾಗಾಗಿ ಬಸವಾದಿ ಶರಣರ ವಿಚಾರ ಧಾರೆಗಳು ಕೇವಲ ಭಾರತಕ್ಕಷ್ಟೇ ಸೀಮಿತವಾಗದೇ, ವಿಶ್ವಕ್ಕೇ ತಲುಪಲು ಸಾಧ್ಯವಾಯಿತು ಎಂದರು.

ಕಲಬುರ್ಗಿ ಮರುಳಶಂಕರ ಗುರು ಪೀಠದ ಸಿದ್ಧಬಸವ ಕಬೀರ ಶ್ರೀಗಳು ಮಾತನಾಡಿ, ಲಿಂಗಾಯತರಲ್ಲಿ ಸಹಕಾರ ಭಾವನೆ ಇದೆ. ಆದರೆ ನಿಷ್ಠೆ ಹಾಗೂ ಏಕದೇವೋಪಾಸನೆ ಇರದ ಕಾರಣ ಅನೇಕ ತೊಡಕುಗಳು ಇವೆ ಎಂದರು.

ಬಸವಣ್ಣನವರು ಹೇಳಿದ ಹಾಗೆ ಅಂತರಂಗ, ಬಹಿರಂಗ ಶುದ್ಧಿಯ ಕೆಲಸ ಆಗಬೇಕಿದೆ. ಅದಕ್ಕಾಗಿ ತತ್ವ ಪ್ರಚಾರಕರು ಈ ಬಗ್ಗೆ ಗಮನ ಹರಿಸಬೇಕು ಎಂದು ಹೇಳಿದರು.

ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಮುರುಘರಾಜೇಂದ್ರ ಬೃಹನ್ಮಠ ಹಾಗೂ ಎಸ್.ಜೆ.ಎಂ. ವಿದ್ಯಾಪೀಠದ 'ಆಡಳಿತ ಮಂಡಳಿ ಸದಸ್ಯ ಡಾ. ಬಸವಕುಮಾರ ಶ್ರೀಗಳು, ಎಲ್ಲಿಯ ತನಕ ಅನುಭಾವಿಗಳಿಗೆ ಸಿಗಬೇಕಾದ ಗೌರವ, ಮನ್ನಣೆ ಸಿಗುವುದಿಲ್ಲವೋ, ಅಲ್ಲಿಯತನಕ ಧರ್ಮದ ಏಳಿಗೆ ಅಸಾಧ್ಯ ಎಂದು ಹೇಳಿದರು.

ಬಸವ ತತ್ವ ಸಮಾವೇಶದ ಸಂಘಟಕರಾದ ತಿಪ್ಪೇರುದ್ರ ಶ್ರೀಗಳು ಸೇರಿದಂತೆ, ಧಾರವಾಡ, ಹಿರೇಹೊನ್ನಿಹಳ್ಳಿ ಬಸವ ಮಂಟಪ ಚನ್ನಬಸವ ಶ್ರೀಗಳು, ಮುರುಘಾಮಠ ಗುರುಕುಲದ ಉಪನ್ಯಾಸಕ ಕಡೂರಿನ ಜಿ.ವಿ. ಮಂಜುನಾಥ ಸೇರಿದಂತೆ ಇತರರು ಉಪಸ್ಥಿತರಿದ್ದರು.

## 'ಮಹಾರಾಜ್' ಚಿತ್ರಕ್ಕೆ ಹೈಕೋರ್ಟ್ ಅನುಮತಿ

ಅಹಮದಾಬಾದ್, ಜೂ. 21 – ಮಹಾರಾಜ್ ಚಿತ್ರ ಬಿಡುಗಡೆಗೆ ವಿಧಿಸಲಾಗಿದ್ದ ತಡೆಯಾಜ್ಞೆಯನ್ನು ಗುಜರಾತ್ ಹೈಕೋರ್ಟ್ ತೆರವುಗೊಳಿಸಿದೆ. ಈ ಚಿತ್ರದಲ್ಲಿ ವೈಷ್ಣವ ಪುಷ್ಟಿಮಾರ್ಗ ಪಂಥಕ್ಕೆ ವಿರುದ್ಧವಾದ ಯಾವುದೇ ಅಂಶ ಇಲ್ಲ ಎಂದು ನ್ಯಾಯಾಲಯ ತಿಳಿಸಿದೆ.

ಚಲನಚಿತ್ರ ವೀಕ್ಷಿಸಿದ ಹೈಕೋರ್ಟ್, ಈ ಚಿತ್ರದಲ್ಲಿ ಆಕ್ಷೇಪಾರ್ಹವಾದ ಏನೂ ಇಲ್ಲ ಎಂದು ಹೇಳಿದೆ.

ಚಲನಚಿತ್ರವನ್ನು ನೆಟ್‌ಫ್ಲಿಕ್ಸ್‌ನಲ್ಲಿ ಬಿಡುಗಡೆ ಮಾಡಲಾಗುವುದು. ಚಿತ್ರ ಬಿಡುಗಡೆ ಪ್ರಶ್ನಿಸಿ ವೈಷ್ಣವ ಪುಷ್ಟಿಮಾರ್ಗದ ಕೆಲ ಸದಸ್ಯರು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು.

## ಜಿಲ್ಲೆಯ ಮಾಧ್ಯಮದವರ ಮಕ್ಕಳ ವಿದ್ಯಾರ್ಥಿ ವೇತನಕ್ಕೆ ಜನ ಕಲ್ಯಾಣ ಟ್ರಸ್ಟ್‌ನಿಂದ ಅರ್ಜಿ



ದಾವಣಗೆರೆ, ಜೂ. 21- ಡಾ. ಶಾಮನೂರು ಶಿವಶಂಕರಪ್ಪ ಜನಕಲ್ಯಾಣ ಟ್ರಸ್ಟ್ ವತಿಯಿಂದ ನೀಡುವ ವಿದ್ಯಾರ್ಥಿ ವೇತನಕ್ಕಾಗಿ ದಾವಣಗೆರೆ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪತ್ರಕರ್ತರ/ ಮಾಧ್ಯ ಮದವರ ಮತ್ತು ಮಾಧ್ಯಮ ಛಾಯಾಗ್ರಾಹಕರ ಮಕ್ಕಳಿಂದ ಅರ್ಜಿ ಆಹ್ವಾನಿಸಲಾಗಿದೆ. 2024-25ನೇ ಶೈಕ್ಷಣಿಕ ಅವಧಿಗೆ ಪ್ರವೇಶ ಪಡೆದ ಯಾವುದೇ ಶಾಲಾ- ಕಾಲೇಜುಗಳಲ್ಲಿ ವ್ಯಾ ಸಂಗ ಮಾಡುತ್ತಿರುವ, 2024-25ನೇ ಸಾಲಿನ ವಾರ್ಷಿಕ ಶುಲ್ಕಕ್ಕೆ ಅನುಗುಣವಾಗಿ ಟ್ರಸ್ಟ್ ವತಿ ಯಿಂದ ವಿದ್ಯಾರ್ಥಿ ವೇತನ ಪಡೆಯಬಹುದಾಗಿದೆ.

ಆಸಕ್ತ ಪ್ರತಿಭಾನ್ವಿತ ವಿದ್ಯಾರ್ಥಿ, ವಿದ್ಯಾರ್ಥಿನಿ ಯರು ಆಯಾ ಶಾಲಾ ಕಾಲೇಜುಗಳ ಮುಖ್ಯಸ್ಥರ ಮೂಲಕ ಕ್ರಮಬದ್ಧವಾದ ಪ್ರಮಾಣ ಪತ್ರ ಗಳೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.

ನಿಗದಿತ ಅರ್ಜಿ ಆನ್‌ಲೈನ್ ಮೂಲಕ ಸಲ್ಲಿಸಲು ಮತ್ತು ವಿವರಗಳಿಗಾಗಿ ಟ್ರಸ್ಟ್‌ನ ಅಂತರ್ಜಾಲ ತಾಣ www.ssjanakalyantrust.org ಸಂಪರ್ಕಿಸಿ. ಯಾವುದೇ ಪತ್ರ ವ್ಯವಹಾರ ಅಥವಾ ದೂರವಾಣಿ ಕರೆಗಳಿಗೆ ಉತ್ತರಿಸಲಾಗುವು ದಿಲ್ಲ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಜುಲೈ 31 ಕೊನೆ ದಿನಾಂಕ. ಶಾಸಕ, ಬಾಪೂಜಿ ವಿದ್ಯಾ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಶಾಮನೂರು ಶಿವಶಂಕರಪ್ಪ ಅವರ ಹೆಸರಿನಲ್ಲಿ, ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಶಿವರಾಜ ಪಾಟೀಲ್ ಅಧ್ಯಕ್ಷತೆಯಲ್ಲಿ ಈ ಟ್ರಸ್ಟ್ ರೂಪುಗೊಂಡಿದೆ.

## ಜಿಎಸ್‌ಟಿ ಸಮಿತಿಗೆ ಬಿಹಾರ ಉಪ ಮುಖ್ಯಮಂತ್ರಿ ಸಂಚಾಲಕ



ನವದೆಹಲಿ, ಜೂ. 21 – ಬಿಹಾರದ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಅವರನ್ನು ಜಿ. ಎಸ್.ಟಿ. ದರ ಪರಿಷ್ಕರಣೆ ಕುರಿತ ಸಚಿವರನ್ನು ಸಮಿತಿ ಸಂಚಾಲಕರಾಗಿ ನೇಮಿಸಲಾಗಿದೆ.

ಕರ್ನಾಟಕದ ಕಂದಾಯ ಸಚಿವ ಕೃಷ್ಣ ಬೈರೇಗೌಡ, ಉತ್ತರ ಪ್ರದೇಶದ ಹಣಕಾಸು ಸಚಿವ ಸುರೇಶ್ ಕುಮಾರ್ ಖನ್ನ, ಗೋವಾ ಸಾರಿಗೆ ಸಚಿವ ಮೌವಿನ್ ಗೊಡಿನ್ಹೊ, ರಾಜಸ್ಥಾನದ ವೈದ್ಯಕೀಯ ಸಚಿವ ಗಜೇಂದ್ರ ಸಿಂಗ್ ಅವರು ಸಮಿತಿಯ ಇತರ ಸದಸ್ಯರಾಗಿದ್ದಾರೆ.

ಸಮಿತಿಯಲ್ಲಿ ಪಶ್ಚಿಮ ಬಂಗಾಳದ ಹಣಕಾಸು ಸಚಿವ ಚಂದ್ರಿಮ ಭಟ್ಟಾಚಾರ್ಯ ಹಾಗೂ ಕೇರಳ ಹಣಕಾಸು ಸಚಿವ ಕೆ.ಎನ್. ಬಾಲಗೋಪಾಲ್ ಅವರೂ ಸಮಿತಿಯಲ್ಲಿದ್ದಾರೆ.

## ಮತ ನೀಡದವರಿಗೆ ಬಿಜೆಪಿ ಸಂಸದ ಎಚ್ಚರಿಕೆ

ಪೋರ್ಟ್ ಬ್ಲೇರ್, ಜೂ. 21 – ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ನೂತನ ಬಿಜೆಪಿ ಸಂಸದ ಬಿಷ್ಣು ಪಾದ ರೇ ಅವರು ತಮಗೆ ಮತ ನೀಡದವರನ್ನು ಎಚ್ಚರಿಸುತ್ತಿರುವ ವಿಡಿಯೋ ವೈರಲ್ ಆಗಿದೆ. ನಂತರ ಸ್ಪಷ್ಟನೆ ನೀಡಿರುವ ರೇ, ತಮ್ಮ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಲಾಗಿದೆ ಎಂದಿದ್ದಾರೆ.

ಜನರ ಕೆಲಸಗಳು ಈಡೇರಲಿವೆ. ಆದರೆ, ನಮಗೆ ಮತ ನೀಡಿದವರ ಪರಿಸ್ಥಿತಿ ಏನಾಗಲಿದೆ ಎಂಬುದನ್ನು ಅವರು ಯೋಚಿಸಬೇಕು ಎಂದು ಸಂಸದರು ಹೇಳಿದ್ದರು.


ನಂತರ ಸ್ಪಷ್ಟನೆ ನೀಡಿರುವ ಅವರು, ಹಿಂದಿನ ಕಾಂಗ್ರೆಸ್ ಆಡಳಿತ ಇದ್ದಾಗ ನಿಕೋಬಾರ್ ಜಿಲ್ಲೆಯಲ್ಲಿ ನಡೆಸಲಾಗಿದ್ದ ದುರಾಡಳಿತದ ಬಗ್ಗೆ ನಾನು ಮಾತನಾಡಿದ್ದೆ ಎಂದಿದ್ದಾರೆ.




ನೀರಿನ ಮಟ್ಟ : 119 ಅಡಿ 1 3/4 ಇಂಚು
ಒಳ ಹರಿವು : 562 ಕ್ಯೂಸೆಕ್ಸ್
ಹೊರ ಹರಿವು : 342 ಕ್ಯೂಸೆಕ್ಸ್
ಕಳೆದ ವರ್ಷ : 137 ಅಡಿ 1 ಇಂಚು


|| ಶ್ರೀ ಬನಶಂಕರಿ ದೇವಿ ಪ್ರಸನ್ನ || || ಶ್ರೀ ಅಬಲೂರು ಬಸವೇಶ್ವರ ಪ್ರಸನ್ನ ||

ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಜನನ : 12.08.1934
ಮರಣ : 15.06.2024

ಶ್ರೀ ಪ್ರಭು ಬಿ. ಪಾಟೀಲ್ ಮತ್ತು ಸಹೋದರಿಯರು
ಸಾ. ರಾಣೇಬೆನ್ನೂರು
ನಮ್ಮ ಪರಮಪೂಜ್ಯ ತಂದೆಯವರಾದ
ಲಿಂ. ಡಾ. ಬಿ.ಜಿ. ಪಾಟೀಲ್
(ಮಾಜಿ ಶಾಸಕರು, ರಾಣೇಬೆನ್ನೂರು ಹಾಗೂ ಅಖಂಡ ಧಾರವಾಡ ಜಿಲ್ಲಾ ಪರಿಷತ್ ಮಾಜಿ ಅಧ್ಯಕ್ಷರು)
ಇವರು ದಿನಾಂಕ : 15.06.2024ನೇ ಶನಿವಾರ ಬೆಳಿಗ್ಗೆ 2.30ಕ್ಕೆ ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಶಿವಗಣಾರಾಧನೆಯನ್ನು
ದಿನಾಂಕ : 23.06.2024ನೇ ರವಿವಾರ ಮಧ್ಯಾಹ್ನ 12.30ಕ್ಕೆ ರಾಣೇಬೆನ್ನೂರಿನ ರೈಲ್ವೆ ಸ್ಟೇಷನ್ ರಸ್ತೆಯಲ್ಲಿರುವ ವರ್ತಕರ ಸಂಘದ ಕಲ್ಯಾಣ ಮಂಟಪದಲ್ಲಿ ನೆರವೇರುವುದು. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ದುಃಖತಪ್ತರು : ಸಹೋದರ, ಸಹೋದರಿಯರು, ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಪಾಟೀಲ್ ಬಂಧುಗಳು ಹಾಗೂ ಆಪ್ತ ಮಿತ್ರರು.
ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

|| ಶ್ರೀ ಶಿವನಾರದ ಮುನಿ ಪ್ರಸನ್ನ ||

ಕೈಲಾಸ ಶಿವಗಣಾರಾಧನೆ ಆಹ್ವಾನ



ಜನನ 18.06.1944
ನಿಧನ 10.06.2024

ದಾವಣಗೆರೆ ತಾ|| ಎಲೆಬೇತೂರು ಗ್ರಾಮದ ವಾಸಿಗಳಾದ ಮರಕುಂಟೆಯಾನೆ
ಅಡ್ಡಮನಿ ಶರಣೆ ಸಿದ್ದಮ್ಮ ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 10.06.2024ನೇ ಸೋಮವಾರ ಬೆಳಿಗ್ಗೆ 10.10ಕ್ಕೆ ನನ್ನ ಪೂಜ್ಯ ಪತಿಯವರಾದ
ಶರಣ ಎಂ. ಪತ್ರಿಬಸಪ್ಪನವರು
ಕಾಂಗ್ರೆಸ್ ಹಿರಿಯ ಮುಖಂಡರು, ಎಲೆಬೇತೂರು
ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ : 22.06.2024ನೇ ಶನಿವಾರ ಬೆಳಿಗ್ಗೆ 10.30ಕ್ಕೆ ಶರಣ ಬಸವೇಶ್ವರ ಕಲ್ಯಾಣ ಮಂಟಪ, ಬಿ. ಕಲಪನಹಳ್ಳಿಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು :
ಮೃತರ ಧರ್ಮಪತ್ನಿ : ಅಡ್ಡಮನಿ ಸಿದ್ದಮ್ಮ, ಶ್ರೀಮತಿ ರತ್ನಮ್ಮ ಶ್ರೀ ಬಸವರಾಜಪ್ಪ ಮತ್ತು ಮಕ್ಕಳು, ಶ್ರೀಮತಿ ಲಲಿತಮ್ಮ ಶ್ರೀ ನಾಗರಾಜಪ್ಪ ಮತ್ತು ಮಕ್ಕಳು, ಶ್ರೀಮತಿ ನಿರ್ಮಲ ಶ್ರೀ ಮುರುಗೇಶ್, ಮರಕುಂಟೆಯಾನೆ ಅಡ್ಡಮನಿ ವಂಶಸ್ಥರು ಹಾಗೂ ಬಂಧು-ಮಿತ್ರರು. ಫೋ. : 99028 54934
ವಿ.ಸೂ. : ಆತ್ಮೀಯರೇ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.

ಕೊನೆಯ 3 ದಿನಗಳು ಮಾತ್ರ
ನ್ಯೂ ಲೈಫ್ ಎಕ್ಸಿಬಿಷನ್
BUILT FOR PERFECTION 2024



ಬೃಹತ್ ವಸ್ತು ಪ್ರದರ್ಶನ
ಫರ್ನಿಚರ್, ಇಂಟೀರಿಯರ್, ಲೈಫ್‌ಸ್ಟೈಲ್, ಹೋಂ ಅಪ್ಲೈಯನ್ಸಸ್, ಡೆಕೋರೇಷನ್ ಐಟಂ, ಎಲೆಕ್ಟ್ರಾನಿಕ್ಸ್, ಹೆಲ್ತ್‌ಕೇರ್, ಕಾಸ್ಮೆಟಿಕ್ಸ್, ಜ್ಯುವೆಲ್ಲರಿ ಡ್ರೆಸ್ ಮೆಟೀರಿಯಲ್, ಇತರೆ
ದಿನಾಂಕ : ಜೂನ್ 20 ರಿಂದ ಜೂನ್ 24ರ ವರೆಗೆ
ಸಮಯ : ಬೆಳಗ್ಗೆ 10-30 ರಿಂದ ರಾತ್ರಿ 8-30ರ ವರೆಗೆ
ಸ್ಥಳ : ತ್ರಿಶೂಲ್ ಕಲಾ ಭವನ, ಪಿ.ಬಿ. ರಸ್ತೆ, ದಾವಣಗೆರೆ
ಉಚಿತ ಪ್ರವೇಶ
5 ದಿನಗಳವರೆಗೆ ಮಾತ್ರ

ವೈವಾಹಿಕ ಬೆಳ್ಳಿ ಮಹೋತ್ಸವ- ಶುಭ ಹಾರೈಕೆ




ತಮ್ಮ ವೈವಾಹಿಕ ಜೀವನದ ಸಾರ್ಥಕ 25 ವಸಂತಗಳನ್ನು ಪೂರೈಸಿ, ವೈವಾಹಿಕ ಬೆಳ್ಳಿ ಮಹೋತ್ಸವ ಆಚರಿಸಿಕೊಳ್ಳುತ್ತಿರುವ ಶ್ರೀ ಪ್ರಭುದೇವ ಗನ್ನಿಮರ್ಚೆಂಟ್ಸ್ ಮಾಲೀಕರೂ, ಆತ್ಮೀಯರಾದ
ಶ್ರೀ ಜಿ. ಕರಿಬಸಪ್ಪ ಹಾಗೂ ಶ್ರೀಮತಿ ಪುಷ್ಪ
ದಂಪತಿಗೆ ವೈವಾಹಿಕ ವಾರ್ಷಿಕೋತ್ಸವದ ಹಾರ್ದಿಕ ಶುಭಾಶಯಗಳು. ಭಗವಂತನು ಅವರಿಗೆ ಆಯುರಾರೋಗ್ಯ-ಐಶ್ವರ್ಯ-ಸುಖ-ಶಾಂತಿ-ನೆಮ್ಮದಿ ನೀಡಲಿ. ದಾಂಪತ್ಯ ಜೀವನ ನೂರ್ಕಾಲ ಬಾಳಲಿ ಎಂದು ಶುಭ ಹಾರೈಸುತ್ತೇವೆ.

- ಎ.ಗೋವಿಂದರಾಜ್, ಲಕ್ಷ್ಮಿ ಅಂಡ್ ಕೋ
- ಎಂ.ಎಸ್.ಶರಣಪ್ಪ, ವಿಕಾಸ್ ಅಂಡ್ ಕೋ
- ಷಾ ಮಗನ್‌ಲಾಲ್ ಪೂಲ್‌ಚಂದ್, ರಾಕೇಶ್‌ಕುಮಾರ್ ವಿ ಜೈನ್
- ಅಮರೇಶ್ ಗಟ್ಟಿಗನೂರು, ಜಮೀನ್ದಾರರು
- ಶ್ರೀ ವಿಜಯ ಗನ್ನಿ ಟ್ರೇಡರ್ಸ್, ಜಿ. ರಾಮಮೂರ್ತಿ
- ಶ್ರೀ ಮಹಾಲಕ್ಷ್ಮಿ ಗನ್ನಿ ಮರ್ಚೆಂಟ್ಸ್, ಜಿ.ವೈ ಮಲ್ಲಣ್ಣ
- ಶ್ರೀ ಆನಂದ & ಕೋ. ಹೆಚ್.ಎನ್. ಶಿವಲಿಂಗಪ್ಪ
- ಶ್ರೀಶೈಲ & ಕೋ. ಎಂ. ಮಲ್ಲಿಕಾರ್ಜುನ
- ಶ್ರೀ ಪ್ರಶಾಂತ್ ಗನ್ನಿ ಮರ್ಚೆಂಟ್ಸ್, ಆರ್. ಶಂಕರಪ್ಪ
- ಶ್ರೀ ವಿನಾಯಕ ಗನ್ನಿ ಮರ್ಚೆಂಟ್ಸ್, ಎಂ.ವಿ. ಮಲ್ಲಿಕಾರ್ಜುನ
- ಟಿ.ಎಂ. ಗನ್ನಿ ಮರ್ಚೆಂಟ್ಸ್, ಟಿ. ಮೀರಾಸಾಬ್
- ಮೆ|| ಚನ್ನಬಸವ & ಕೋ. ಚನ್ನಪ್ಪ ಕೋಳೂರ
- ಶ್ರೀ ಪಿ. ದುಗ್ಗಪ್ಪ ಗನ್ನಿ ಪ್ರಾಡಕ್ಟ್ಸ್, ವಸಂತಕುಮಾರ್
- ಶ್ರೀ ವೀರಭದ್ರೇಶ್ವರ ಗನ್ನಿ ಮರ್ಚೆಂಟ್ಸ್, ಆರ್.ಎಸ್ ಗೌಡರ್
- ಜಿ.ಬಿ ಬಸವರಾಜ್, ಬಸವೇಶ್ವರ ಗ್ಯಾರೇಜ್
- ಶ್ರೀ ಭವಾನಿ ಟ್ರೇಡರ್ಸ್ ಗನ್ನಿ ಮರ್ಚೆಂಟ್ಸ್, ಬಿ.ಎಲ್. ಪ್ರಭು


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas